# ಸಿ.ಎನ್. ರಾಮಚಂದ್ರನ್ ಅವರ
# ‘ಆಖ್ಯಾನ–ವ್ಯಾಖ್ಯಾನ’

ಟಿ.ಪಿ.ಅಶೋಕ

ಕನ್ನಡದ ಹಿರಿಯ ವಿಮರ್ಶಕ ಡಾ.ಸಿ.ಎನ್. ರಾಮಚಂದ್ರನ್ ಅವರ ‘ಆಖ್ಯಾನ–ವ್ಯಾಖ್ಯಾನ’ ಎಂಬ ಕೃತಿಗೆ ಈ ಸಾಲಿನ ಕೇಂದ್ರ ಸಾಹಿತ್ಯ ಅಕಾದೆಮಿಯ ಪ್ರಶಸ್ತಿ ಬಂದಿದೆ. ಆ ಕೃತಿಯ ಕುರಿತು ಶ್ರೀ ಟಿ.ಪಿ.ಆಶೋಕ ಅವರು ಬರೆದ ಲೇಖನವನ್ನು ಇಲ್ಲಿ ಪ್ರಕಟಿಸುವ ಮೂಲಕ ನಮ್ಮ ಸಂತಸವನ್ನು ಹಂಚಿಕೊಳ್ಳುತ್ತಿದ್ದೇವೆ.

ಸಂಸ್ಕೃತ, ಕನ್ನಡ ಮತ್ತು ಇಂಗ್ಲಿಷ್ ಭಾಷೆ–ಸಾಹಿತ್ಯಗಳನ್ನು ಆಳವಾಗಿ, ಆಪ್ತವಾಗಿ ಬಲ್ಲ ಡಾ. ಚಿಲಕುಂದ(ಸಿ) ನಾಗಪ್ಪಶಾಸ್ತ್ರಿ(ಎನ್) ರಾಮಚಂದ್ರನ್ ಅವರು ನಮ್ಮ ನಡುವಿನ ಅಪರೂಪದ ವಿದ್ವಾಂಸರು ಮತ್ತು ವಿಮರ್ಶಕರು. ಆಧುನಿಕ ಕನ್ನಡ ವಿಮರ್ಶೆಯ ಸಂದರ್ಭದಲ್ಲಿ ದಿವಂಗತ ಕೀರ್ತಿನಾಥ ಕುರ್ತಕೋಟಿ ಅವರೊಂದಿಗೆ ಹೋಲಿಸಬಹುದಾದ ವಿರಳರಲ್ಲಿ ರಾಮಚಂದ್ರನ್ ಕೂಡ ಒಬ್ಬರು. ಸಮಕಾಲೀನ ವಿಮರ್ಶೆಯ ಬಹುಪಾಲು ಆಧುನಿಕ ಸಾಹಿತ್ಯದ ಮೇಲೇ ಕೇಂದ್ರೀಕರಿಸಿರುವ ನಮ್ಮ ಸಂದರ್ಭದಲ್ಲಿ ರಾಮಚಂದ್ರನ್ ಅವರ ಬರವಣಿಗೆಯ ಬೀಸು ಮತ್ತು ಹರಹು ಬೆರಗು ಹುಟ್ಟಿಸುವಂತಿದೆ. ಕುರ್ತಕೋಟಿಯವರಂತೆ ರಾಮಚಂದ್ರನ್ ಕೂಡ ಅಭಿಜಾತ ಮತ್ತು ಜಾನಪದ ಎರಡೂ ಲೋಕಗಳೊಂದಿಗೆ ಅರ್ಥಪೂರ್ಣ ಅನುಸಂಧಾನ ನಡೆಸಿದ್ದಾರೆ. ಆಧುನಿಕಪೂರ್ವ ಮತ್ತು ಆಧುನಿಕ ಸಾಹಿತ್ಯ ಎರಡರಲ್ಲೂ ಅವರು ತಮ್ಮ ಪರಿಣತಿಯನ್ನು ತೋರಿದ್ದಾರೆ. ಅವರ ಬರವಣಿಗೆಯ ವ್ಯಾಪ್ತಿ ತುಂಬ ವಿಶಾಲವಾದದ್ದು. ಕೃತಿವಿಮರ್ಶೆ ಮತ್ತು ಸಾಹಿತ್ಯ ಮೀಮಾಂಸೆ ಎರಡರಲ್ಲೂ ಅವರ ಸಾಧನೆ ಗಣನೀಯವಾದದ್ದು. ಪ್ರಾಧ್ಯಾಪಕನ ಶಿಸ್ತು ಮತ್ತು ಸಾಹಿತ್ಯ ವಿದ್ಯಾರ್ಥಿಯ ಬೆರಗು ಎರಡೂ ಹದವಾಗಿ ಬೆರೆತಿರುವ ರಾಮಚಂದ್ರನ್ ಅವರ ಬರವಣಿಗೆ ನಿಸ್ಸಂದೇಹವಾಗಿ ಕನ್ನಡ ವಿಮರ್ಶೆಯನ್ನು ಬೆಳಗಿದೆ ಮತ್ತು ಬೆಳೆಸಿದೆ. ಅವರು ಈವರೆಗೆ ಕನ್ನಡದಲ್ಲಿ ಹದಿನೇಳು ವಿಮರ್ಶಾ ಕೃತಿಗಳನ್ನೂ, ಇಂಗ್ಲಿಷಿನಲ್ಲಿ ಆರು ಕೃತಿಗಳನ್ನೂ ಪ್ರಕಟಿಸಿದ್ದಾರೆ. ಹಲವಾರು ಕನ್ನಡ ಕೃತಿಗಳನ್ನು ಯಶಸ್ವಿಯಾಗಿ ಇಂಗ್ಲಿಷಿಗೆ ಅನುವಾದಿಸಿರುವ ಶ್ರೇಯಸ್ಸೂ ಇವರದು. 2013 ರ ಕೇಂದ್ರ ಸಾಹಿತ್ಯ



ಅಕಾಡೆಮಿಯ ಪ್ರಶಸ್ತಿಯ ಗೌರವ ಪಡೆದಿರುವ ‘ಆಖ್ಯಾನ–ವ್ಯಾಖ್ಯಾನ’ (2011, ಸಪ್ನ ಬುಕ್ ಹೌಸ್, ಬೆಂಗಳೂರು, ಪುಟಗಳು 448, ಬೆಲೆ ರೂ.250) ಅವರ ಈಚಿನ ಪುಸ್ತಕ. ಇದು ಇಪ್ಪತ್ತೈದು ವಿದ್ವತ್ಪೂರ್ಣ ಲೇಖನಗಳ ಸಂಗ್ರಹ.

ರಾಮಚಂದ್ರನ್ ಅವರ ಬರವಣಿಗೆ ವಿಮರ್ಶೆಯ ಪ್ರಕಾರಕ್ಕೆ ಮಾತ್ರ ಸೀಮಿತವಾಗಿಲ್ಲ. ಅವರು ‘ಶೋಧ’ ಎಂಬ ಕಾದಂಬರಿಯನ್ನೂ, ‘ಕಸಾಂದ್ರ’ ಎಂಬ ಕಥಾಸಂಕಲನವನ್ನೂ ಪ್ರಕಟಿಸಿದ್ದಾರೆ. ಕನ್ನಡ ಒಳ್ಳೆಯ ನವ್ಯ ಕಾದಂಬರಿಗಳಲ್ಲಿ ‘ಶೋಧ’ ಕೂಡ ಒಂದು. ಅವರ ಎರಡು ರೇಡಿಯೋ ನಾಟಕಗಳೂ ಪುಸ್ತಕ ರೂಪದಲ್ಲಿ ಹೊರಬಂದಿವೆ. ಈಚೆಗೆ ಪ್ರಕಟವಾಗಿರುವ ‘ನೆರಳುಗಳ ಬೆನ್ನುಹತ್ತಿ’ (2013, ಅಂಕಿತ ಪುಸ್ತಕ, ಬೆಂಗಳೂರು) ಎಂಬ ಅವರ ಆತ್ಮಕಥನವು ಶ್ರೀಯುತರು ಓರ್ವ ವ್ಯಕ್ತಿಯಾಗಿ ಮತ್ತು ಲೇಖಕರಾಗಿ ಬೆಳೆದು ಬಂದ ಪ್ರಕ್ರಿಯೆಯನ್ನು ಸೂಕ್ಷ್ಮವಾದ, ಆಪ್ತವಾದ ವಿವರ–ವರ್ಣನೆಗಳಲ್ಲಿ ಲವಲವಿಕೆಯಿಂದ ನಿರೂಪಿಸುತ್ತದೆ. ಆಧುನಿಕ ವಿಮರ್ಶಾ ಪ್ರಸ್ಥಾನಗಳನ್ನೆಲ್ಲ ಸರಳವಾಗಿ ಕನ್ನಡಕ್ಕೆ ಪರಿಚಯ ಮಾಡಿಕೊಟ್ಟಿರುವ ರಾಮಚಂದ್ರನ್ ತಮ್ಮ ಕೃತಿ ಪರಿಶೀಲನೆಯ ಪ್ರತಿಭೆಯನ್ನು ‘ಶಿಲ್ಪವಿನ್ಯಾಸ’, ‘ಸ್ವರೂಪ’, ‘ಆಶಯ–ಆಕೃತಿ’, ‘ಪರಂಪರೆ–ಪ್ರತಿರೋಧ’, ‘ರಕ್ತಿ–ರೂಪಣೆ’, ‘ಪ್ರಮಾಣ ಮತ್ತು ಪರಿಪ್ರೇಕ್ಷ್ಯ’ ಮುಂತಾದ ಕೃತಿಗಳಲ್ಲಿ ತೋರಿದ್ದಾರೆ. ಶಿವರಾಮ ಕಾರಂತ, ತ್ರಿವೇಣಿ, ಕಂಬಾರರನ್ನು ಕುರಿತ ಪೂರ್ಣ ಪ್ರಮಾಣದ ಕೃತಿಗಳನ್ನು ರಚಿಸಿರುವ ಶ್ರೀಯುತರು ಕಥನಶಾಸ್ತ್ರದ ಹಿನ್ನೆಲೆಯಲ್ಲಿ ಕಾರಂತರ ಕಾದಂಬರಿಗಳನ್ನು ಚರ್ಚಿಸಿರುವ ರೀತಿ ಕನ್ನಡ ವಿಮರ್ಶೆಗೇ ಹೊಸದಾಗಿದೆ. ‘ಹೊಸ ಮಡಿಯ ಮೇಲೆ ಚದುರಂಗ’ ಎಂಬ ಕೃತಿಯು ವಿಶ್ವದ ಇಪ್ಪತ್ತೈದು ವೈವಿಧ್ಯಮಯ ಮೌಖಿಕ ಮಹಾಕಾವ್ಯಗಳ ಅಧ್ಯಯನವಾಗಿದ್ದು ಜಾನಪದ ಅಧ್ಯಯನ ಕ್ಷೇತ್ರದಲ್ಲೇ ಒಂದು ಅಪೂರ್ವ ಪುಸ್ತಕವಾಗಿದೆ. ಸಮಕಾಲೀನ ಆಗುಹೋಗುಗಳಿಗೂ ರಾಮಚಂದ್ರನ್ ತುಂಬಾ ಸೂಕ್ಷ್ಮವಾಗಿ ಪ್ರತಿಕ್ರಿಯಿಸುತ್ತಾ, ಪ್ರತಿಸ್ಪಂದಿಸುತ್ತಾ ಬಂದಿದ್ದಾರೆ. ಕೇವಲ ತಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ದಾಖಲಿಸದೆ ಒಂದು ವಿಷಯದ–ವಿವಾದದ ಹಲವು ಆಯಾಮಗಳನ್ನು ಬೆದಕಿ ನೋಡುವ ಸಾವಧಾನವನ್ನು ಅವರು ಯಾವಾಗಲೂ ತೋರುತ್ತ ಬಂದಿದ್ದಾರೆ. ರಾಮಚಂದ್ರನ್ ಅವರ ಬದುಕು ಬರಹಗಳನ್ನು ಕುರಿತು ದೇಶ ವಿದೇಶಗಳ ಹಲವು ಗಣ್ಯರು ಬರೆದಿರುವ ನಲವತ್ತಕ್ಕೂ ಹೆಚ್ಚಿನ ಸಂಖ್ಯೆಯ ಇಂಗ್ಲಿಷ್–ಕನ್ನಡ ಲೇಖನಗಳ ಮತ್ತು ಸಂದರ್ಶನಗಳ ಸಂಪುಟ ‘ರೂಪಾಂತರ’ ಡಾ.ವಿವೇಕ ರೈ ಅವರ ಸಂಪಾದಕತ್ವದಲ್ಲಿ ಇತ್ತೀಚೆಗೆ ಪ್ರಕಟವಾಗಿದೆ (2013, ಅಂಕಿತ ಪುಸ್ತಕ, ಬೆಂಗಳೂರು).

‘ಆಖ್ಯಾನ–ವ್ಯಾಖ್ಯಾನ’ದಲ್ಲಿ ಮೂರು ಭಾಗಗಳಿವೆ. ಮೊದಲ ಭಾಗವು ಹದಿಮೂರು ಲೇಖನಗಳನ್ನೂ, ಎರಡನೆಯ ಭಾಗವು ಹತ್ತು ಲೇಖನಗಳನ್ನೂ ಒಳಗೊಂಡಿದ್ದು, ಮೂರನೆಯ ಭಾಗವು ಎರಡು ಲೇಖನಗಳನ್ನು ಒಳಗೊಂಡಿದ್ದು

ಸಣ್ಣಕತೆಗಳ ಅಧ್ಯಯನಕ್ಕೆ ಮೀಸಲಾಗಿದೆ. ಭಗವದ್ಗೀತೆ, ಅಭಿಜ್ಞಾನ ಶಾಕುಂತಲಂ, ರಾಮಾಯಣ ಪರಂಪರೆ ಕುರಿತ ಲೇಖನಗಳು ಇರುವಂತೆ ಭಕ್ತಿಸಾಹಿತ್ಯ, ಜನಪದ ಸಾಹಿತ್ಯ ಕುರಿತ ಲೇಖನಗಳು ಈ ಪುಸ್ತಕದಲ್ಲಿ ಇವೆ. ಹಾಗೆಯೇ ಬೇಂದ್ರೆ, ಗೋಕಾಕ್, ನರಸಿಂಹಸ್ವಾಮಿ, ಕಣವಿ, ರಾಜರತ್ನಮ್ ಮುಂತಾದ ಆಧುನಿಕ ಕಾಲದ ಹಿರಿಯ ಬರಹಗಾರರನ್ನು ಕುರಿತ ಲೇಖನಗಳು ಇಲ್ಲಿ ಸೇರ್ಪಡೆಯಾಗಿವೆ. ಕನ್ನಡ ಸಾಹಿತ್ಯದ ಇತ್ತೀಚಿನ ಒಲವುಗಳನ್ನೂ, ಜಿ.ಎಸ್.ಶಿವರುದ್ರಪ್ಪ, ದೇಜಗೌ ವಿಮರ್ಶೆಗಳನ್ನೂ, ಜಯಂತ ಕಾಯ್ಕಿಣಿ, ವಿವೇಕ ಶಾನಭಾಗರಂಥ ಇವತ್ತಿನ ಬರಹಗಾರರ ಕೃತಿಗಳನ್ನೂ ರಾಮಚಂದ್ರನ್ ಉತ್ಸಾಹದಿಂದ ಚರ್ಚಿಸಿದ್ದಾರೆ. ಅಂದರೆ ಈ ಪುಸ್ತಕದ ಪರಿವಿಡಿಯನ್ನು ನೋಡಿದರೇ ರಾಮಚಂದ್ರನ್ ಅವರ ಅಭಿರುಚಿ, ಆಸಕ್ತಿ ಮತ್ತು ವ್ಯಾಸಂಗದ ಆಳ–ಅಗಲಗಳು ಕಣ್ಣೆದುರಿಗೆ ಬರುವಂತಿವೆ. ಓದು ಮತ್ತು ಅಧ್ಯಯನದ ಅಗತ್ಯಕ್ಕೆ ಈ ವಿಭಾಗಗಳನ್ನು ತಾತ್ಕಾಲಿಕವಾಗಿ ಮತ್ತು ಸಾಂದರ್ಭಿಕವಾಗಿ ಮಾಡಲಾಗಿದೆಯೇ ಹೊರತು ಅವು ಹಾಗೆ ಪ್ರತ್ಯೇಕ–ಪ್ರತ್ಯೇಕವಾಗಿಯೇನೂ ಉಳಿದಿಲ್ಲ. ಈ ಎಲ್ಲ ಲೇಖನಗಳು ಒಗ್ಗೂಡಿ ನಮ್ಮ ನಡುವಿನ ಪಕ್ವ ಮನಸ್ಸೊಂದರ ತುಂಬು ವ್ಯಕ್ತಿತ್ವದ ಮತ್ತು  ವಾಙ್ಮಯದ ಒಂದು ಅರ್ಥಪೂರ್ಣ ಮಾದರಿಯನ್ನೇ ನಮ್ಮ ಮುಂದೆ ತೆರೆದುಬಿಟ್ಟಿವೆ.

ರಾಮಚಂದ್ರನ್ ಅವರ ವಿಮರ್ಶೆಯ ಪ್ರಧಾನ ಲಕ್ಷಣವೆಂದರೆ 'ಪಠ್ಯ'ದ ಬಹುಮುಖಿ ಓದು. ಹಲವು ಸಾಹಿತ್ಯ ಮತ್ತು ವಿಮರ್ಶೆಯ ಸಿದ್ಧಾಂತಗಳ ಹಿನ್ನೆಲೆಯಿಂದ ಅವರು 'ಪಠ್ಯ'ಗಳನ್ನು ಅನುಸಂಧಾನ ಮಾಡುತ್ತಾರೆ. ಅಂದರೆ 'ಪಠ್ಯ'ಗಳನ್ನು ಹಲವು ಬಗೆಯ 'ಓದು'ಗಳಿಗೆ ಒಳಪಡಿಸುತ್ತಾರೆ. ಹಾಗೆ ಮಾಡುವಾಗ ಯಾವುದೇ ಒಂದು ಸಿದ್ಧಾಂತಕ್ಕೆ ಪಠ್ಯದ ಅನುಭವವನ್ನು ಕುಗ್ಗಿಸುವ ಅಪಾಯಕ್ಕೆ ಅವರು ಸಿಕ್ಕಿಹಾಕಿಕೊಳ್ಳುವುದಿಲ್ಲ. ಸಿದ್ಧಾಂತಗಳು ಸಾಹಿತ್ಯಿಕ ಪಠ್ಯಗಳನ್ನು ನಿಕೃಷ್ಟಗೊಳಿಸಿಬಿಡಬಹುದಾದ ಅಪಾಯದ ಅರಿವಿನಲ್ಲೇ ಅವರು ಪಠ್ಯ ವಿಶ್ಲೇಷಣೆಯನ್ನು ಮಾಡುತ್ತಾರೆ. ಪಠ್ಯವೇ ಅಂತಿಮ ಎನ್ನುವ, ಪ್ರಾಯೋಗಿಕ ವಿಮರ್ಶೆಯ ಶಿಸ್ತಿನಲ್ಲೇ ಕೃತಿಯನ್ನು ವಿಮರ್ಶಿಸಬೇಕು ಅನ್ನುವ ಹಠವೇನೂ ಅವರಿಗೆ ಇದ್ದಹಾಗಿಲ್ಲ. ಆದರೆ ಇತಿಹಾಸ, ಸಮಾಜಶಾಸ್ತ್ರ ಅಥವಾ ಮನೋವಿಜ್ಞಾನಗಳ ಹಾಗೆ ಸಾಹಿತ್ಯ ಪಠ್ಯಕ್ಕೂ ಒಂದು ಬಗೆಯ ಅನನ್ಯತೆ ಇದೆ ಎಂದು ಅವರು ನಂಬುತ್ತಾರೆ. ಹಾಗಾಗಿ ಸಾಹಿತ್ಯ ಪಠ್ಯವೊಂದನ್ನು ಯಾವುದೇ ಮಾನವಿಕ ಶಿಸ್ತು ಅಥವಾ ಸಾಹಿತ್ಯ–ವಿಮರ್ಶಾ ಸಿದ್ಧಾಂತವು ಕೇವಲ ತನ್ನ ತಾತ್ವಿಕತೆಯ, ರಾಜಕೀಯ ನೆಲೆಯ ಸಮರ್ಥನೆಗೆ ಅಥವಾ ನಿರಾಕರಣೆಗೆ ಒಂದು ನಿದರ್ಶನವೆಂಬಂತೆ ಬಳಸಿಕೊಳ್ಳುವ ಚಟುವಟಿಕೆಯನ್ನು 'ಸಾಹಿತ್ಯ ವಿಮರ್ಶೆ' ಎಂದು ಕರೆಯಲು ಅವರು ಒಪ್ಪುವುದಿಲ್ಲ. ಹಾಗೆಂದು ಪಠ್ಯವೊಂದು 'ಸ್ಥಿರ' ಅಥವಾ 'ಅಚಲ' ಎಂಬ ನಿಲುವನ್ನೂ ಅವರು ತೆಗೆದುಕೊಳ್ಳುವುದಿಲ್ಲ. ಕೃತಿಯ



ವಿವರಗಳು ಮತ್ತು ಆ ವಿವರಗಳ ಸಂಯೋಜನೆಯಿಂದಾಗಿ ಕೃತಿಗೆ ತನ್ನದೇ ಆದ ಬಂಧವೊಂದು ಇರುವುದನ್ನು ಅವರು ಸೂಕ್ಷ್ಮವಾಗಿ ಗಮನಿಸುತ್ತಾರೆ. ಈ ಬಂಧದ ಸೂಕ್ಷ್ಮ ಪರಿಶೀಲನೆ ಮತ್ತು ವಿಶ್ಲೇಷಣೆಯು ಸಾಹಿತ್ಯ ವಿಮರ್ಶೆಯ ಪ್ರಾಥಮಿಕ ಶಿಸ್ತು ಎಂದು ಅವರು ನಂಬುತ್ತಾರೆ. ಅಂದರೆ ಒಂದು ಕೃತಿಯ ಭಾಷಿಕ ವಿನ್ಯಾಸದ ಆಳವಾದ ಪರಿಜ್ಞಾನದ ಅಗತ್ಯವನ್ನು ಅವರು ಯಾವಾಗಲೂ ಪ್ರತಿಪಾದಿಸುತ್ತಾರೆ. ಅದು ಅವರಿಗೆ ಕೇವಲ ಒಂದು ಸೌಂದರ್ಯಾನ್ವೇಷಣೆಯ ವ್ಯಸನವಲ್ಲ. ಬದಲಾಗಿ ಸಾಹಿತ್ಯ ಕೃತಿಯೊಂದರ ನಿರೂಪಣಾ ವಿಧಾನ, ರೂಪಕ ಸಂಯೋಜನೆ, ಪ್ರಬಂಧಧ್ವನಿಗಳ ಅರಿವಿಲ್ಲದೆ ಸಾಹಿತ್ಯದ ಅನುಭವ ಪೂರ್ಣವಾಗುವುದಿಲ್ಲ ಎಂಬ ಎಚ್ಚರವನ್ನು ಅವರು ಪ್ರಕಟಿಸುತ್ತಾರೆ. ಕೃತಿಯೊಂದರ ರಾಚನಿಕ ವಿನ್ಯಾಸವನ್ನು ಅದು ರಚಿಸಿದವನ ಹಿನ್ನೆಲೆ, ಅದು ರಚಿತವಾದ ಕಾಲಗಳು ಎಷ್ಟೇ ಪ್ರಭಾವಿಸಿರಲಿ ಭಾಷೆಯ ಬೆಡಗು ಈ ರಚನೆಯನ್ನು ಯಾವತ್ತೂ ಸಮಸ್ಯಾತ್ಮಕಗೊಳಿಸುವ ವಿಸ್ಮಯಕ್ಕೆ ರಾಮಚಂದ್ರನ್ ಕುರುಡಾಗುವುದಿಲ್ಲ. ಹಾಗೆಯೇ, ಕೃತಿಯೊಂದಕ್ಕೆ ತನ್ನದೇ ಅನನ್ಯತೆ–ಸ್ವಾಯತ್ತತೆಗಳು ಇದ್ದಾಗಲೂ ಬೇರೆಬೇರೆ ವ್ಯಕ್ತಿಗಳು, ಭಿನ್ನಭಿನ್ನವಾದ ಕಾಲ–ದೇಶ–ಸಂಸ್ಕೃತಿ–ಸಿದ್ಧಾಂತಗಳು ಆ ಪಠ್ಯವನ್ನು ಬೇರೆಬೇರೆ ರೀತಿಗಳಲ್ಲಿ ಓದಬಹುದಾದ ಸಾಧ್ಯತೆಯನ್ನು ಅವರು ನಿರಾಕರಿಸುವುದಿಲ್ಲ. ಒಂದು ಕೃತಿಯನ್ನು ಎಷ್ಟೇ ಭಿನ್ನವಾಗಿ, ಆಮೂಲಾಗ್ರವಾಗಿ ಓದುತ್ತೇವೆಂದು ಹೊರಟಾಗಲೂ ಯಾವ 'ಒಂದು' ಓದಿಗೆ ಸಂಪೂರ್ಣವಾಗಿ ಬಿಟ್ಟುಕೊಡದ ಕೃತಿಯ ನಿಗೂಢ ಮತ್ತು ವಿದ್ರೋಹದ ನೆಲೆಗಳ ಬಗ್ಗೆ ರಾಮಚಂದ್ರನ್ ಅವರಿಗೆ ಯಾವತ್ತೂ ಒಂದು ಬೆರಗಿದೆ. ಈ ಬೆರಗೇ ಅವರ ವಿಮರ್ಶೆಯನ್ನು ಕೇವಲ ಪ್ರಾಧ್ಯಾಪಕೀಯ ಕಗ್ಗವಾಗಿಬಿಡುವ ಅಪಾಯದಿಂದ ಪಾರುಮಾಡಿದೆ. ಒಂದು ಕೃತಿಯನ್ನು ಅದರ ಚಾರಿತ್ರಿಕ ಸಂದರ್ಭದಲ್ಲಿ ಇಟ್ಟು ನೋಡುವಂತೆಯೇ ಅನನ್ಯ ವ್ಯಕ್ತಿನಿರ್ಮಿತಿಯಾಗಿಯೂ ನೋಡುವಂಥ, ಅಂತರ್‌ಪಠ್ಯೀಯ ಸಂಬಂಧಗಳ ಜಾಲದಲ್ಲಿ ಅದರ ಅನುಭವವನ್ನು ವಿಸ್ತರಿಸಿ ನೋಡಬಲ್ಲ ರಾಮಚಂದ್ರನ್ ವಿಮರ್ಶೆ ಉಪಯುಕ್ತವೂ ಹೌದು, ಹೊಸ ಚರ್ಚೆಗಳಿಗೆ ಆಹ್ವಾನಿಸುವಂಥದ್ದೂ ಹೌದು. ತಾವು ವೈಯಕ್ತಿಕವಾಗಿ ಒಪ್ಪದ ವಿಚಾರಗಳನ್ನೂ ಕೇಳಿಸಿಕೊಳ್ಳುವ, ಗೌರವಪೂರ್ಣವಾಗಿ ಪರಿಶೀಲಿಸುವ ವ್ಯವಧಾನವನ್ನು ಇಟ್ಟುಕೊಂಡಿರುವ ರಾಮಚಂದ್ರನ್ ಅವರ ವಿಮರ್ಶೆ ಶ್ರೀಯುತರ ಪ್ರಜಾಸತ್ತಾತ್ಮಕ ನಿಲುವನ್ನೇ ಪ0ರ್ಯಾಯವಾಗಿ ಧ್ವನಿಸುವಂತಿದೆ. ಆದರೆ ತಮ್ಮ ನಿಖರವಾದ ಮತ್ತು ನಿಷ್ಠುರವಾದ ನಿಲುವುಗಳನ್ನು ಕೇವಲ ಸೌಜನ್ಯದ ಕಾರಣಕ್ಕೆ ಅಡಗಿಸಿಡುವ ಜಾಯಮಾನವೂ ಇವರದಲ್ಲ. ಹಾಗಾಗಿ ರಾಮಚಂದ್ರನ್ ಅವರೊಂದಿಗಿನ ಸಂವಾದ–ಹರಟೆ–ಚರ್ಚೆ ಯಾವತ್ತೂ ಉಪಯುಕ್ತ.

ರಾಮಚಂದ್ರನ್ ಅವರ ವಿಮರ್ಶೆಯು ಕೇವಲ ಕೃತಿಯುನ್ನು ಆಶ್ರಯಿಸಿರುವಂಥದ್ದಲ್ಲ. ಅದು ಯಾವಾಗಲೂ ವಿದ್ವತ್ಪೂರ್ಣ ಮತ್ತು

ಪಾಂಡಿತ್ಯಪೂರ್ಣ. ವಿಮರ್ಶೆಯ ಪರಂಪರೆಯ ಬಗ್ಗೆ ಅವರಿಗೆ ಗೌರವವಿದೆ. ವಿಮರ್ಶೆಯೆಂದರೆ ಕೇವಲ ಓರ್ವ ವ್ಯಕ್ತಿಯ ಓದಿನ ಪರಿ ಮತ್ತು ತೀರ್ಮಾನ ಎಂದು ಅವರು ಭಾವಿಸುವುದಿಲ್ಲ. ಹಲವು ವ್ಯಕ್ತಿಗಳ, ಹಲವು ಕಾಲಗಳ, ಹಲವು ಸೈದ್ಧಾಂತಿಕ ಓದುಗಳ ಒಟ್ಟಾರೆ ಸಂದರ್ಭದಲ್ಲಿ ಒಂದು ವಿಮರ್ಶಾ ಪರಂಪರೆ ಹುಟ್ಟುತ್ತದೆ ಎಂದು ಅವರು ನಂಬುತ್ತಾರೆ. ಪ್ರತಿಯೊಂದು ಹೊಸ ಓದು ಈ ಪರಂಪರೆಯ ಮುಂದುವರಿಕೆಯಾಗಬೇಕೆಂದು ಅವರು ಬಯುಸುತ್ತಾರೆ. ಆದುದರಿಂದಲೇ ಬೇರೆ ವಿದ್ವಾಂಸರು ಆ ಕೃತಿಯ ಬಗ್ಗೆ ಹೇಳಿರುವುದನ್ನು ಅವರು ಆಳವಾಗಿ ಪರಿಶೀಲಿಸುತ್ತಾರೆ. ಅದಕ್ಕಿಂತ ಭಿನ್ನವಾದ ವ್ಯಾಖ್ಯಾನಗಳೊಂದಿಗೆ ಅದನ್ನು ತುಲನೆ ಮಾಡುತ್ತಾರೆ. ಆದರೆ ಈ ಉದ್ಧರಣೆಗಳ ಪ್ರಪಂಚದಲ್ಲಿ ಕಳೆದುಹೋಗದೆ ಮತ್ತು ತಮ್ಮೆದುರಿನ ಪಠ್ಯವೂ ಕಳೆದುಹೋಗಲು ಬಿಡದೆ ತಮ್ಮ ಅನನ್ಯತೆಯನ್ನೂ ಪಠ್ಯದ ಅನನ್ಯತೆಯನ್ನೂ ರಕ್ಷಿಸಿಕೊಳ್ಳಲು ರಾಮಚಂದ್ರನ್ ನಡೆಸುವ ಬೌದ್ಧಿಕ ಹೋರಾಟವೇ ಪ್ರಾಯಶಃ ಅವರ ವಿಮರ್ಶೆಯ ಸ್ವರೂಪವನ್ನು ನಿರ್ದೇಶಿಸುತ್ತಿರುವ ಮುಖ್ಯ ಅಂಶವೆಂದು ತೋರುತ್ತದೆ. ಉದಾಹರಣೆಗೆ 'ಭಗವದ್ಗೀತೆ' ಮತ್ತು 'ಶಾಕುಂತಲಾ'ಗಳ ಬಗ್ಗೆ ಬಂದಿರುವ ಹಲವು ಮುಖ್ಯವಾದ ಆದರೆ ಪರಸ್ಪರ ವಿಭಿನ್ನವಾದ ವ್ಯಾಖ್ಯಾನಗಳನ್ನು ವಿವರವಾಗಿ ಪರಿಶೀಲಿಸಿದ ನಂತರವೂ ಉಳಿದುಬಿಡುವ ಪ್ರಶ್ನೆಗಳನ್ನು ರಾಮಚಂದ್ರನ್ ಕೇಳುವ ರೀತಿಯು ಪಠ್ಯವನ್ನೂ ವಿಮರ್ಶೆಯನ್ನೂ ಮುಕ್ತವಾಗಿ ಇಡುತ್ತವೆ. "ಪ್ರೊ.ರಾಮಚಂದ್ರನ್ ಅವರ 'ಆಖ್ಯಾನ–ವ್ಯಾಖ್ಯಾನ' ವಿಮರ್ಶಾ ಸಂಕಲನ ತನ್ನ ವೈವಿಧ್ಯ, ವೈಶಿಷ್ಟ್ಯ ಮತ್ತು ವಿಭಿನ್ನತೆಗಳಿಂದ ಒಂದು ಮುಕ್ತ ಪಠ್ಯದ ಹರಹು, ವಿನ್ಯಾಸ ಮತ್ತು ಮುಕ್ತತೆಯನ್ನು ಹೊಂದಿದೆ" ಎಂದು ಮುನ್ನುಡಿಯಲ್ಲಿ ಡಾ.ಬಿ.ಎ.ವಿವೇಕ ರೈ ಅವರು ಹೇಳಿರುವುದು ಉಚಿತವಾಗಿದೆ. 'ಅಭಿಜ್ಞಾನ ಶಾಕುಂತಲಂ' ಕುರಿತ ರೊಮೀಲಾ ಥಾಪರ್, ರವೀಂದ್ರನಾಥ ಠಾಕೂರ್, ಕೀರ್ತಿನಾಥ ಕುರ್ತಕೋಟಿ, ಕೆ.ವಿ.ಸುಬ್ಬಣ್ಣ ಮುಂತಾದವರ ವಿಮರ್ಶೆಗಳನ್ನು ವಿವರವಾಗಿ ಪರಿಶೀಲಿಸಿದ ನಂತರ ರಾಮಚಂದ್ರನ್ ಕೇಳಿಕೊಳ್ಳುತ್ತಾರೆ: 'ಇಲ್ಲಿಯವರೆಗೆ ಸ್ಥೂಲವಾಗಿ ನೋಡಿದ ಚಾರಿತ್ರಿಕ, ಸಾಂಸ್ಕೃತಿಕ, ತಾತ್ವಿಕ, ಮತ್ತು ಸಾಹಿತ್ಯಕ ವ್ಯಾಖ್ಯಾನಗಳಲ್ಲಿ ಯಾವುದು ಗ್ರಾಹ್ಯ? ಮತ್ತು ಯಾವುದು ಅಲ್ಲ?' ಈ ಪ್ರಶ್ನೆಗೆ ತಮಗೆ ತಾವೇ ಉತ್ತರಿಸಿಕೊಳ್ಳುವ ಧಾಟಿ ಮತ್ತು ಸ್ವರೂಪಗಳು ಒಟ್ಟಾರೆ ರಾಮಚಂದ್ರನ್ ಅವರ ವಿಮರ್ಶೆಗೆ ಸಾಮಾನ್ಯವಾಗಿ ಅನ್ವಯವಾಗುವಂತೆ ತೋರುವುದರಿಂದ ಪ್ರಾತಿನಿಧಿಕವೆಂಬಂತೆ ಅದನ್ನು ಇಲ್ಲಿ ಉದ್ಧರಿಸಬಹುದು: 'ನನ್ನ ದೃಷ್ಟಿಯಲ್ಲಿ, ಇವೆಲ್ಲವೂ ಸ್ವೀಕಾರಾರ್ಹವೇ; ಮತ್ತು ಇವಾವುವೂ ಕೃತಿಯ ಎಲ್ಲಾ ಅಯಾಮಗಳಿಗೂ ಸ್ಪಂದಿಸುವುದಿಲ್ಲ. ರೋಮಿಲಾ ಥಾಪರ್ ಅವರ ವಿದ್ವತ್ಪೂರ್ಣ ತೌಲನಿಕ ವ್ಯಾಖ್ಯಾನ ಸ್ತ್ರೀ ದೃಷ್ಟಿಕೋನದಿಂದ ಬಹು ಮುಖ್ಯವಾದುದು. ಆದರೆ ಅದು ಕೃತಿಯ ಸಾಹಿತ್ಯಕ–ಎಂದರೆ ಭಾಷಿಕ ಆಯಾಮವನ್ನು ಮತ್ತು ಸಾವಯವ



ಸಮಗ್ರತೆಯನ್ನು – ನಿರ್ಲಕ್ಷಿಸುತ್ತದೆ ಮತ್ತು ಸಾಹಿತ್ಯ ಕೃತಿಗಳನ್ನು 'ದಾಖಲೆ'ಗಳಂತೆ ನೋಡುತ್ತದೆ. ಇದೇ ಮಾತು, ಸರಿಸುಮಾರು ಸುಬ್ಬಣ್ಣನವರ, ಕುರ್ತಕೋಟಿಯವರ (ಮತ್ತು ಆ ದಿಕ್ಕಿನಲ್ಲಿ ಬಂದಿರುವ ಇತರರ) ವ್ಯಾಖ್ಯಾನಗಳಿಗೂ ಅನ್ವಯಿಸುತ್ತದೆ. ನಾವು ಯಾವುದನ್ನು 'ಸಾಹಿತ್ಯಕ' ವಿಮರ್ಶೆ ಎಂದು ಕರೆಯುತ್ತೇವೋ ಅದು ಕೃತಿಯ ಸಂವಿಧಾನ, ಘಟನೆ–ಪಾತ್ರಗಳ ವಿನ್ಯಾಸ, ಭಾಷಿಕಧ್ವನಿ ವಿನ್ಯಾಸ, ಇತ್ಯಾದಿಗಳನ್ನು ಆಳವಾಗಿ ವಿಶ್ಲೇಷಿಸಿದರೂ ಅದು ಕೃತಿಯ ಚಾರಿತ್ರಿಕ–ಸಾಮಾಜಿಕ ಆಯಾಮಗಳನ್ನು ಅಲಕ್ಷಿಸುತ್ತದೆ. ಒಂದು ಶ್ರೇಷ್ಠ ಸಾಹಿತ್ಯಕೃತಿಗೆ ದಾಖಲೆ, ವರದಿ, ಬಖೈರು, ಇತ್ಯಾದಿ ಇತರ ಭಾಷಿಕ ರಚನೆಗಳಲ್ಲಿರದ ಅನೇಕ ಆಯಾಮಗಳಿರುತ್ತವೆ; ಮತ್ತು, ಯಾವ ವಿಮರ್ಶಾ ಮಾರ್ಗವೂ ಈ ಎಲ್ಲಾ ಆಯಾಮಗಳನ್ನೂ ಗಮನಿಸಲು ಸಾಧ್ಯವಾಗಿರುವುದಿಲ್ಲ. ಪ್ರಾಯಃ, ಅರ್ಥಪೂರ್ಣ ಕೃತಿವಿಮರ್ಶೆ ಸಂಶ್ಲೇಷಣಾತ್ಮಕ ವಾಗಿಯೇ ಇರಬೇಕು; ಅದು ಕೃತಿಯ ಎಲ್ಲಾ ಆಯಾಮಗಳಿಗೂ, ಎಲ್ಲಾ ವಿವರಗಳಿಗೂ ಸಾಧ್ಯವಾದಷ್ಟೂ ಸಂವೇದನಾಶೀಲವಾಗಿ ಸ್ಪಂದಿಸಬೇಕು. ಒಂದು ಕೃತಿಯ ಆಯಾಮಗಳೆಷ್ಟು?–ಸಂವೇದನಾಶೀಲ ಸಹೃದಯರು ಗುರುತಿಸುವಷ್ಟು.'

ರಾಮಚಂದ್ರನ್ ಅವರ ವಿಮರ್ಶೆ ವಸ್ತುನಿಷ್ಠವಾದದ್ದು; ಪೂರ್ವಪಕ್ಷವನ್ನು ಗ್ರಹಿಸಲು ಶ್ರಮಿಸುವಂಥದ್ದು. ಆದರೆ ತಮ್ಮ ವೈಯಕ್ತಿಕ ನಿಲುವುಗಳನ್ನು ನಿರ್ದಾಕ್ಷಿಣ್ಯವಾಗಿ ಮಂಡಿಸಲು ಅವರು ಹಿಂಜರಿಯುವುದಿಲ್ಲ. ಸೌಜನ್ಯದ ಹೆಸರಿನಲ್ಲಿ ಅವರು ತಮಗನಿಸಿದ ಸತ್ಯವನ್ನು ಮರೆಮಾಚುವುದಿಲ್ಲ; ಹಾಗೆಯೇ ನಿಷ್ಠುರತೆಯ ಹೆಸರಿನಲ್ಲಿ ಸೌಜನ್ಯದ ಎಲ್ಲೆಗಳನ್ನು ಮೀರುವುದೂ ಇಲ್ಲ. ಸಾಹಿತ್ಯವಿಮರ್ಶೆ ಎನ್ನುವುದು ಸತ್ಯನಿಷ್ಠುರವಾದ ಆದರೆ ಸುಸಂಸ್ಕೃತವಾದ, ಪ್ರಜಾಸತ್ತಾತ್ಮಕವಾದ ಒಂದು ಚಟುವಟಿಕೆ ಎಂಬುದಕ್ಕೆ ರಾಮಚಂದ್ರನ್ ಅವರ ಬರಹಗಳೇ ಸಾಕ್ಷಿ. ಜ್ಞಾನಪೀಠ ಪ್ರಶಸ್ತಿಗಳಿಸಿದ ಗೋಕಾಕರ 'ಭಾರತಸಿಂಧುರಶ್ಮಿ' ಎಂಬ ಮಹಾಕಾವ್ಯವು ಕೇವಲ ಮಹತ್ವಾಕಾಂಕ್ಷೆಯ ಕೃತಿಯಾಗುಳಿಯುತ್ತದೆಯೇ ಹೊರತು ಮಹತ್ವದ ಕೃತಿಯಾಗುವುದಿಲ್ಲ' ಎಂದು ಯಾವ ಹಿಂಜರಿಕೆ ಇಲ್ಲದೆ ಅವರು ಹೇಳಬಲ್ಲರು. ಆದರೆ ಈ ಹೇಳಿಕೆ ಈ ಕಾವ್ಯದ ವಿವರವಾದ ಪರೀಕ್ಷೆಯ ನಂತರ ಬರುತ್ತದೆ ಎಂಬುದನ್ನು ಅಗತ್ಯ ಗಮನಿಸಬೇಕು. ಅ.ನ.ಕೃ. ಕಾದಂಬರಿಗಳ, ದೇ.ಜವರೇಗೌಡರ ವಿಮರ್ಶೆಯ ಇತಿಮಿತಿಗಳನ್ನೂ ರಾಮಚಂದ್ರನ್ ಆ ಲೇಖಕರ ಬಗ್ಗೆ ಗೌರವವನ್ನು ಇಟ್ಟುಕೊಂಡೇ ಗುರುತಿಸಿದ್ದಾರೆ.

ಸಣ್ಣಕತೆಗಳನ್ನು ಕುರಿತ ಅವರ ಲೇಖನ ಸಾಹಿತ್ಯದ ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ಇಂದಿನ ಯುವ ಲೇಖಕ–ಲೇಖಕಿಯರಿಗೂ ಹಲವು ಬಗೆಗಳಲ್ಲಿ ಮಾರ್ಗದರ್ಶಕವಾಗಿದೆ. 'ಕಥನ' ಮತ್ತು 'ಕಥೆ' ಇವೆರಡೂ ಒಂದೇ ಅಲ್ಲ ಎಂದು ಸಕಾರಣ ಗುರುತಿಸುವ ರಾಮಚಂದ್ರನ್, 'ಕಥೆ ಆಗಿ ಹೋದ ಅಥವಾ ಆಗದ ಒಂದು ಘಟನೆ ಅಥವಾ ಅನೇಕ ಘಟನೆಗಳ ದಾಖಲೆ'; 'ಕಥನದಲ್ಲಿ ಕಥೆಯೇನು

ಎಂಬುದು ಮುಖ್ಯವಾಗದೆ ಅದು ಹೇಗೆ ಕಥಿಸಲ್ಪಟ್ಟಿದೆ ಎಂಬುದು ಹೆಚ್ಚು ಮಹತ್ವದ್ದಾಗಿರುತ್ತದೆ' ಎಂದು ತಿಳಿಸುತ್ತಾರೆ. ಕಥೆಯ ನಿರೂಪಣೆಯ ಸ್ವರೂಪ, ಸಾಧ್ಯತೆ ಮತ್ತು ಪರಿಣಾಮಗಳ ಅಧ್ಯಯನವೇ ಕಥಾ ಅಧ್ಯಯನದ ಮುಖ್ಯವಾದ ಅಂಶ ಎಂದು ಅವರು ಪ್ರತಿಪಾದಿಸುತ್ತಾರೆ. ಈ ಶಾಸ್ತ್ರವು ರಾಮಚಂದ್ರನ್ ಅವರ ಮುಂದಿನ ಬರಹದಲ್ಲಿ ಆಯ್ದ ಕಥೆಗಳ ಓದಿನಲ್ಲಿ ಅರ್ಥಪೂರ್ಣವಾಗಿ ಅನ್ವಯಗೊಂಡು ಕಥಾವಿಮರ್ಶೆಯ ಒಂದು ಮಾರ್ಗದರ್ಶೀ ಸೂತ್ರವೇ ನಮ್ಮೆದುರು ಬಿಚ್ಚಿಕೊಳ್ಳುತ್ತದೆ.

ವಿಮರ್ಶೆ ಎಂದರೆ ಒಂದು ಬಗೆಯ 'ಪ್ರಯಾಣ' ಎಂಬ ರಾಮಚಂದ್ರನ್ ಅವರ ಇಂಗಿತಕ್ಕೆ ದನಿಗೂಡಿಸಿರುವ ಡಾ. ವಿವೇಕ ರೈ ಅವರು ಒಂದು ಕಾಲಕ್ಕೆ ನಮ್ಮ ಪ್ರಯಾಣಿಕರು 'ಯಾತ್ರಿಕ'ರಾಗಿದ್ದವರು ಮುಂದೆ 'ತಿರುಗಳಿ'ಯಾಗಿ, 'ಅಲೆಮಾರಿ'ಗಳಾಗಿ ಆಧುನಿಕ ಕಾಲದಲ್ಲಿ ಕೇವಲ 'ಆಟಗಾರ'ರಾದರು ಎಂದು ಗುರುತಿಸುತ್ತಾರೆ. ರಾಮಚಂದ್ರನ್ ಅವರ ವಿಮರ್ಶಾ ಪ್ರಯಾಣಕ್ಕೆ ಯಾತ್ರೆಯ ಶ್ರದ್ಧೆ ಇದೆ ಎಂಬ ರೈಗಳ ಸೂಚನೆ ರಾಮಚಂದ್ರನ್ ವಿಮರ್ಶೆಯ ಸಿದ್ಧಿ–ಸಾಧನೆಗಳನ್ನೇ ರೂಪಕಾತ್ಮಕವಾಗಿ ದಾಖಲಿಸಿದಂತಿದೆ.

ಇತ್ತೀಚೆಗೆ ನಿಧನರಾದ
ಶಿಕ್ಷಣತಜ್ಞ
**ಶ್ರೀ ಕೆ. ಗಂಗಾಧರ**
ಸಾಹಿತಿ
**ಶ್ರೀ ಟಿ. ಮಹಾಬಲೇಶ್ವರ ಭಟ್ಟ**
ಮತ್ತು ರಾಷ್ಟ್ರಕವಿ
**ಶ್ರೀ ಜಿ.ಎಸ್. ಶಿವರುದ್ರಪ್ಪ**
ಇವರಿಗೆ ನೀನಾಸಮ್‌ನ
ಶ್ರದ್ಧಾಂಜಲಿ

# ನಮ್ಮ ನಡುವಿನ ಸಾಕ್ಷಿಪ್ರಜ್ಞೆ

ಎನ್. ಮನು ಚಕ್ರವರ್ತಿ
ಕನ್ನಡಕ್ಕೆ: ಎಂ.ಆರ್.ರಕ್ಷಿತ್

ಇತ್ತೀಚೆಗೆ ಬೆಂಗಳೂರಿನ ಪ್ರಿಸವ್ ಬುಕ್ಸ್‌ನವರು ಡಾ.ಯು.ಆರ್. ಅನಂತಮೂರ್ತಿಯವರ ಎರಡು ಕೃತಿಗಳನ್ನು ಇಂಗ್ಲಿಷಿನಲ್ಲಿ ಪ್ರಕಟಿಸಿದರು – ಒಂದು ಅವರ ಆಯ್ದ ಲೇಖನಗಳ ಸಂಕಲನ, ಮತ್ತೊಂದು ಆಯ್ದ ಕತೆಗಳ ಸಂಕಲನ (ಅನುವಾದ: ದೀಪಾ ಗಣೇಶ್). ಪ್ರೊ. ಎನ್. ಮನು ಚಕ್ರವರ್ತಿಯವರು ಈ ಪುಸ್ತಕಗಳನ್ನು ಸಂಪಾದಿಸಿದ್ದಾರೆ. ಅವುಗಳಲ್ಲಿ, ಲೇಖನ ಸಂಕಲನ 'ರುಜುವಾತು'ಗೆ ಮನು ಚಕ್ರವರ್ತಿಯವರು ಬರೆದ ಪ್ರಸ್ತಾವನೆಯನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

ಯು. ಆರ್. ಅನಂತಮೂರ್ತಿಯವರ 'ರುಜುವಾತು' (ಅದು ಒಂದು ವಿಶಾಲ ತಾತ್ವಿಕ ದೃಷ್ಟಿಯಲ್ಲಿ 'ಸಾಕ್ಷಿ/ಪುರಾವೆ' ಎಂಬ ಅರ್ಥಗಳನ್ನು ಹೊಂದಿರುತ್ತದೆ) ಒಬ್ಬ ಶ್ರೇಷ್ಠ ಸೃಜನಶೀಲ ಲೇಖಕರ ಪ್ರಬಂಧಗಳ ಸಂಕಲನ. ಒಬ್ಬ ಸೂಕ್ಷ್ಮ ಚಿಂತಕರಾಗಿ ವೈಯಕ್ತಿಕ ಸೃಜನಶೀಲತೆ, ಸಂಪ್ರದಾಯ, ಭಾಷೆ, ರಾಜಕೀಯ ಮತ್ತು ಸಾಮಾಜಿಕ ವಿಚಾರಗಳ ಬಗ್ಗೆ ಅವರ ಅಭಿಪ್ರಾಯಗಳನ್ನು ತಮ್ಮ ಸಾಂಸ್ಕೃತಿಕ ಸಮುದಾಯದ ಮುಂದೆ ಇಟ್ಟು, ಅವುಗಳಲ್ಲಿ ಅಡಗಿರುವ ವಿಪರ್ಯಾಸಗಳು, ವೈರುಧ್ಯಗಳು ಮತ್ತು ದ್ವಂದ್ವಗಳನ್ನು ನಿಸ್ಸಂದಿಗ್ಧವಾದ ರೀತಿಯಲ್ಲಿ ಮುನ್ನೆಲೆಗೆ ತರುತ್ತಾರೆ. ಈ ಪ್ರಬಂಧಗಳು ಮೂಲದಲ್ಲಿ ಸಮಾಜ ಮತ್ತು ಸಂಸ್ಕೃತಿ ಕುರಿತ ಆಳವಾದ ಮನನಗಳು. ಇವು ತನ್ನ ಕಾಲದ ಪ್ರಮುಖವಾದ ಸಂಗತಿಗಳಲ್ಲಿ ತೊಡಗಿಕೊಂಡ ಮತ್ತು ಸಕ್ರಿಯವಾಗಿ ಭಾಗಿಯಾದ ಒಬ್ಬ 'ಸಾಕ್ಷಿ'ಯಿಂದ ಬಂದಂತಹ ಚಿಂತನೆಗಳು. ಇವು ನಿರ್ಲಿಪ್ತ ಮಾದರಿಯಲ್ಲಿ ತನ್ನ ಕಾಲದ ವಿವಾದಗಳು ಮತ್ತು ಕಲಹಗಳನ್ನು ಕೇವಲ ದಾಖಲಿಸುವ ಒಬ್ಬ 'ವಸ್ತುನಿಷ್ಠ ಪ್ರೇಕ್ಷಕ'ನ ವರದಿಗಳಲ್ಲ. ಒಂದು ಮುಖ್ಯವಾದ ಸಾಂಸ್ಕೃತಿಕ ದೃಷ್ಟಿಯಲ್ಲಿ ಈ ಪುನರವಲೋಕನಗಳು ಓದುಗರ ಸಮುದಾಯವನ್ನು ಒಬ್ಬ ಲೇಖಕ ತನ್ನ ಕಾಲದ ಅನೇಕ ಆಳವಾದ ಸಂಕೀರ್ಣ ಮತ್ತು ವಿವಾದಾತ್ಮಕ ಸಾಮಾಜಿಕ ಪ್ರಕ್ರಿಯೆಗಳೊಂದಿಗೆ ಪ್ರಜ್ಞಾಪೂರ್ವಕವಾಗಿ ತೊಡಗಿಕೊಂಡಿರುವ ಬಗ್ಗೆ ತನ್ನ ವೈಯಕ್ತಿಕ ಅಭಿವ್ಯಕ್ತಿಗಳೊಂದಿಗೆ ಮುಖಾಮುಖಿಯಾಗಿಸುತ್ತವೆ. ಈ ಪ್ರಕ್ರಿಯೆಗಳು ಎಲ್ಲ ಸಂಕುಚನಗೊಂಡ ಮತ್ತು ಸರಳೀಕೃತ ಸೈದ್ಧಾಂತಿಕ ವಿವರಣೆಗಳನ್ನು ಮತ್ತು

ತರ್ಕಬದ್ಧ ವಾದಗಳನ್ನು ಅತ್ಯಂತ ಅರ್ಥಹೀನ ಹಾಗೂ ಅಸಂಬದ್ಧವಾಗಿಸುತ್ತವೆ. ಅನಂತಮೂರ್ತಿಯವರು ತಮ್ಮ ಸಮಾಜದ ಅತಿಮುಖ್ಯ ಸಂಗತಿಗಳೊಂದಿಗೆ ಮತ್ತು ಅದರ ಸಾಂಸ್ಕೃತಿಕ ಆತಂಕಗಳೊಂದಿಗೆ ಸೃಜನಶೀಲತೆಯಿಂದ ಮತ್ತು ನೈತಿಕವಾಗಿ ತೊಡಗಿಕೊಂಡಿದ್ದಾರೆ. ಅವರ ಪ್ರಬಂಧಗಳು ಒಬ್ಬ 'ಸ್ಥಳೀಯ ಬಾತ್ಮೀದಾರ'ನ ನಿಷ್ಕ್ರಿಯ ನೋಟಗಳಾಗದೆ ಇರುವುದು ಮತ್ತು 'ಕ್ಷೇತ್ರ ಅಧ್ಯಯನ' ಹಾಗೂ 'ಸಂಸ್ಕೃತಿ ಅಧ್ಯಯನ'ಗಳ ಹೆಸರಿನಲ್ಲಿ ಸಂಶೋಧನೆ ಮಾಡುವ ಶೈಕ್ಷಣಿಕ ತಜ್ಞರು ಅವುಗಳನ್ನು ಹಾಗೇ ಸ್ವೀಕರಿಸಲು ಸಾಧ್ಯವಾಗದೇ ಇರುವುದು ಅನಂತಮೂರ್ತಿಯವರ ಅಂತಹ ಆಳವಾದ ತೊಡಗುವಿಕೆಗೆ ನಿಜವಾದ ಮಾಪಕವಾಗಿದೆ.

ವಿರಾಮವಿಲ್ಲದೆ ಅನೇಕ ರೀತಿಯ ಸ್ಥಿತ್ಯಂತರಗಳಿಗೆ ಒಳಗಾಗುವ ಸಮಾಜಗಳಲ್ಲಿ ಮತ್ತು ಸಂಸ್ಕೃತಿಗಳಲ್ಲಿ ಬೌದ್ಧಿಕ ತೀರ್ಮಾನಗಳು ಮತ್ತು ರಾಜಕೀಯ ಪರಿಹಾರಗಳಿಗೆ ಬರಲು ಅಸಾಧ್ಯ. ಹೊಸದಾಗಿ ಹೊಮ್ಮುತ್ತಿರುವ ಬೇರೆಬೇರೆ ಸಮುದಾಯಗಳು ಹೊಸ ಸೈದ್ಧಾಂತಿಕ ನಿಲುವುಗಳನ್ನು ತೆರೆಯುತ್ತಿವೆ ಮತ್ತು ತೀಕ್ಷ್ಣವಾದ ಅನಿಶ್ಚಿತತೆಗಳು ಮತ್ತು ತಕರಾರಿನ ಅಂಶಗಳನ್ನು ಹುಟ್ಟುಹಾಕುತ್ತಿವೆ. ಇವುಗಳನ್ನು ಒಳಗೊಳ್ಳುವ ಪರಿಹಾರಗಳನ್ನು/ತೀರ್ಮಾನಗಳನ್ನು ಸಾಮಾಜಿಕ ಕಾರ್ಯಕ್ರಮಗಳ ಮೂಲಕವಾಗಲಿ ಶಾಸನದ ಕಾರ್ಯಗಳಿಂದಲಾಗಲಿ ಕಂಡುಕೊಳ್ಳುವುದು ಅಸಂಭವ – ವಿಶೇಷವಾಗಿ ನ್ಯಾಯ ಮತ್ತು ಸಮಾನತೆಯ ಪ್ರಶ್ನೆಗಳಿಗೆ ಸಂಬಂಧಪಟ್ಟಂತೆ ಈ ಮಾತು ಸತ್ಯ. ಇಂತಹ ಸಂದರ್ಭದಲ್ಲಿ, ಎಲ್ಲ ವೈರುಧ್ಯಾತ್ಮಕವಾದ ಮತ್ತು ಇಬ್ಭಾಗವಾಗಿಸುವ ಅನಿಸಿಕೆಗಳನ್ನು ಮತ್ತು ವಿಚಾರಗಳನ್ನು ವಿಲೀನಗೊಳಿಸುವ ಒಂದು ಸಾರ್ವತ್ರಿಕ ಉತ್ತರವನ್ನು ಅಥವಾ ನಿಲುವನ್ನು ಪಡೆಯಬಹುದೆಂಬ ಗಟ್ಟಿಯಾದ ನಂಬಿಕೆಯು ಕೆಲವರಿಗೆ ಬರುತ್ತದೆ. ಅವು ಎಲ್ಲಿಂದ ಬರುತ್ತದೆಂದರೆ, ಸಾಂಸ್ಕೃತಿಕ ಮತ್ತು ರಾಜಕೀಯ ವೈವಿಧ್ಯತೆಗಳ ಬಗ್ಗೆ ಮತ್ತು ಬಹುತ್ವದ ಬಗ್ಗೆ ಯಾವುದೇ ಮೂಲಭೂತ ಗೌರವವಿಲ್ಲದ ಅಧಿಕಾರದ ಕೇಂದ್ರಗಳಿಂದ ಮತ್ತು ಪ್ರಭುತ್ವದಿಂದ ಬರುತ್ತವೆ. ಇಂತಹ ಬಹುತೇಕ ಕೇಂದ್ರಗಳು ಗೊಡ್ಡಾದ ಭೂತಕಾಲಕ್ಕೆ ಜೋತುಬಿದ್ದವರ ಮೂಲಕ ಬರುತ್ತವೆ, ವಿಶೇಷವಾಗಿ ಸಂಪ್ರದಾಯದ ಹೆಸರಿನಲ್ಲಿ ಇವು ಬರುತ್ತವೆ. ಇವು ಒಂದು ಮುಕ್ತ ಸಮಾಜವನ್ನು ಸಮರ್ಥಿಸುವ ಎಲ್ಲ ವಾದಗಳನ್ನು ತೊಡೆದುಹಾಕಿಬಿಡುತ್ತವೆ. ಆದರೆ, ಈಗಿನ ಕಾಲದಲ್ಲಿ, ಒಂದು ದುಷ್ಟ ರಾಜಕೀಯ ಪ್ರಭುತ್ವ (a vicious political State) ಮತ್ತು ಅಮಾನವೀಯ ತಂತ್ರಜ್ಞಾನಪ್ರಭುತ್ವದ ವ್ಯವಸ್ಥೆ (a dehumanised technocratic order) ಇವೆರಡರ ಮಾರಕ ಮಿಶ್ರಣದಿಂದ ಹೆಚ್ಚು ವಿನಾಶಕಾರಿಯಾದ ಮತ್ತು ಕ್ರೂರವಾದ ಅಧಿಕಾರದ ಕೇಂದ್ರಗಳು ಹುಟ್ಟಿಕೊಂಡಿವೆ. ಊಹಿಸಲಾಗದಷ್ಟು ಪ್ರಮಾಣದ ಆರ್ಥಿಕ ಶಕ್ತಿ ಅವುಗಳನ್ನು ಬೆಂಬಲಿಸುತ್ತಿದೆ ಮತ್ತು ಜಗತ್ತಿನಾದ್ಯಂತ ವ್ಯಕ್ತಿಗಳು ಮತ್ತು



ಸಮುದಾಯಗಳ ಪ್ರಜಾಪ್ರಭುತ್ವೀಯ ಆಶಯಗಳು ಹಾಗು ಕಾಣ್ಕೆಗಳನ್ನು ಅವು ಸಾಕಷ್ಟು ಯಶಸ್ವಿಯಾಗಿ ದಮನಮಾಡುತ್ತಿವೆ. ಆಧುನಿಕ ರಾಷ್ಟ್ರ–ಪ್ರಭುತ್ವಗಳ ಮತ್ತು ಆರ್ಥಿಕ ಸಾಮ್ರಾಜ್ಯಗಳ ಸಮ್ಮಿಶ್ರ ಶಕ್ತಿಯು ಎಲ್ಲ ಬಗೆಯ ವಿಜಾತೀಯತೆಯನ್ನು ಅಳಿಸಿಹಾಕುತ್ತದೆ – ಈ ಮಾತು ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಭಾಷಿಕ ಮುಂತಾದ ವಿಷಯಗಳಿಗೆ ಸಂಬಂಧಪಟ್ಟಂತೆ ನಿಜವೇ ಸರಿ.

ತೀವ್ರತರವಾದ ಸಂಘರ್ಷಗಳನ್ನು ಎದುರಿಸುವಾಗ ಯಾವುದೇ ದಮನಕಾರಿ ಸಾಮಾಜಿಕ–ಸಾಂಸ್ಕೃತಿಕ ಮತ್ತು ರಾಜಕೀಯ ಸಂಸ್ಥೆಗಳೊಡನೆ ಶಾಮೀಲಾಗದೆ ಉಳಿಯಲು ಅಪಾರವಾದ ಬೌದ್ಧಿಕ ಧೈರ್ಯ ಮತ್ತು ನಿಯತ್ತು ಬೇಕಾಗುತ್ತದೆ. ಆ ತೀವ್ರತರವಾದ ಸಂಘರ್ಷಗಳು ಅನಿವಾರ್ಯವಾಗಿ ವ್ಯಕ್ತಿಗಳು ಮತ್ತು ಸಮುದಾಯಗಳನ್ನು ಒಂದು ಕೊಳೆಯುತ್ತಿರುವ ಸಾಂಪ್ರದಾಯಿಕ ಭೂತಕಾಲ ಮತ್ತು ಪ್ರಗತಿಪರ, ವೈಚಾರಿಕ ಹಾಗು ಧರ್ಮನಿರಪೇಕ್ಷ ಆಧುನಿಕ ವರ್ತಮಾನ ಎಂದು ಕರೆಯಲ್ಪಡುವ ಎರಡರ ನಡುವೆ ಒಂದನ್ನು ಆಯ್ಕೆಮಾಡುವಂತೆ ಒತ್ತಾಯ ಮಾಡುತ್ತವೆ. ಕೆಲವು ಸಮಾಜಗಳಲ್ಲಿ ಒಂದು ರೀತಿಯ ಛಿದ್ರಮನಸ್ಕತೆಯನ್ನು ಉಂಟುಮಾಡಲಾಗುತ್ತದೆ ಮತ್ತು ವಿರುದ್ಧ ಶಕ್ತಿಗಳ ನಡುವಿನ ತೀಕ್ಷ್ಣವಾದ ವ್ಯತ್ಯಾಸಗಳನ್ನು ಉಲ್ಬಣಗೊಳಿಸಿ ಒಂದು ರೀತಿಯ ದ್ವಿಮುಖ ವೈರುಧ್ಯವನ್ನು ಸಾಧಿಸಲಾಗುತ್ತದೆ – ಅಂದರೆ 'ಸಂಪ್ರದಾಯ ಮತ್ತು ಆಧುನಿಕತೆ', 'ಧರ್ಮ ಮತ್ತು ಧರ್ಮನಿರಪೇಕ್ಷತ್ವ', 'ವೈಚಾರಿಕ ಮತ್ತು ಅವೈಜ್ಞಾನಿಕ ಪರಿಕಲ್ಪನೆಗಳು' ಇತ್ಯಾದಿ. ಈ ವರ್ಗೀಕರಣಗಳನ್ನು ಧಿಕ್ಕರಿಸುವ ಎದೆಗಾರಿಕೆ ಹೊಂದಿರುವ ಕೆಲವೇ ವ್ಯಕ್ತಿಗಳು ಮಾತ್ರ ಒಂದು ರೀತಿಯ ಕುಂಠಿತಗೊಳಿಸುವ ದ್ವಂದ್ವಗಳೊಂದಿಗೆ ತಮ್ಮ ಪೂರ್ಣವಾದ ಮತ್ತು ನಿರ್ಭಿಡೆಯ ಮುಖಾಮುಖಿಯಲ್ಲಿ ಉಭಯ ಆಯಾಮಗಳನ್ನೂ ಪರೀಕ್ಷಿಸುವ ನಿಲುವುಗಳಿಗೆ (ambivalent position) ಬದ್ಧರಾಗಿರುತ್ತಾರೆ. ಅವರನ್ನು ಇತರರು ಪ್ರಗತಿವಿರೋಧಿಗಳು, ಯಥಾಸ್ಥಿತಿವಾದಿಗಳು, ಪುನರುತ್ಥಾನವಾದಿಗಳು ಎಂದು ಮುಂತಾಗಿ ಬಣ್ಣಿಸಿದರೂ ಅವರು ಎದೆಗುಂದುವುದಿಲ್ಲ. ಕಳೆದ ಐದು ದಶಕಗಳಲ್ಲಿ ಅನಂತಮೂರ್ತಿಯವರು ಒಬ್ಬ ಸೃಜನಶೀಲ ಬರಹಗಾರರಾಗಿಯೂ ಮತ್ತು ಚಿಂತಕರಾಗಿಯೂ ಯಾವುದೇ ರೀತಿಯ ಸರಳೀಕರಣವನ್ನು ಆಶ್ರಯಿಸಿಲ್ಲ. ಹಾಗಾಗಿ ಅವರು ಬಹಳ ಸಲ ಅನೇಕ ಸ್ವ–ಘೋಷಿತ ಪ್ರಗತಿಪರರ ಮತ್ತು ಧರ್ಮನಿರಪೇಕ್ಷತ್ವವಾದಿಗಳ ಕೋಪಕ್ಕೆ ಪಾತ್ರರಾಗಿದ್ದಾರೆ.

ಅನಂತಮೂರ್ತಿಯವರು ತಮ್ಮನ್ನು ಸತತವಾಗಿ ಎಲ್ಲ ನೆಲೆಗಳಲ್ಲಿ ಪ್ರಖರವಾದ ವಿಮರ್ಶೆಗೆ ತೆರೆದುಕೊಂಡಿದ್ದಾರೆ – ಅದರಲ್ಲಿ ಬಹುತೇಕ ವಿಮರ್ಶೆಯು ಕೆಲವು ವ್ಯಕ್ತಿಗಳ ಮತ್ತು ಗುಂಪುಗಳ ನಿಜವಾದ ದೃಢನಂಬಿಕೆಗಿಂತ ಹೆಚ್ಚಾಗಿ ಅವರವರ ಬರಡಾದ 'ರಾಜಕೀಯವಾಗಿ ಸರಿ'ಯಾದ ಭಾವನೆಗಳಿಂದ ರೂಪಿತವಾದ ಬೌದ್ಧಿಕ

ಸಮೀಪದೃಷ್ಟಿಯಿಂದ (intellectual myopia) ಉದ್ಭವಿಸಿರುತ್ತವೆ. ಅನಂತಮೂರ್ತಿಯವರು ಭಾಷೆ, ಸಂಸ್ಕೃತಿ, ಸಂಪ್ರದಾಯ, ಆಧುನಿಕತೆ, ಧರ್ಮ ಮತ್ತು ಧರ್ಮನಿರಪೇಕ್ಷತ್ವ ಕುರಿತಂತೆ ತಮಗಿರುವ ಅನಿಸಿಕೆಗಳ ಬಗ್ಗೆ ಪಲ್ಲಟಕಾರಿ ಎಂದು ತೋರುವ ಗುಂಪುಗಳು ಹೇರುವ ಅತೀವ ಒತ್ತಡಕ್ಕೆ ಎಂದಿಗೂ ಮಣಿದಿಲ್ಲ. ಭಾರತೀಯ ಸಮಾಜದ ನಿರ್ದಿಷ್ಟ ಸಂದರ್ಭದಲ್ಲಿ ಜಾತಿಯನ್ನು ಕುರಿತಂತೆ, ಮತ್ತು ವಿಶಾಲ ಪರಿಧಿಯಲ್ಲಿ ಪೂರ್ವ ಮತ್ತು ಪಶ್ಚಿಮದ ನಡುವಿನ ಘರ್ಷಣೆ ಕುರಿತಂತೆ ಅವರ ಅನಿಸಿಕೆಗಳಿಗೆ ಈ ಮಾತು ಹೊಂದುತ್ತದೆ. ವಿವಾದಾತ್ಮಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಚರ್ಚೆಗಳಿಗೆ ಸಂಬಂಧಪಟ್ಟ ಕಥನದ ಸ್ವಭಾವ ಮತ್ತು ದನಿಯನ್ನು ನಿರ್ಧರಿಸುವ ಪಲ್ಲಟಕಾರಿ ಎಂದು ತೋರುವ ಗುಂಪುಗಳ ಒತ್ತಡಕ್ಕೆ ಅನಂತಮೂರ್ತಿಯವರು ಬಾಗಿಲ್ಲ. ಅನಂತಮೂರ್ತಿಯವರು ನಮ್ಮ ಕಾಲದ ಪ್ರಧಾನ ಆಕೃತಿಗಳಿಗೆ ಪರ್ಯಾಯಗಳನ್ನು ಸತತವಾಗಿ ಹುಡುಕುತ್ತ ಬಂದಿದ್ದಾರೆ. ಏಕೆಂದರೆ, ಎಲ್ಲ ಸಮಸ್ಯೆಗಳನ್ನು ಪರಿಹರಿಸುವ ಒಂದು ಪರಿಹಾರವನ್ನಾಗಲಿ ಒಂದು ಸಿದ್ಧಾಂತವನ್ನಾಗಲಿ ಯಾವ ಸಮಾಜವೂ ಸೃಷ್ಟಿಸಲಾರದೆಂಬ ವಾಸ್ತವದ ಬಗ್ಗೆ ಅವರು ಎಚ್ಚರದಿಂದಿದ್ದಾರೆ. ಈ ಅರ್ಥದಲ್ಲಿ ಅವರು ವಿಭಿನ್ನ ದೃಷ್ಟಿಕೋನಗಳನ್ನು ಅಕ್ಕಪಕ್ಕದಲ್ಲಿಡುವ ಪ್ರಯತ್ನವನ್ನಷ್ಟೇ ಮಾಡಿದ್ದಾರೆ, ಆದರೆ ಅವುಗಳ ನೋಟಗಳನ್ನು ಸರಳೀಕರಿಸಿಲ್ಲ. ಹಾಗೆಯೆ, ಅವರು ಯಾವ ದೃಷ್ಟಿಕೋನವನ್ನೂ ಎತ್ತಿಹಿಡಿದಿಲ್ಲ, ಮತ್ತು ಇನ್ನೂ ಮುಖ್ಯವಾಗಿ, ಅವರು ವಿಚಾರಗಳಿಗೆ ಮತ್ತು ಸಿದ್ಧಾಂತಗಳಿಗೆ ಸಂಬಂಧಪಟ್ಟಂತೆ ಯಾವ ತಾರತಮ್ಯವನ್ನೂ ಉಂಟುಮಾಡಿಲ್ಲ. ಹಾಗೆ ನೋಡಿದರೆ, ಒಬ್ಬ ಸೃಜನಶೀಲ ಬರಹಗಾರರಾಗಿ ಅನಂತಮೂರ್ತಿಯವರ ವೈಯಕ್ತಿಕ ಬೆಳವಣಿಗೆಯು ರೂಪಕಗಳನ್ನು ಸೃಷ್ಟಿಸುವ ಅವರ ಆಂತರಿಕ ಸಾಮರ್ಥ್ಯದಿಂದ ಗುರುತಿಸಲ್ಪಟ್ಟಿದೆ. ಅವರು ವಿವಾದಾತ್ಮಕ ತಾತ್ವಿಕ ವ್ಯವಸ್ಥೆಗಳಿಂದ ಹಾಗು ಸೈದ್ಧಾಂತಿಕ ನಿಲುವುಗಳಿಂದ ರೂಪಕಗಳನ್ನು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿದ್ದಾರೆ. ಒಬ್ಬ ಸಾಂಸ್ಕೃತಿಕ ವಿಮರ್ಶಕರಾಗಿಯೂ ಅನಂತಮೂರ್ತಿಯವರು ಸಂಗತಿಗಳನ್ನು ಅರ್ಥಮಾಡಿಕೊಳ್ಳುವುದರಲ್ಲೇ ಹೆಚ್ಚು ರೂಪಕಾತ್ಮಕವಾಗಿ ಮತ್ತು ಸಾಂಕೇತಿಕವಾಗಿ ಯೋಚಿಸುತ್ತಾರೆ – ಅವರ ಈ ಗುಣವನ್ನು ಬಹುತೇಕವಾಗಿ ಅಪಾರ್ಥ ಮಾಡಿಕೊಳ್ಳಲಾಗಿದೆ ಮತ್ತು ಅಪವ್ಯಾಖ್ಯಾನಕ್ಕೆ ಒಳಪಡಿಸಲಾಗಿದೆ.

ಸಂಪ್ರದಾಯ ಮತ್ತು ಸೃಜನಶೀಲತೆ ಕುರಿತ ಪ್ರಬಂಧಗಳಲ್ಲಿ ಅನಂತಮೂರ್ತಿಯವರು ತಮ್ಮ ಸೃಜನಶೀಲ ಮತ್ತು ವಿಮರ್ಶಾ ಪ್ರಕ್ರಿಯೆಗಳು ಎಲ್ಲ ಬಗೆಯ ಪ್ರಭಾವಗಳಿಂದ ರೂಪುಗೊಂಡಿವೆ ಎಂಬ ಸತ್ಯವನ್ನು ಎಂದಿಗೂ ಮರೆಮಾಚಿಲ್ಲ. ಅವರು ತಮಗೆ ಲಭ್ಯವಿರುವ ಶ್ರೀಮಂತ ಆಕರಗಳಿಂದ ಪಡೆದುಕೊಳ್ಳಲು ಎಂದಿಗೂ ಹಿಂಜರಿದಿಲ್ಲ – ಅವು ಕನ್ನಡ, ಸಂಸ್ಕೃತ, ಶಾಸ್ತ್ರೀಯ, ಜಾನಪದ, ಪೌರ್ವಾತ್ಯ, ಪಾಶ್ಚಿಮಾತ್ಯ, ಪ್ರಾಚೀನ ಅಥವಾ ಆಧುನಿಕ ಮೂಲಗಳಿರಬಹುದು – ಹಾಗೆ ಎಲ್ಲ



ಬಗೆಯ ಮೂಲಗಳಿಂದ ಎರವಲು ಪಡೆಯುವಂತಹ ಉದಾರವಾದಿ ನಿಲುವಿಗೆ ನುಸುಳಬಹುದಾದ ಎಲ್ಲ ರೀತಿಯ ವೈರುಧ್ಯಗಳು ಅವರ ವಿಮರ್ಶಾ ಸಂವೇದನೆಯನ್ನು ಕುಂಠಿತಗೊಳಿಸದಂತೆ ಎಚ್ಚರವಹಿಸಿದ್ದಾರೆ. 'ಕರ್ನಾಟಕದಲ್ಲಿ ಬೆಳೆಯುವುದು' (Growing up in Karnataka), 'ಒಂದು ಅಸ್ಮಿತೆಗಾಗಿ ಹುಡುಕಾಟ' (The Search for an Identity), 'ಭಾರತದಲ್ಲಿ ಬರಹಗಾರನಾಗಿರುವುದು' (Being a Writer in India) ಮತ್ತು 'ಛಿದ್ರಗೊಂಡ ನೋಟ – ಭಾರತದ ಲೇಖಕನ ಸಂದಿಗ್ಧಗಳು' (The Fragmented Vision: Dilemmas of the Indian Writer) ಮುಂತಾದ ಪ್ರಬಂಧಗಳಲ್ಲಿ ಅನಂತಮೂರ್ತಿಯವರು ಒಬ್ಬ ಕನ್ನಡ ಬರಹಗಾರರಾಗಿ ಅವರು ಮತ್ತು ಭಾರತೀಯ ಭಾಷೆಗಳ ಇತರ ಲೇಖಕರು ವಿಜಾತೀಯ ಸ್ವಭಾವವುಳ್ಳ ಭಾರತದಂತಹ ಸಮಾಜದಲ್ಲಿ ಎದುರಿಸಲೇಬೇಕಾದ ಎಲ್ಲ ಸಮಸ್ಯೆಗಳನ್ನು ಚರ್ಚಿಸುತ್ತಾರೆ. ಅತ್ಯಂತ ಸೂಕ್ಷ್ಮನಾದ ಯಾವುದೇ ವ್ಯಕ್ತಿಗೆ ಆರಾಮಕೊಡುವ ಏಕಮಾತ್ರ ಆಯ್ಕೆ ಸಾಧ್ಯವಿಲ್ಲದಿರುವಾಗ, ಎಲ್ಲ ರೀತಿಯ ಮೂಲಗಳಿಂದ ಬರುವ ಪ್ರಭಾವಗಳು ಊರ್ಜಿತವೆಂದು ಕಾಣುವ ಒಬ್ಬ ಲೇಖಕನಿಗೆ ಸಮಸ್ಯೆಗಳು ಅತ್ಯಂತ ತೀವ್ರವಾಗುತ್ತವೆ. ಕಾರ್ಯಕರ್ತರಿಗೆ ಮತ್ತು ಸಿದ್ಧಾಂತಪ್ರತಿಪಾದಕರಿಗೆ (ideologue) ಕೆಲವು ಆಕರಗಳನ್ನು/ಪ್ರಭಾವಗಳನ್ನು ಒಂದು ಒಳ್ಳೆಯ ಸಮಾಜಕ್ಕೆ ಪ್ರತಿಕೂಲವಾದವು ಎಂದು ಅವುಗಳನ್ನು ನಾಶಮಾಡುವುದು ಅಥವ ತಳ್ಳಿಹಾಕುವುದು ಸುಲಭ. ಆದರೆ ಬದುಕಿನ ಬಗ್ಗೆ ತಮಗಿರುವ ಕಾಣ್ಕೆಯಲ್ಲಿ ಎಲ್ಲವನ್ನೂ ಒಳಗೊಳ್ಳುವ ಮತ್ತು ಸಂಪೂರ್ಣ ದೃಷ್ಟಿಯುಳ್ಳ ಬರಹಗಾರಳಿ/ನಿಗೆ ಸಾಂಸ್ಕೃತಿಕ ಪ್ರಭಾವಗಳನ್ನು ತೊಡೆದುಹಾಕುವ ಪ್ರವೃತ್ತಿ ನಿಜವಾಗಿಯೂ ಸಂಕುಚಿತದ್ದಾಗಿಯೂ ಮತ್ತು ಒಪ್ಪಲಾರದ ವಿಷಯವಾಗಿಯೂ ತೋರುತ್ತದೆ. ಈ ಕಾರಣಕ್ಕಾಗಿಯೇ ಅನಂತಮೂರ್ತಿಯವರು ಸಂಸ್ಕೃತ ಮತ್ತು ಕನ್ನಡಗಳ ನಡುವೆ, ಅಥವಾ ಇತರ ಭಾರತೀಯ ಭಾಷೆಗಳ ನಡುವೆ, ಜಾನಪದ ಮತ್ತು ಶಾಸ್ತ್ರೀಯಗಳ ನಡುವೆ ಅಥವಾ ಪೂರ್ವ ಮತ್ತು ಪಶ್ಚಿಮಗಳ ನಡುವೆ ಯಾವ ವಿರೋಧವನ್ನೂ ಕಾಣುವುದಿಲ್ಲ. (ಆದರೆ, ವಸಾಹತೋತ್ತರ ಭಾರತದ ಸಾಂಸ್ಕೃತಿಕ ಹಾಗು ಶೈಕ್ಷಣಿಕ ವಲಯಗಳಲ್ಲಿ ಪೌರ್ವಾತ್ಯ/ಪೂರ್ವವನ್ನು ಭಾವಪರವಶತೆಯಿಂದ ಆವಾಹಿಸುವ ಪ್ರವೃತ್ತಿಯಿದೆ, ಅಲ್ಲದೆ ಕಾರ್ಯರೂಪದಲ್ಲಿ ಪಶ್ಚಿಮದ ಮೆಚ್ಚಿಗೆ ಮತ್ತು ಬೆಂಬಲವನ್ನು ದಯನೀಯವಾಗಿ ಬಯಸುವ ಆಸೆಯಿದೆ ಎಂಬ ಸತ್ಯವು ಅನಂತಮೂರ್ತಿಯವರಿಗೆ ಖಂಡಿತ ತಿಳಿದಿದೆ. ಈ ವಿಚಾರವನ್ನು 'ಪೂರ್ವಕ್ಕೆ ಮುಖಮಾಡಿರುವುದು – ಪಶ್ಚಿಮಕ್ಕೆ ಪ್ರಯಾಣ ಮಾಡುವುದು' (Facing the East: Journeying to the West) ಎಂಬ ಪ್ರಬಂಧದಲ್ಲಿ ನಿಚ್ಚಳವಾಗಿ ವಿವರಿಸಲಾಗಿದೆ).

ಅನಂತಮೂರ್ತಿಯವರು ತಮ್ಮ ಆಯ್ಕೆಯನ್ನು ಕನ್ನಡ ಭಾಷೆಯ ಪ್ರತಿಭೆಯೊಂದಿಗೇ ಹೊಂದಿಸುತ್ತಾರೆ. ಕನ್ನಡದ ಪ್ರತಿಭೆಯು ಎಂದಿಗೂ ತನ್ನ

ಶ್ರೀಮಂತ ಹಾಗೂ ದಟ್ಟವಾದ ಸಾಂಸ್ಕೃತಿಕ ನೆಲೆಯನ್ನು ಕಳೆದುಕೊಳ್ಳದೆ ಶತಮಾನಗಳಿಂದ ಸಂಸ್ಕೃತ ಮತ್ತು ಪಾಶ್ಚಿಮಾತ್ಯ ಜ್ಞಾನಮೀಮಾಂಸೆಯ ಸಂಪ್ರದಾಯಗಳೊಂದಿಗೆ ಸೃಜನಶೀಲ ವಿನಿಮಯಗಳನ್ನು ಸ್ಥಾಪಿಸಿದೆ. ಅನಂತಮೂರ್ತಿಯವರು ಕನ್ನಡದಲ್ಲಿ ಬರೆಯುವುದು ಅವರ ಪ್ರಜ್ಞಾಪೂರ್ವಕ 'ರಾಜಕೀಯ' ಆಯ್ಕೆಯೆನ್ನುತ್ತಾರೆ. ಕನ್ನಡದಲ್ಲಿ ಬರೆಯುವುದರ ಮಹತ್ವವೇನೆಂದರೆ ಕನ್ನಡದ ಸಂಪ್ರದಾಯ ತನ್ನ ಸಾರಭೂತವಾದ ಚೈತನ್ಯವನ್ನು ಕಳೆದುಕೊಳ್ಳದೆ ಎಲ್ಲ ಪ್ರಭಾವಗಳನ್ನು ಅಂತರ್ಗತಗೊಳಿಸಿಕೊಂಡಿದೆ. ಹಿಂದಿನಕಾಲದ ಮತ್ತು ವರ್ತಮಾನದ ಶ್ರೇಷ್ಠ ಕನ್ನಡ ಲೇಖಕರು ಎಲ್ಲ ಕಾಲದ ಎಲ್ಲ ಸಂಪ್ರದಾಯಗಳ ಒಳ್ಳೆಯ ಮಿಶ್ರಣವಾದ ಒಂದು ಕನ್ನಡ ವಿಶ್ವವನ್ನು ಸೃಷ್ಟಿಸಿದ್ದಾರೆ. ಸೌಂದರ್ಯ ಮೀಮಾಂಸೆ ಮತ್ತು ಕಾವ್ಯಮೀಮಾಂಸೆಗೆ ಸಂಬಂಧಪಟ್ಟಂತೆ ಹಾಗೂ ಆಧುನಿಕ ಪ್ರಪಂಚದ ಮಹತ್ತರ ಮುನ್ನಡೆಗಳನ್ನು ಕುರಿತಂತೆ ಕನ್ನಡದ ಜಗತ್ತು ತನ್ನ ಒಳಗೂಡಿಸಿಕೊಳ್ಳುವ ಗುಣದಿಂದಾಗಿ ತನ್ನದೇ ಆದ ವಿಶಿಷ್ಟ ನುಡಿಗಟ್ಟನ್ನು ರೂಪಿಸಿಕೊಂಡಿದೆ. ವೇದವ್ಯಾಸ, ವಾಲ್ಮೀಕಿ, ಕಾಳಿದಾಸ, ಕುಂತಕ, ಭಕ್ತಿ ಕವಿಗಳಿಂದ ಹಿಡಿದು ಪಶ್ಚಿಮದ ಆಧುನಿಕರವರೆಗೆ, ಕನ್ನಡದ ಪ್ರಜ್ಞೆ ತನ್ನ ಸಾಂಸ್ಕೃತಿಕ ಬೇರುಗಳನ್ನು ಕಳೆದುಕೊಳ್ಳದೆ ವಿಭಿನ್ನ ಮೂಲಗಳು ಮತ್ತು ವಿರುದ್ಧಾತ್ಮಕವಾದ ಪರಂಪರೆಗಳೊಂದಿಗೆ ಸೆಣಸಾಡಿದೆ. ಅನಂತಮೂರ್ತಿಯವರು ಪಂಪ, ಕುಮಾರವ್ಯಾಸ, ಬಸವ, ಕುವೆಂಪು, ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮತ್ತು ಆಧುನಿಕರನ್ನು ಆವಾಹಿಸುವಾಗ – ಅದರಲ್ಲೂ ಮುಸಲ್ಮಾನ ಮತ್ತು ದಲಿತ ದೃಷ್ಟಿಕೋನಗಳು ಕನ್ನಡ ಪ್ರಜ್ಞೆಗೆ ಮೂಲಭೂತವಾಗಿ ಮುಖ್ಯವಾಗಿರುವಾಗ – ಅವರು ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಧಾರಣಸಾಮರ್ಥ್ಯ ಮತ್ತು ಶಕ್ತಿಯನ್ನು ಗುರುತಿಸುತ್ತಿದ್ದಾರೆ. ಕನ್ನಡ ಭಾಷೆ ಮತ್ತು ಸಂಸ್ಕೃತಿ ಸಾದೃಶ್ಯವಿಲ್ಲದ ಸಾಂಸ್ಕೃತಿಕ ಸಮುದಾಯಗಳ ಧೋರಣೆಗಳು, ಕಾಳಜಿಗಳು, ಮೌಲ್ಯಗಳು, ಸಿದ್ಧಾಂತಗಳು ಮತ್ತು ಇತಿಹಾಸಗಳನ್ನು ತನ್ನ ಚೌಕಟ್ಟಿನೊಳಗೆ ಅಡಗಿಸಬಲ್ಲದು. ಅನಂತಮೂರ್ತಿ ಒಬ್ಬ ಬರಹಗಾರರಾಗಿ ಮತ್ತು ವಿಮರ್ಶಕರಾಗಿ ತಮ್ಮ ವೈಯಕ್ತಿಕ ಬೆಳವಣಿಗೆಯನ್ನು ವೈಷಮ್ಯಗಳಿಂದ ತುಂಬಿದ ಇಂತಹ ಸಂಕೀರ್ಣ ಹಿನ್ನೆಲೆಗೆ ಸಂಬಂಧಪಟ್ಟಂತೆ ಗುರುತಿಸುತ್ತಾರೆ. ಈ ಕಾರಣದಿಂದಾಗಿಯೇ ಅನಂತಮೂರ್ತಿಯವರ ಬರಹಗಳು ರೂಪಕಾತ್ಮಕವಾಗಿ ಸಮೃದ್ಧವಾಗಿವೆ ಮತ್ತು ಎಲ್ಲ ರೀತಿಯ ಅನ್ವಯಗಳಿಂದ ಕೂಡಿವೆ. ಭಾರತದ ಅರಾಜಕತೆಯ ಸಾಂಸ್ಕೃತಿಕ ಸಂಪ್ರದಾಯಗಳ ಬಗ್ಗೆ ಆಳವಾದ ತಿಳುವಳಿಕೆಯಿಲ್ಲದವರಿಗೆ ಈ ರೀತಿಯ ಗುಣ ಹೊಂದಿರುವ ಅನಂತಮೂರ್ತಿಯವರ ಬರಹಗಳು ಅಸ್ತವ್ಯಸ್ತವಾಗಿ ಮತ್ತು ಅರ್ಥಹೀನವಾಗಿ ಕಾಣುತ್ತವೆ. ಅನಂತಮೂರ್ತಿಯವರು ಅಸದೃಶವಾದ ಅಂಶಗಳನ್ನು ಬೆಸೆಯಲು ಅಥವಾ ಸಮನ್ವಯಗೊಳಿಸಲು ನಿರಾಕರಿಸುವುದು ಅವರು ಹೇರಳವಾಗಿ ಎರವಲು ಪಡೆದುಕೊಳ್ಳುವ ಬೌದ್ಧಿಕ



ಮತ್ತು ಸಾಂಸ್ಕೃತಿಕ ಪರಂಪರೆಗಳಿಗೆ ಅವರು ಸಲ್ಲಿಸುವ ಗೌರವವನ್ನು ಸೂಚಿಸುತ್ತದೆ. ಅವರು ತಮ್ಮನ್ನು 'ವಿಮರ್ಶಿಸುವ ಒಳಗಿನವ' (critical insider) ಎಂದು ಬಣ್ಣಿಸಿಕೊಳ್ಳುತ್ತಾರೆ.

ಅನಂತಮೂರ್ತಿಯವರು, ಒಬ್ಬ ಸಾಹಿತ್ಯದ ವಿದ್ಯಾರ್ಥಿಯಾಗಿ ಮತ್ತು ಸಾಹಿತ್ಯಕ ಹಾಗು ಸಾಂಸ್ಕೃತಿಕ ವಿಮರ್ಶಕರಾಗಿ, ಸೃಷ್ಟಿಸುವ ಕ್ರಿಯೆ ಮತ್ತು ಸೃಷ್ಟಿಸಿದವನನ್ನೂ ಮೀರಿದ ಅದರ ಅರ್ಥದ ಬಗ್ಗೆ ಜಿಜ್ಞಾಸೆಯನ್ನು ಹೊಂದುತ್ತ ಬಂದಿದ್ದಾರೆ. ಒಂದು ಸೃಜನಶೀಲ ಕೃತಿಯ ಅರ್ಥವನ್ನು ಮತ್ತು ಮಹತ್ವವನ್ನು ಅದರ ಕರ್ತೃವಿನ ಮತ್ತು ಅದು ನಿಕಟ ಸಂಬಂಧಹೊಂದಿರುವ ಸಮುದಾಯದ ಉದ್ದೇಶವನ್ನು ಆಧರಿಸಿ ನಿರ್ಣಯಿಸಲಾಗುವುದಿಲ್ಲ. ಒಂದೇ ಸಮಾಜದ ಭಾಗವಾಗಿರುವ ಅನೇಕ ಸಮುದಾಯಗಳ ಅಸ್ತಿತ್ವದ ವಾಸ್ತವಗಳಿಗೆ ಎಲ್ಲ ಸೃಜನಶೀಲ ಕೃತಿಗಳೂ ಸಂಬಂಧಪಡದೆ ಇರಬಹುದೆಂಬ ಅರಿವು ಅನಂತಮೂರ್ತಿಯವರಿಗಿದೆ. ಸರ್ವಕಾಲಕ್ಕೂ ಅತ್ಯುತ್ತಮ ಕೃತಿಗಳೆಂದು ಬಹಳ ಕಾಲದಿಂದ ಕೊಂಡಾಡಲ್ಪಟ್ಟಿರುವ ಮತ್ತು ಗೌರವಕ್ಕೆ ಪಾತ್ರವಾಗಿರುವ ಕಲಾಕೃತಿಗಳಲ್ಲಿ ತಮಗೆ ಸಂಬಂಧಪಟ್ಟಂತೆ ಮೌಲ್ಯಯುತವಾದದ್ದು ಯಾವುದೂ ಇಲ್ಲವೆಂದು ಅನೇಕ ಕಡೆಗಣಿಸಲ್ಪಟ್ಟ ಮತ್ತು ದಮನಿತ ಸಮುದಾಯಗಳಿಗೆ ಅನ್ನಿಸಬಹುದು. ಉದಾಹರಣೆಗೆ, ದಲಿತರಿಗೆ ಅವರ ಅನುಭವೀಯ/ಅಸ್ತಿತ್ವೀಯ ವಾಸ್ತವಗಳನ್ನು ಬಹಳ ಮಹತ್ತರವಾದ ರೀತಿಯಲ್ಲಿ ಪರಿಗಣಿಸದ ಕನ್ನಡ ಸಾಹಿತ್ಯದ ಬಹುತೇಕ ಕೃತಿಗಳು ಮುಖ್ಯವಲ್ಲವೆಂದು ತೋರಬಹುದು. ಆದ್ದರಿಂದ ದಲಿತರು ಅಥವಾ ಸಮಾಜದ ಬೇರೆ ದಮನಿತ ವರ್ಗದವರು ಶಾಸ್ತ್ರೀಯ ಸಂಪ್ರದಾಯವನ್ನು ತಾವು ಜೀವಿಸುವ ಅನುಭವಗಳಿಗೆ ಅಪ್ರಸ್ತುತ ಮತ್ತು ನಿಷ್ಪ್ರಯೋಜಕ ಎಂದು ತಿರಸ್ಕರಿಸಬಹುದು. 'ಭಾರತೀಯ ಸಾಹಿತ್ಯಕ್ಕೆ ದಲಿತರ ಕೊಡುಗೆ' ಎಂಬ ಪ್ರಬಂಧದಲ್ಲಿ ಮನಸ್ಸನ್ನು ಕಲಕುವ ಈ ವಿಚಾರಕ್ಕೆ ನಮ್ಮ ಗಮನವನ್ನು ಸೆಳೆಯುತ್ತಾರೆ ಮತ್ತು ದಲಿತರು ಹೇಗೆ ತಮ್ಮ ಮೌಖಿಕ ಪರಂಪರೆಗಳಿಗೆ ಮತ್ತು ಸಾಂಸ್ಕೃತಿಕ ಕಥನಗಳಿಗೆ ಸಾಗುತ್ತಾರೆ ಎಂದು ಅನಂತಮೂರ್ತಿಯವರು ವಿವರಿಸುತ್ತಾರೆ. ದಲಿತ ಸಂಸ್ಕೃತಿಯ ಮೌಖಿಕ ಸಂಪ್ರದಾಯಗಳನ್ನು ಕುರಿತು ಮಾತನಾಡುತ್ತ ಅನಂತಮೂರ್ತಿಯವರು ಆಧುನಿಕ ದಲಿತ ದರ್ಶನವು ತನ್ನ ಸಾಂಸ್ಕೃತಿಕ ಮೂಲಗಳಿಗೆ ಹಿಂದಿರುಗುತ್ತದೆ ಮತ್ತು ತನ್ನ ಜಗತ್ತಿನ ಭಾಗವಾಗಿರುವ ಧಾರ್ಮಿಕ ಆಚರಣೆಗಳು, ಜಾನಪದೀಯ ಕತೆಗಳು, ಪುರಾಣಗಳು ಮತ್ತು ಮಹಾಕಾವ್ಯಗಳಿಂದ ಸೃಜನಶೀಲ ಶಕ್ತಿಯನ್ನು ಪಡೆಯುತ್ತದೆಯೆಂದು ವಾದಿಸುತ್ತಾರೆ. ಅನಂತಮೂರ್ತಿಯವರು ಇದನ್ನು ಭಾರತೀಯ ಸಂಸ್ಕೃತಿಯ ಕ್ರಿಯಾಶೀಲವಾದ 'ಹಿತ್ತಲು' ಎಂದು ತಿಳಿಯುತ್ತಾರೆ. ಇದು ಸಂಸ್ಕೃತ, ಕನ್ನಡ ಅಥವಾ ಯಾವುದೇ ಮುಖ್ಯವಾಹಿನಿಯ ಭಾಷೆಗಳಿಂದ ನಿರ್ಮಿಸಲ್ಪಟ್ಟ 'ಜಗುಲಿ'ಯಷ್ಟೇ ಶ್ರೀಮಂತವಾಗಿದೆ ಮತ್ತು ಅರ್ಥಪೂರ್ಣವಾಗಿದೆ

ಎನ್ನುತ್ತಾರೆ. ಭಾರತೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಪರಂಪರೆಗಳಿಗೆ ಹಾಗೂ ಅವುಗಳ ಬಹುವಿಧವಾದ ಕಥನಗಳಿಗೆ 'ಹಿತ್ತಲು' ಮತ್ತು 'ಜಗುಲಿ'ಗಳೆರಡರ ಅನುಸಂಧಾನವು ಅಪಾರವಾದ ಜೀವಂತಿಕೆಯನ್ನು ನೀಡುತ್ತದೆ ಎಂದು ಅನಂತಮೂರ್ತಿಯವರು ವಾದಿಸುತ್ತಾರೆ.

ಅನಂತಮೂರ್ತಿಯವರ ಚಿಂತನಾ ಪ್ರಕ್ರಿಯೆಯ ರಚನೆಯು ಅತ್ಯಂತ ಸೂಕ್ಷ್ಮ ವ್ಯತ್ಯಾಸಗಳಿಂದ ಕೂಡಿದೆ ಮತ್ತು ಸೃಜನಶೀಲ ಸೂತ್ರದ ನವಿರಾದ ಸ್ವಭಾವದ ಬಗ್ಗೆ ಸರಳೀಕೃತವಾದ ವ್ಯಕ್ತಿನಿಷ್ಠ ತೀರ್ಮಾನಗಳನ್ನು ಹೊಂದಿಲ್ಲ. ಅನಂತಮೂರ್ತಿಯವರು 'ಹಿತ್ತಲಿ'ನ ಪ್ರಾಮುಖ್ಯತೆಯನ್ನು ಸ್ಥಾಪಿಸುತ್ತಾರೆಯಾದರೂ, ಶಾಸ್ತ್ರೀಯ ಪರಂಪರೆಗಳನ್ನು ಹೀನಾಯಭಾವದಿಂದ ನೋಡುವುದಿಲ್ಲ. ಅದ್ಭುತವಾಗಿ ಸೂಕ್ಷ್ಮವಾದ 'ವಾಲ್ಮೀಕಿಯ ನೆವದಲ್ಲಿ' ಎಂಬ ಪ್ರಬಂಧದಲ್ಲಿ ರಾಮಾಯಣವನ್ನು ಕುರಿತು ಮಾತನಾಡುತ್ತ ಹೇಗೆ ಒಂದೇ ಒಂದು ಭಾವನೆ – ಅಂದರೆ ಒಂದು ಹಕ್ಕಿಯ ಸಾವಿನಿಂದ ಉಂಟಾದ ಅತೀವ ಶೋಕ ಮತ್ತು ಯಾತನೆ – ಒಬ್ಬ ಕವಿಯ ಮೂಲಕ ನಮಗೆ ಮಾನವನ ದಶೆ/ಸ್ಥಿತಿಯನ್ನು (human predicament) ಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗಿಸುತ್ತದೆಂದು ತೋರಿಸುತ್ತಾರೆ. ನಿಜವಾಗಿ ಸೂಕ್ಷ್ಮವಾದ ಮನಃಸ್ಥಿತಿಯಿದ್ದಾಗ ಒಂದು ಚಿಕ್ಕ ದೈನಂದಿನ ವಿವರಕ್ಕೂ ಇಡೀ ಮನುಷ್ಯಕುಲದ ದುರಂತದ ವಿಧಿಯನ್ನು ತೆರೆದಿಡುವ ಸಾಮರ್ಥ್ಯವಿರುತ್ತದೆ. ಒಬ್ಬ ಸೃಜನಶೀಲ ಕಲೆಗಾರನ ಪ್ರಜ್ಞೆಯ ಸ್ಥಿತಿಯನ್ನು ವರ್ಣಿಸುವಾಗ ಅನಂತಮೂರ್ತಿಯವರು 'ನಗ್ನತೆ'ಯ ರೂಪಕವನ್ನು ಬಳಸುತ್ತಾರೆ. ಒಬ್ಬ ಸೃಜನಶೀಲ ಕಲೆಗಾರ್ತಿ/ಕಲೆಗಾರನ ಅಸ್ತಿತ್ವೀಯ ವ್ಯಕ್ತಿತ್ವವನ್ನು ಬದುಕಿನ ಯಾತನಾಮಯ ಹಾಗೂ ತಲ್ಲಣಿಸುವ ಅನುಭವಗಳು ಬಾಧಿಸಿದರೂ ಆಕೆಗೆ/ಆತನಿಗೆ ತನ್ನನ್ನು ಹೇಗೆ ಶುದ್ಧಪಡಿಸಿಕೊಳ್ಳಬೇಕೆಂಬ ಅರಿವು ಇರುತ್ತದೆ. ಸೃಜನಶೀಲ ಪ್ರಕ್ರಿಯೆಯು ಒಂದು ನಿರ್ದಿಷ್ಟವಾದ 'ಇರುವಿಕೆ'ಯ ಸ್ಥಿತಿಯಿಂದ ವಿಕಸನ ಹೊಂದುವ ('ಆಗುವಿಕೆ'ಯ) ಒಂದು ಕ್ರಿಯೆ. ಮಾನವ ಜೀವನದ ತವಕ ಮತ್ತು ಸಂಕಟದಿಂದ ಎಲ್ಲ ಉತ್ತಮ ಕಲಾಕೃತಿಗಳೂ ಹುಟ್ಟುತ್ತವೆ, ಆದರೆ ಅವು ಅವಶ್ಯವಾಗಿ ಆಧ್ಯಾತ್ಮಿಕ ಮೀರುವಿಕೆಯನ್ನು ಪಡೆಯುತ್ತವೆ. ಅಂದರೆ, ಕ್ಷಣಿಕವಾದ ಪ್ರಪಂಚಕ್ಕೆ ಸೇರಿದ ಇತಿಹಾಸದ ಹೊರೆಯನ್ನು ಅಳುಕಿಲ್ಲದೆ ಹೊತ್ತರೆ ಮಾತ್ರ ಅನಂತವಾದದ್ದರ, ಶಾಶ್ವತವಾದದ್ದರ ಒಂದು ನಸುನೋಟವನ್ನು ಗಳಿಸಲು ಸಾಧ್ಯ. ಶಾಶ್ವತವಾದದ್ದರ ಕಡೆಗೆ ಹೋಗುವಾಗ ಯಾವಾಗಲಾಗಲಿ ಕ್ಷಣಿಕವಾದದ್ದನ್ನು ಕಡೆಗಣಿಸುವಂತಿಲ್ಲ.

ಅನಂತಮೂರ್ತಿಯವರು ಸಂಪ್ರದಾಯ ಮತ್ತು ವೈಯಕ್ತಿಕ ಸೃಜನಶೀಲತೆಯ ವಿಷಯಗಳನ್ನು 'ಸಂಪ್ರದಾಯ ಮತ್ತ ಸೃಜನಶೀಲತೆ', 'ಪಠ್ಯತೆಯ ಪ್ರೇರಕಶಕ್ತಿಗಳು' ಎಂಬಂತಹ ಪ್ರಬಂಧಗಳಲ್ಲಿ ಶೋಧಿಸುತ್ತಾರೆ. ಗಾಢವಾದ ಮೌಖಿಕ ಸಂಪ್ರದಾಯಗಳನ್ನು ಹೊಂದಿದ್ದ ಸಮುದಾಯಗಳಿಗಿದ್ದ ಸಂತೋಷದಾಯಕವಾದ ಮತ್ತು



ಚೇತೋಹಾರಿಯಾದ ಅನುಭವಗಳನ್ನು ಒಬ್ಬ ಆಧುನಿಕ ಲೇಖಕ ಹೊಂದಿರಲು ಸಾಧ್ಯವಿಲ್ಲವೆಂದು ವಾದಿಸುತ್ತಾರೆ. ಏಕೆಂದರೆ, ತಂತ್ರಜ್ಞಾನಪ್ರಧಾನವಾದ ಹಾಗು ಅತ್ಯಂತ ಅಮಾನವೀಯ ಸಮಾಜಗಳಲ್ಲಿ ಒಬ್ಬ ಆಧುನಿಕ ಬರಹಗಾರ ಪರಕೀಯತೆಯನ್ನು ಅನುಭವಿಸುತ್ತಿರುತ್ತಾಳೆ/ನೆ. ಆಧುನಿಕ ಬರಹಗಾರ – ಮತ್ತು ಓದುಗ – ನಗರದ ಪರಿಸರದಲ್ಲಿ ಸಮುದಾಯದಿಂದ ಬೇರ್ಪಡಿಸಲ್ಪಟ್ಟು ಪರಕೀಯತೆ ಮತ್ತು ಅಗಲಿಕೆಯ ಅನುಭವವನ್ನು ಏಕಾಂಗಿಯಾಗಿ ಎದುರಿಸಬೇಕು. ಆಧುನಿಕ ಕಾಲದಲ್ಲಿ ಪಠ್ಯತೆಯ ಪ್ರೇರಕಶಕ್ತಿಗಳು ಮೌಖಿಕ ಸಂಸ್ಕೃತಿಗಳಿಗಿಂತ ಬಹಳ ಭಿನ್ನವಾಗಿವೆ ಎನ್ನುತ್ತಾರೆ. ಮೌಖಿಕ ಸಂಸ್ಕೃತಿಗಳಿಗೆ ಸಾವಯವ ಸಮಾಜಗಳು ಬೆಂಬಲ ನೀಡುವ ಆಧಾರಗಳಾಗಿದ್ದವು. ಸೃಜನಶೀಲ ಪ್ರಕ್ರಿಯೆಗಳು ಮತ್ತು ಸೃಜನಶೀಲತೆ ಹಾಗೂ ಆ ಕಾಲದ ಚೈತನ್ಯದ ನಡುವಿನ ಸಂಬಂಧದ ಸ್ವಭಾವವನ್ನು ಶೋಧಿಸುವ ಪ್ರಬಂಧಗಳು ಒಬ್ಬ ಬರಹಗಾರನ ಪಕ್ವಗೊಂಡ ಚಿಂತನೆಗಳು. ಅಂತಹ ಬರಹಗಾರ ತನ್ನನ್ನು ವರ್ತಮಾನಕಾಲದಲ್ಲಿ ಗಟ್ಟಿಯಾಗಿ ಸ್ಥಾಪಿಸಿಕೊಂಡಿರುತ್ತಾನೆ ಮತ್ತು ಹಾಗೆ ಮಾಡುತ್ತಲೇ ಕಲಾತ್ಮಕ ಯತ್ನಗಳ ಗಹನತೆಗಳನ್ನು ವಿವರಿಸುವಾಗ ಭೂತಕಾಲದ ಸಂಪ್ರದಾಯಗಳನ್ನೂ ಗಮನದಲ್ಲಿಡುತ್ತಾನೆ.

ಅನಂತಮೂರ್ತಿಯವರು ಕನ್ನಡ ಸಂಪ್ರದಾಯದ ಭಾಗವಾಗಿರುವುದಕ್ಕೆ ಅನೇಕ ಮಹತ್ತರವಾದ ಗುಣಗಳಿವೆ. ಅವುಗಳಲ್ಲಿ ಒಂದೇನೆಂದರೆ ವಿವಾದಾತ್ಮಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಗತಿಗಳಿಗೆ ಅವರು ರೂಢಿಗತವಲ್ಲದ ವಿವರಣೆಗಳನ್ನು ಕೊಡುವ ಗಟ್ಟಿಯಾದ ಸಾಮರ್ಥ್ಯವನ್ನು ಹೊಂದಿದ್ದಾರೆ. ಇದರಿಂದಾಗಿ ಅನೇಕರು ಅವರಲ್ಲಿ ಪ್ರತಿಗಾಮಿ ಮತ್ತು ಪುನರುತ್ಥಾನವಾದಿ ಧೋರಣೆಗಳನ್ನು ಗುರುತಿಸುವಂತಾಗಿದೆ. ಆದರೆ ಅನಂತಮೂರ್ತಿಯವರ ಅಭಿಪ್ರಾಯಗಳನ್ನು ಸರಿಯಾಗಿ ಸಾಂದರ್ಭಿಕರಿಸಲಾಗಿಲ್ಲ ಮತ್ತು ಅವರ ವಾದಗಳ ವ್ಯಾಪಕ ಪರಿಣಾಮಗಳನ್ನು ಅವುಗಳ ಪೂರ್ಣತೆಯಲ್ಲಿ ಅರ್ಥಮಾಡಿಕೊಳ್ಳಲಾಗಿಲ್ಲ. ಒಬ್ಬ ಸಾರ್ವಜನಿಕ ಬುದ್ಧಿಜೀವಿಯಾಗಿ ಅನಂತಮೂರ್ತಿಯವರು ದ್ವಂದ್ವಗಳನ್ನು ಮಾತ್ರ ಪುಷ್ಟಿಗೊಳಿಸುವ ಇಬ್ಭಾಗದ ಭಿನ್ನತೆಗಳನ್ನು (dichotomie) ಮೀರಿ ಹೋಗುತ್ತಾರೆ. 'ಬೆತ್ತಲೆ ಪೂಜೆ ಯಾಕೆ ಕೂಡದು?' ಎಂಬ ತಮ್ಮ ಲೇಖನದಲ್ಲಿ ಅನಂತಮೂರ್ತಿಯವರು ಕರ್ನಾಟಕದ ಚಂದ್ರಗುತ್ತಿಯೆಂಬ ಜಾಗದಲ್ಲಿ ದೇವದಾಸಿಯರು ತಮ್ಮ ದೇವತೆಯನ್ನು ನಗ್ನರಾಗಿ ಪೂಜಿಸುವ ಬಹುಕಾಲದ ಪದ್ಧತಿಗೆ ನಮ್ಮ ಗಮನವನ್ನು ಸೆಳೆಯುತ್ತಾರೆ.

ಈ ಸಾಮಾಜಿಕ–ಧಾರ್ಮಿಕ ಆಚರಣೆ ಕರ್ನಾಟಕದಲ್ಲಿ ದೊಡ್ಡ ವಿವಾದವನ್ನು ಎಬ್ಬಿಸಿತು. ಪ್ರಗತಿಪರರು, ಧರ್ಮನಿರಪೇಕ್ಷತ್ವವಾದಿಗಳು ಮತ್ತು ಸಾಮಾಜಿಕ ಕಾರ್ಯಕರ್ತರು ಈ ವಾರ್ಷಿಕ ಕಾರ್ಯಕ್ರಮ ಮಹಿಳೆಯರ ಘನತೆಯ ಮೇಲಿನ ಹಲ್ಲೆ ಎಂದೂ, ಅವರಿಗೆ ಅದು ಅವಮಾನಕರವೆಂದೂ ಅದನ್ನು

ನಿಷೇಧಿಸಬೇಕೆಂದೂ ಆಗ್ರಹಿಸಿದರು. ಅನಂತಮೂರ್ತಿಯವರು ಇದರ ಬಗ್ಗೆ ಟಿಪ್ಪಣಿಮಾಡುತ್ತ ನಂಬಿಕೆ ಮತ್ತು ಶ್ರದ್ಧೆಗಳೆಂಬ ಮೂಲಭೂತ ಸಂಗತಿಗಳನ್ನು ಗಮನಿಸುತ್ತ ಆಧುನಿಕ ಮನಸ್ಸಿಗೆ ಒಪ್ಪಿಗೆಯಾಗದಂತಹ ಕೆಲವು ಸಾಂಪ್ರದಾಯಿಕ ವಲಯಗಳಿಂದ ಬರುವ ಈ ವಿಷಯಗಳನ್ನು ಕುರಿತು ಪ್ರಭುತ್ವ ಶಾಸನವನ್ನು ಮಾಡಬಲ್ಲದೇ ಎಂಬ ಪ್ರಶ್ನೆಯನ್ನು ಎತ್ತುತ್ತಾರೆ. ನಿಜವಾಗಿ ನೋಡಿದರೆ ಅನಂತಮೂರ್ತಿಯವರು ಸಾರ್ವಜನಿಕವಾಗಿ ಪೂಜಿಸುವುದರ ಬಗೆಗಿನ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯ ಬಗ್ಗೆ ಗಮನವನ್ನು ಹರಿಸುತ್ತಿದ್ದಾರೆಯಷ್ಟೆ. ಇದನ್ನು ಯಾವುದೇ ರೀತಿಯಲ್ಲೂ ಗೊಡ್ಡು ಆಚರಣೆಗಳಿಗೆ ಕುರುಡುಶ್ರದ್ಧೆಯ ಮತ್ತು ಅವೈಜ್ಞಾನಿಕ ಸಮರ್ಥನೆಯನ್ನು ನೀಡುತ್ತಿದ್ದಾರೆ ಎಂದು ವ್ಯಾಖ್ಯಾನಿಸಬಾರದು. ಈ ಪ್ರಬಂಧದಲ್ಲಿ ಅನಂತಮೂರ್ತಿಯವರು ಒಬ್ಬ ಮಾನವಶಾಸ್ತ್ರಜ್ಞನ 'ವಸ್ತುನಿಷ್ಠತೆ'ಯನ್ನು ಪರೀಕ್ಷಿಸುತ್ತಾರೆ. ಮಾನವಶಾಸ್ತ್ರಜ್ಞನಿಗೆ ಈ ಇಡೀ ಪ್ರಸಂಗದಲ್ಲಿ ಶೈಕ್ಷಣಿಕ ಆಸಕ್ತಿ ಮಾತ್ರವಿದೆ. ಅಲ್ಲದೆ, ಅನಂತಮೂರ್ತಿಯವರು ಒಬ್ಬ ಸಾಮಾಜಿಕ ಕಾರ್ಯಕರ್ತಳ/ನ ಆವೇಶ ಮತ್ತು ನ್ಯಾಯವಾದ ರೋಷವನ್ನು, ಧರ್ಮನಿರಪೇಕ್ಷ ವಿಚಾರವಾದಿಗಳು ಎತ್ತಿಹಿಡಿಯುವಂತಹ ಸಾರ್ವಜನಿಕ ವಲಯದಲ್ಲಿನ ಮರ್ಯಾದೆ ಹಾಗೂ ಘನತೆಗಳನ್ನಷ್ಟೆ ಪರೀಕ್ಷಿಸುತ್ತಾರೆ. ಯಾವ ಹಂತದಲ್ಲೂ ಅನಂತಮೂರ್ತಿಯವರು ಆ ಆಚರಣೆಗಳನ್ನು ಬೆಂಬಲಿಸಿಲ್ಲ. ಇದರ ಸಂಕೀರ್ಣತೆಯನ್ನು ಒಂದು ಆಧುನಿಕ ಮನಸ್ಸು ಪೂರ್ತಿಯಾಗಿ ಅರ್ಥಮಾಡಿಕೊಳ್ಳಬೇಕು. ಈ ಪ್ರಬಂಧ ಒಂದು ತೀಕ್ಷ್ಣವಾದ ವಿಮರ್ಶಾ ಸಮೀಕ್ಷೆಯೂ ಕೂಡ ಆಗಿದೆ. ಕನ್ನಡದ ಸಾಹಿತ್ಯಕ ಪರಂಪರೆ ಹೇಗೆ ಬಹಳ ಸೂಕ್ಷ್ಮವಾದ ಸಾಂಸ್ಕೃತಿಕ ವಿಷಯಗಳನ್ನು ನಿಭಾಯಿಸಿದೆ – ಗೊಡ್ಡಾದ ಭೂತಕಾಲವನ್ನು ಅಂಗೀಕರಿಸಿಲ್ಲ ಅಥವಾ ತನಗೆ ಪರಕೀಯವಾದ ಆಚರಣೆಗಳಿಗೆ, ನಂಬಿಕೆಯ ಪದ್ಧತಿಗಳಿಗೆ ಮತ್ತು ಸಾಂಸ್ಕೃತಿಕ ಅಭ್ಯಾಸಗಳಿಗೆ ಅಸಹನೆಯನ್ನು ತೋರುವ ಆಧುನಿಕ ನಾಗರೀಕತೆಯ ಅಮಾನವೀಯ ಅಂಶಗಳನ್ನು ಸಮರ್ಥಿಸಿಲ್ಲ ಎಂದು ಈ ಪ್ರಬಂಧ ವಿವರಿಸುತ್ತದೆ. ಅನಂತಮೂರ್ತಿಯವರ ವ್ಯಾಪಕವಾದ ಸಾಮಾಜಿಕ ಮತ್ತು ರಾಜಕೀಯ ಕಾಳಜಿಗಳು ಬಲವಾದ ಸಮಾಜವಾದಿ ಪ್ರಭಾವಗಳನ್ನು ಹೊಂದಿವೆ. ಸಮಾಜವಾದಿ ಪ್ರಭಾವಗಳು ಅವರ ಸಾಂಸ್ಕೃತಿಕ ಮತ್ತು ಸಾಹಿತ್ಯಕ ಮೀಮಾಂಸೆಗಳ ಕೇಂದ್ರದಲ್ಲಿವೆ. ಭಾರತೀಯ ಸಾಹಿತ್ಯಗಳ ಬಗ್ಗೆ ಅವರಿಗಿದ್ದ ಕಲ್ಪನೆಗೆ ಸಮಾಜವಾದಿ ದೃಷ್ಟಿಕೋನದ ಗಟ್ಟಿಯಾದ ತಳಹದಿಯಿರುವುದರ ವ್ಯಾಪಕವಾದ ಪರಿಣಾಮಗಳನ್ನು ನಾವು ಕಾಣಬಹುದು. ವಿಶೇಷವಾಗಿ ಭಾರತೀಯ ಭಾಷೆಗಳಲ್ಲಿ ರಚಿತವಾದ ಸಾಹಿತ್ಯಗಳ ಬಗ್ಗೆ ಮತ್ತು ಅನುವಾದದ ರಾಜಕೀಯದ ಬಗ್ಗೆ ಅವರಿಗಿರುವ ಅಭಿಪ್ರಾಯಗಳಿಗೆ ಈ ಮಾತು ಹೊಂದುತ್ತದೆ. ಇದನ್ನು 'ಅನುವಾದ ಎಂದರೆ ಭಾರತದಲ್ಲಿ ಹೇಗೆ ಅರ್ಥಮಾಡಿಕೊಳ್ಳಬೇಕು?', 'ಭಾರತೀಯ ಸಂಸ್ಕೃತಿ – ಶತಮಾನದ ಕೊನೆಯಲ್ಲಿ ಒಂದು ನೋಟ', 'ಒಂದು ಹೊಸ



ರಾಷ್ಟ್ರೀಯತೆಯ ಪರಿಕಲ್ಪನೆಯೆಡೆಗೆ' ಎಂಬ ಅವರ ಪ್ರಬಂಧಗಳಲ್ಲಿ ಕಾಣಬಹುದು. ಅನಂತಮೂರ್ತಿಯವರ ಚಿಂತನೆಯ ವಿನ್ಯಾಸದಲ್ಲಿ ಸಾಹಿತ್ಯ, ರಾಜಕೀಯ ಮತ್ತು ಸಂಸ್ಕೃತಿಗಳ ನಡುವೆ ಇರುವ ಸಾವಯವ ಸಂಬಂಧವನ್ನು ಬೇರ್ಪಡಿಸುವುದು ಅಸಾಧ್ಯ. ಅವರ ಪ್ರಬಂಧಗಳಲ್ಲಿ ಅಂತರ್‌ಪಠ್ಯೀಯತೆ ಸತತವಾಗಿ ಗಟ್ಟಿಯಾಗಿ ಕೆಲಸಮಾಡುತ್ತಿರುವುದನ್ನು ಕಾಣಬಹುದು. ಅಂತರ್‌ಪಠ್ಯೀಯತೆಯೆಂದರೆ ಒಂದು ಪಠ್ಯದಿಂದ ಇನ್ನೊಂದಕ್ಕೆ ಚಲಿಸುವುದಲ್ಲ. ಬದಲಾಗಿ, ಸಾಂಸ್ಕೃತಿಕ ಪಠ್ಯಗಳಿಂದ ಸಾಹಿತ್ಯಕ ಪಠ್ಯಗಳಿಗೆ ಮತ್ತು ರಾಜಕೀಯ ಪಠ್ಯಗಳಿಗೆ ಪಯಣಿಸುವುದನ್ನು ಸೂಚಿಸುತ್ತದೆ. ಇವುಗಳಲ್ಲಿ ಯಾವುದನ್ನೂ ಪ್ರತ್ಯೇಕಿಸಿ ಪರೀಕ್ಷಿಸುವುದಿಲ್ಲ. ಸಾಹಿತ್ಯಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಂಗತಿಗಳ ಬಗ್ಗೆ ಅನಂತಮೂರ್ತಿಯವರು ಕೈಗೊಳ್ಳುವ ಶೋಧನೆಗಳು ಬಹಳ ಪರಸ್ಪರ ಸಂಬಂಧಗಳನ್ನು ಹೊಂದಿರುತ್ತವೆ. ಭಾರತದಲ್ಲಿ ಕಳೆದ ಐದು ದಶಕಗಳಲ್ಲಿ ನಡೆದಿರುವ ಮಹತ್ತರವಾದ ಚರ್ಚೆಗಳ ಬಗ್ಗೆ ಯಾವುದೇ ರೀತಿಯ ನಿಜವಾದ ಅಂತರ್ಮುಖತೆಯನ್ನು ಹೊಂದಿರದವರಿಗೆ ಅನಂತಮೂರ್ತಿಯವರಂತಹ ಒಬ್ಬ ಬರಹಗಾರರನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲದಿರುವುದಕ್ಕೆ ಈ ಪರಸ್ಪರ ಸಂಬಂಧಗಳು ಬಹುಶಃ ಒಂದು ಕಾರಣವಿರಬಹುದು. ಭಾರತದ ಬಗ್ಗೆ ಕೇವಲ ಶೈಕ್ಷಣಿಕವಾದ ಅಥವಾ ಸಮಾಜಶಾಸ್ತ್ರೀಯ ಆಸಕ್ತಿಯು ಖಂಡಿತವಾಗಿ ಸಾಕಾಗದೆ ಹೋಗುತ್ತದೆ, ಏಕೆಂದರೆ ಅದು ಭಾರತದ ಸಾಂಸ್ಕೃತಿಕ ಸಂಪ್ರದಾಯಗಳ ಸೂಕ್ಷ್ಮಗಳನ್ನು ಗ್ರಹಿಸಲಾರದು. ಭಾರತದ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನಲ್ಲಿ ಅಡಗಿರುವ ಎಲ್ಲ ಸಂಕೀರ್ಣತೆಗಳನ್ನು ಅನಂತಮೂರ್ತಿಯವರ ಬರಹಗಳು ಅನುರಣಿಸುತ್ತವೆ.

ಒಬ್ಬ ರಾಜಕೀಯ ವಿಶ್ಲೇಷಕರಾಗಿ ಮತ್ತು ಸಾಂಸ್ಕೃತಿಕ ವಿಮರ್ಶಕರಾಗಿ ಅನಂತಮೂರ್ತಿಯವರ ಒಂದು ಪ್ರಮುಖ ಮುನ್ನೋಲವನ್ನು ಕಡೆಗಣಿಸಿದರೆ ಅದು ಒಬ್ಬ ವಿದ್ವಾಂಸರಾಗಲಿ ಅಥವಾ ಒಬ್ಬ ನಿರ್ಲಕ್ಷ್ಯದ ಓದುಗನಾಗಲಿ ಮಾಡುವ ಅಕ್ಷಮ್ಯ ತಪ್ಪಾಗುತ್ತದೆ. ಅದ್ಯಾವುದೆಂದರೆ, ಆಳುವ ಪ್ರಭುತ್ವದ ವಾಸ್ತವಿಕತೆ ಅನಂತಮೂರ್ತಿಯವರಿಗೆ ಕ್ಲೇಶವನ್ನುಂಟುಮಾಡುವ ವಿಷಯ. ಯಾವುದೇ ಸಮಾಜಕ್ಕೆ ಪ್ರಭುತ್ವವಿಲ್ಲದಿದ್ದರೆ ಅಥವಾ ಭವಿಷ್ಯದಲ್ಲಿ ಅದು ಕಣ್ಮರೆಯಾಗಿಬಿಟ್ಟರೆ ಏನಾಗುತ್ತದೆಂದು ಅವರು ಚಕಿತರಾಗುತ್ತಾರೆ. ಪ್ರಭುತ್ವರಹಿತತೆ ಮತ್ತು ಪ್ರಭುತ್ವದಿಂದ ನಿಯಂತ್ರಿಸಲ್ಪಟ್ಟ ಒಂದು ಸಾಮಾಜಿಕ ರಚನೆಯ ನಡುವೆ ಆಯ್ಕೆ ಮಾಡಬೇಕಾಗಿರುವುದು ವ್ಯಕ್ತಿ ಹಾಗು ಪ್ರಭುತ್ವದ ನಡುವಿನ ಸಂಬಂಧವನ್ನು ಕುರಿತ ಅನಂತಮೂರ್ತಿಯವರ ಮನನಗಳ ಭಾಗವಾಗಿದೆ. ಅವರ ಬರಹಗಳಿಂದ ಕಾಲಕ್ರಮದಲ್ಲಿ ಒಂದು ರಾಜಕೀಯ ತತ್ವವನ್ನು ಹೆಕ್ಕಿತೆಗೆದರೆ, ನಮಗೆ ಸಿಗುವ ವಿಷಯವೇನೆಂದರೆ ವಿಶೇಷಣಗಳಿಂದ ಕೂಡಿದ ಪ್ರಭುತ್ವದ ನಿರಾಕರಣೆಯಾಗಿದೆ. ಹಾಗೆ ಮಾಡುವಾಗ ಅನಂತಮೂರ್ತಿಯವರು ಸಂತ–ಕವಿ ಪುರಂದರದಾಸರನ್ನು

ಉದ್ಧರಿಸುತ್ತಾರೆ. ಪುರಂದರದಾಸರು ಒಂದು ಒಳ್ಳೆಯ ಪ್ರಭುತ್ವವೆಂಬ ಕಲ್ಪನೆಯೇ ಟೊಳ್ಳಾದದ್ದು ಮತ್ತು ಖಾಲಿಯಾದದ್ದೆಂದು ಉದ್ಗರಿಸಿದರು. 'ಒಂದು ಆಧುನಿಕ ಪ್ರಭುತ್ವದ ವಿಕಾರಗಳು' ಮತ್ತು 'ಸಾವಿನ ಭಯದ ಮೇಲೆ ಗಾಂಧಿಯ ಗೆಲುವು' – ಇವು ಸತ್ಯ, ವೈಯಕ್ತಿಕ ಸ್ವಾಯತ್ತತೆ, ಸಾಮಾಜಿಕ ವ್ಯವಸ್ಥೆ ಮತ್ತು ಆರ್ಥಿಕ ಸಮಾನತೆ ಹಾಗೂ ನ್ಯಾಯವನ್ನು ಕುರಿತ ವಿಚಾರಗಳ ಬಗ್ಗೆ ಮಹತ್ತರವಾದ ರೀತಿಯಲ್ಲಿ ತೊಡಗುವುದರಿಂದ ಹೊಮ್ಮಿದ ಪ್ರಬಂಧಗಳಾಗಿವೆ. ರಾಷ್ಟ್ರೀಯತೆ, ಪ್ರಗತಿ ಮತ್ತು ಬೆಳವಣಿಗೆಯನ್ನು ಕುರಿತಂತೆ ಪಾಶ್ಚಿಮಾತ್ಯ ವಿಚಾರಗಳನ್ನು ಅನಂತಮೂರ್ತಿಯವರು ತಿರಸ್ಕರಿಸುತ್ತಾರೆ. ಹಾಗೂ, ಗಾಂಧಿಯ ದರ್ಶನವಾದ 'ಸರ್ವೋದಯ' – ಇಡೀ ಮನುಷ್ಯ ಕುಲದ ಒಳಿತನ್ನು ಎತ್ತಿಹಿಡಿಯುತ್ತಾರೆ. ಇದನ್ನು ಗಾಂಧಿಯ ಬಗ್ಗೆ ಅವರು ಬರೆದಿರುವ ಪ್ರಬಂಧದಲ್ಲಿ ಕಾಣಬಹುದು. ಅನಂತಮೂರ್ತಿಯವರು ಮನುಷ್ಯರ ಉತ್ಕೃಷ್ಟತೆಯ (human excellence) ಬಗ್ಗೆ ಮಾತನಾಡುವಾಗ ಅದು ಸವಲತ್ತುಗಳನ್ನು ಹೊಂದಿರುವ ಕೆಲವರ ಗಣ್ಯಪ್ರಜ್ಞೆ (elitism)ಯಾಗಬಾರದೆಂದು ಪ್ರತಿಪಾದಿಸುತ್ತಾರೆ. ಗಣ್ಯತೆಯನ್ನು ಎತ್ತಿಹಿಡಿಯುವ ಗುಣ ಯಾವಾಗಲೂ ಒಂದು ಅಸಮಾನ ಆರ್ಥಿಕ ವ್ಯವಸ್ಥೆಯ ಮತ್ತು ಒಂದು ಅಮಾನವೀಯವಾದ ಹಾಗೂ ಅಮಾನವೀಯಗೊಳಿಸುವ ಪ್ರಭುತ್ವದ ಕಾಳಜಿಯಾಗಿದೆ. ಗಣ್ಯತೆಯ ಪ್ರಜ್ಞೆಯನ್ನು ನಾಶಮಾಡಲು ಇಡಬೇಕಾದ ಮೊದಲ ಹೆಜ್ಜೆ ಎಲ್ಲರಿಗೂ 'ಸಾಮಾನ್ಯ ಶಾಲೆ'ಗಳನ್ನು ನಿರ್ಮಿಸುವುದು. ಇದು ಒಂದು ನಿಜವಾಗಿ ನೈತಿಕವಾದ ಪ್ರಭುತ್ವದ ಪ್ರಾಥಮಿಕ ಕಾಳಜಿಯಾಗಬೇಕು. ಅನಂತಮೂರ್ತಿ ಯವರು ಈ ಎಲ್ಲ ವಿಷಯಗಳನ್ನು 'ಸಾಮಾನ್ಯ ಶಾಲೆಗಳಲ್ಲಿ ಸಮಾನ ಶಿಕ್ಷಣದ ಜ್ಞಾನಯಜ್ಞ' ಮತ್ತು 'ನಮಗೆ ಎಂಥಾ ಮೀಸಲಾತಿ ಬೇಕು' ಎಂಬ ಪ್ರಬಂಧಗಳಲ್ಲಿ ಬಹಳ ಆವೇಶದೊಂದಿಗೆ ಚರ್ಚಿಸುತ್ತಾರೆ.

ಈ ಪ್ರಬಂಧಗಳು ಇತ್ತೀಚಿನ ದಶಕಗಳ ಖಾಸಗೀಕರಣ ಮತ್ತು ಉದಾರೀಕರಣಗಳ (ಖಾಲಿಯಾದ ಜಾಗತೀಕರಣದ ಸ್ವಭಾವಕ್ಕೆ ಸರಿಹೊಂದುವಂತೆ) ವಿರುದ್ಧ ಹರಿತವಾದ ಟೀಕೆಗಳಾಗಿವೆ. ಈ ಹಾನಿಕಾರಕ ನೀತಿಗಳು ಭೂಮಿಯ ಮೇಲಿಂದ ಸಹಸ್ರಾರು ಜನರನ್ನು ಮತ್ತು ಅವರ ವೈವಿಧ್ಯತೆ/ವಿಜಾತೀಯತೆಯನ್ನು ಸರ್ವನಾಶಗೊಳಿಸಲು ನಿರ್ಧರಿಸಿಬಿಟ್ಟಿವೆ. ಇದನ್ನು ಹೇಗೆ ಮಾಡುತ್ತವೆ ಎಂದರೆ ತಾಂತ್ರಿಕ ಕಾರ್ಯದಕ್ಷತೆ ಮತ್ತು ಅರ್ಹತೆಗಳ ಬಗ್ಗೆ ಅವುಗಳಿಗಿರುವ ಮಾರಕವಾದ ಪರಿಕಲ್ಪನೆಗಳ ಮೂಲಕ; ಅಲ್ಲದೆ, ಮಾನವೀಯ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಅತ್ಯುತ್ತಮ ಬಳಕೆಯನ್ನು ಅಳೆಯುವ ಕ್ರೂರವಾದ ವೈಜ್ಞಾನಿಕ ಪರಿಮಾಣಗಳನ್ನು ರಚಿಸುವುದರ ಮೂಲಕ ಸರ್ವನಾಶಮಾಡುತ್ತಿವೆ. ಅನಂತಮೂರ್ತಿಯವರಿಗೆ ಗಾಂಧಿ ಇಡೀ ವಿಶ್ವದ ಏಳಿಗೆಯನ್ನು ಬಯಸುವ ಒಬ್ಬ ಕ್ರಿಯಾಶೀಲ ಜೀವಂತ ಸಂಕೇತ. ಅಲ್ಲದೆ, ಬಹಳ ಮುಖ್ಯವಾಗಿ, ಗಾಂಧಿ ದಮನಕಾರಿ ಪಶ್ಚಿಮ ನಿರ್ಮಿಸಿರುವ



ಸಂಕುಚಿತ ಗಡಿಗಳನ್ನು ಮೀರುವ ಮತ್ತು ಅಂತಹ ಪಶ್ಚಿಮವನ್ನು ಎಲ್ಲ ಸಾಧ್ಯವಾದ ಮಾದರಿಗಳಲ್ಲೂ ಅನುಕರಿಸುವ ಪೂರ್ವವನ್ನು ಮೀರುವ ಪ್ರಜ್ವಲಿಸುವ ದರ್ಶನವಾಗಿದ್ದಾರೆ. ಇದರಿಂದಾಗಿ ಸಮಚಿತ್ತದ ಪ್ರಜ್ಞೆಯುಳ್ಳವರಿಗೆ ಇವೆರಡರ ನಡುವೆ ಒಂದನ್ನು ಆರಿಸಿಕೊಳ್ಳುವುದು ಅತ್ಯಂತ ಅಸಾಧ್ಯವಾಗಿಬಿಟ್ಟಿದೆ.

ಇತಿಹಾಸ, ಶಾಂತಿ ಮತ್ತು ಮನುಷ್ಯಕುಲದ ಬಗ್ಗೆ ಅನಂತಮೂರ್ತಿಯವರ ಅತ್ಯದ್ಭುತವಾದ ಮತ್ತು ಪ್ರಶಂಸನೀಯವಾದ ಉದಾತ್ತ ಕಾಣ್ಕೆಯನ್ನು 'ಭಾರತ ಪಾಕಿಸ್ತಾನಗಳ ಒಕ್ಕೂಟ – ಚರಿತ್ರೆಯನ್ನು ಮೀರುವ ಒಂದು ಕನಸು' ಎಂಬ ಪ್ರಬಂಧದಲ್ಲಿ ನೋಡಬಹುದು. ಆಧುನಿಕ ನಾಗರೀಕತೆಯ ವಿಧ್ವಂಸಕ ಗುಣ ಮನುಷ್ಯ ಜೀವನವನ್ನು ಕೊನೆಗೊಳಿಸಲಾಗದು. ಈ ವಿಧ್ವಂಸಕ ಗುಣ ಬರ್ಬರ ರಾಷ್ಟ್ರೀಯತೆಯಿಂದ ಪೋಷಿಸಲ್ಪಟ್ಟಿದೆ. ಇದು ಇತಿಹಾಸವನ್ನು (ಭವಿಷ್ಯದ ರೂಪದಲ್ಲಿ) ಒಂದು ನಿರಂತರವಾದ ಮತ್ತು ಕೊನೆಯಿಲ್ಲದ ಇನ್ನೂ ಹೆಚ್ಚಿನ ವಿನಾಶ ಮತ್ತು ನರಳುವಿಕೆಯ ಘಟ್ಟವನ್ನಾಗಿ ಪರಿವರ್ತಿಸಲಾರದು. ಗಾಂಧಿ, ಟಾಗೋರ್, ಮೌಲಾನಾ ಆಜ಼ಾದ್ ಮತ್ತು ಹಲವರು ವಿಭಜನೆಗೆ ಮತ್ತು ಆಕ್ರಮಣಶೀಲ ರಾಷ್ಟ್ರೀಯತೆಗೆ ವಿರುದ್ಧವಾಗಿದ್ದರು. ಅವರು ಅತ್ಯಂತ ಪರಿಶೋಧನೆಯ ಕಾಲದಲ್ಲಿ ಇತಿಹಾಸದ ಶಕ್ತಿಗಳ ವಿರುದ್ಧ ಹೋರಾಡುತ್ತಿದ್ದರು. ಅವರು ಸಮಾನವಾದ ಮತ್ತು ಒಗ್ಗೂಡಿದ ಮನುಷ್ಯಕುಲದ ಕಾಣ್ಕೆಯನ್ನು ಹೊತ್ತಿದ್ದರು. ಭಾರತ ಮತ್ತು ಪಾಕಿಸ್ತಾನದ ಒಗ್ಗಟ್ಟು ಒಂದು ಇಡಿಯಾದ ಕುಟುಂಬವನ್ನು ಸಂಕೇತಿಸಿತು ಮತ್ತು ವಿಭಜನೆ ಅದೆಲ್ಲದರ ಛಿದ್ರೀಕರಣವನ್ನು ಪ್ರತಿಬಿಂಬಿಸಿತು. ನಮ್ಮ ಕಾಲದ ಸಾಂಸ್ಕೃತಿಕ ಸಾಕ್ಷಿಪ್ರಜ್ಞೆಯಾಗಿ ಅನಂತಮೂರ್ತಿಯವರು ಆಧುನಿಕ ಭಾರತದ ದಾರ್ಶನಿಕರ ಈ ಮಹತ್ವದ ಕನಸಿಗೆ ಜೀವತುಂಬುತ್ತಾರೆ. ಈ ದಾರ್ಶನಿಕರು ಹಿಂಸೆ, ದ್ವೇಷ ಮತ್ತು ಮತಾಂಧತೆಯನ್ನು ಮೀರಿದ ಪ್ರಪಂಚವನ್ನು ಕಟ್ಟಲು ತಮ್ಮ ಪ್ರಾಣಗಳನ್ನೇ ಕೊಟ್ಟರು. ಅನಂತಮೂರ್ತಿಯವರು ಒಬ್ಬ ಲೇಖಕರಾಗಿ ಹಾಗು ಚಿಂತಕರಾಗಿ ಅವರ ಸಾಂಸ್ಕೃತಿಕ ಪೂರ್ವಜರು ಮಾಡಿದಂತೆ ಇತಿಹಾಸದ ರಕ್ತಪಾತ ಮತ್ತು ಕ್ರೌರ್ಯಗಳನ್ನು ಮೀರುವುದಕ್ಕಾಗಿಯೇ ಇತಿಹಾಸಕ್ಕೆ ಮುಖಮಾಡುತ್ತಾರೆ. ಇಂತಹ ಕಾಲದಲ್ಲಿ, ಎಲ್ಲ ಪ್ರಕಾರದ ಹಿಂಸೆಗಳಿಂದ – ಒಳಗಿನಿಂದ ಮತ್ತು ಹೊರಗಿನಿಂದ – ಬೆದರಿಸಲ್ಪಡದೆ ಇರುವ ಪ್ರಪಂಚದ ಯಾವ ಭಾಗವೂ ಇಲ್ಲದಿರುವಾಗ, ಮಾನವ ಜನಾಂಗವನ್ನು ನಿರ್ಮೂಲನೆಯಿಂದ ಕಾಪಾಡಲು ಹೋರಾಡುತ್ತಿರುವ ವಿವೇಕಯುಕ್ತವಾದ ಧ್ವನಿಗಳು ಖಂಡಿತವಾಗಿ ಇವೆ ಎನ್ನುವುದಕ್ಕೆ 'ರುಜುವಾತು' ಸಾಕ್ಷಿಯಾಗಿದೆ. ಅನಂತಮೂರ್ತಿಯವರು ಈ ಮಹಾ ಪರಂಪರೆಗೆ ಜೀವಂತ ಉದಾಹರಣೆಯಾಗಿದ್ದಾರೆ ಮತ್ತು ಇದರಿಂದ ಪ್ರೇರೇಪಿತರಾಗಲು ನಾವೆಲ್ಲರೂ ಇದಕ್ಕೆ ಸಾಕ್ಷಿಗಳಾಗಬೇಕು, ಅಲ್ಲದೆ ಒಂದು ಉತ್ತಮವಾದ ಹಾಗು ಭಿನ್ನವಾದ ಭವಿಷ್ಯವನ್ನು ತರುವ ಯೋಜನೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ನ್ಯಾಯ,

ಶಾಂತಿ ಮತ್ತು ಸಮಾನತೆಯಲ್ಲಿ ನಂಬುವ ಎಲ್ಲರೂ ಆಧುನಿಕ ಪ್ರಭುತ್ವದ ದಬ್ಬಾಳಿಕೆಯ ವಿರುದ್ಧದ ಹೋರಾಟವನ್ನು ಮತ್ತು ಒಂದು ಏಕೀಕೃತ ಜಗತ್ತಿನ ಆರ್ಥಿಕ ವ್ಯವಸ್ಥೆಯ ರಾಕ್ಷಸೀ ಗುಣದ ವಿರುದ್ಧ ಪ್ರತಿರೋಧ ಒಡ್ಡುವುದನ್ನು ಗುರುತಿಸುವ ನೈತಿಕ ಅನಿವಾರ್ಯವನ್ನು ಹೊಂದಿರುತ್ತಾರೆ. ಜಗತ್ತಿನ ಏಕೀಕೃತ ಆರ್ಥಿಕ ವ್ಯವಸ್ಥೆಯು ನ್ಯಾಯ ಮತ್ತು ಸಮಾನತೆಯ ಕಲ್ಪನೆಗಳನ್ನು ದುರ್ಬಲರ ಭಾವುಕತೆಯೆಂದು ತಳ್ಳಿಹಾಕುತ್ತದೆ. ಪ್ರತಿರೋಧವನ್ನು ಗುರುತಿಸುವ ನೈತಿಕ ಅನಿವಾರ್ಯವೊಂದೇ ಎಲ್ಲ ಕಾಲದ ವಿಶ್ವಾಸಾರ್ಹವಾದ ಮತ್ತು ನಿಜವಾದ ಆಧ್ಯಾತ್ಮಿಕ ಶೋಧನೆಯಾಗಿದೆ.

**ನೀನಾಸಮ್ ರಂಗಶಿಕ್ಷಣ ಕೇಂದ್ರದ ಚಟುವಟಿಕೆಗಳು:**

ವಿದ್ಯಾರ್ಥಿಗಳು 2013ನೇ ಅಕ್ಟೋಬರ್ 4ರಿಂದ 7ರವರೆಗೆ ತಮ್ಮ ಮೊದಲ ನಾಟಕಪ್ರಯೋಗವಾಗಿ ಭಾಸನ 'ದೂತ ಘಟೋತ್ಕಚ' (ಕನ್ನಡಕ್ಕೆ: ಎಲ್.ಗುಂಡಪ್ಪ, ನಿರ್ದೇಶನ: ಮಂಜು ಕೊಡಗು) ನಾಟಕದ ಪ್ರದರ್ಶನ ನೀಡಿದರು. ಸೆಪ್ಟೆಂಬರ್ 5ರಂದು ನಡೆದ 'ರತಿಕಲ್ಯಾಣ' (ಸ್ಥಳೀಯರಿಂದ) ಮತ್ತು 'ಅಭಿಮನ್ಯು ವಧೆ' (ಪುತ್ತೂರು ಶ್ರೀಧರ ಭಂಡಾರಿ ಮತ್ತು ತಂಡದವರಿಂದ) ತೆಂಕುತಿಟ್ಟಿನ ಯಕ್ಷಗಾನ ಪ್ರದರ್ಶನಗಳನ್ನು ಮತ್ತು ಸೆಪ್ಟೆಂಬರ್ 6 ರಂದು ನಡೆದ 'ಸಂಯಮಂ' ತಂಡದವರ ತಾಳಮದ್ದಲೆಯನ್ನು ನೋಡಿದರು. ಅಕ್ಟೋಬರ್ 13ರಿಂದ 19ರವರೆಗೆ ನಡೆದ ನೀನಾಸಮ್ ಸಂಸ್ಕೃತಿ ಶಿಬಿರದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ನವೆಂಬರ್ 4ರಿಂದ 24ರವರೆಗೆ ಎರಡನೆಯ ಪ್ರಯೋಗವಾಗಿ 'ಗುರುತಿಲ್ಲದೆ ನಡೆದ ಗಳಿಗೆ' ಎಂಬ ನಾಟಕದ (ಪೀಟರ್ ಹಾಂಡ್‌ಕೆಯ 'ದಿ ಅವರ್ ವಿ ನ್ಯು ನಥಿಂಗ್ ಆಫ್ ಈಚ್ ಅದರ್' ಆಧರಿಸಿ, ನಿರ್ದೇಶನ: ಶಂಕರ್ ವೆಂಕಟೇಶ್ವರನ್) ತಾಲೀಮು ನಡೆಸಿ ದಿ.25ರಿಂದ 26ರವರೆಗೆ ಪ್ರದರ್ಶನ ನೀಡಿದರು. ಈನಡುವೆ ಶ್ರೀ ಮೂರ್ತಿ ವಿ.ಎಸ್. ಅವರು ಯಕ್ಷಗಾನ ಮುಖವರ್ಣಿಕೆ, ಶ್ರೀ ಪುರುಷೋತ್ತಮ ತಲವಾಟ ಅವರು ಪ್ರಸಾಧನ ಮತ್ತು ಶ್ರೀ ಎಂ.ಎಂ.ಕೃಷ್ಣಮೂರ್ತಿಯವರು ಬೆಳಕಿನ ವಿನ್ಯಾಸದ ಕಾರ್ಯಾಗಾರಗಳನ್ನು ನಡೆಸಿಕೊಟ್ಟರು. ಅಕ್ಟೋಬರ್ 21ರಿಂದ 31ರವರೆಗೆ ಪ್ರಸಿದ್ಧ ಕೂಡಿಯಾಟ್ಟಮ್ ಕಲಾವಿದ, ಗುರು ಶ್ರೀ ಮಾರ್ಗಿ ಸಜೀವನಾರಾಯಣನ್ ಚಾಕ್ಯಾರ್ ಅವರು ವಿದ್ಯಾರ್ಥಿಗಳಿಗೆ ಕೂಡಿಯಾಟ್ಟಮ್ ಕಣ್‌ಸಾಧಕ ಮತ್ತು ಮುದ್ರಾಭಿನಯಗಳ ತರಬೇತಿ ನೀಡಿದರು ಮತ್ತು ದಿನಾಂಕ 30ರಂದು ಒಂದು ಪ್ರಾತ್ಯಕ್ಷಿಕೆಯನ್ನೂ ನೀಡಿದರು.

# ಕವಿ ವಾಸ್ತವದಲ್ಲಿ ಬೇರು ಬಿಟ್ಟಿರಬೇಕು

## ಡಾ. ಸಿದ್ಧಲಿಂಗಯ್ಯನವರ ಸಂದರ್ಶನ

ಸಂದರ್ಶಕರು: ಎಂ. ಗಣೇಶ

ರಂಗಭೂಮಿ ಮತ್ತು ಬರವಣಿಗೆಗಳ ನಡುವಿನ ಸಂಬಂಧಗಳ ಕುರಿತು ಡಾ. ಸಿದ್ಧಲಿಂಗಯ್ಯನವರ ಜೊತೆಗೆ ರಂಗಕರ್ಮಿ ಎಂ.ಗಣೇಶ ನಡೆಸಿದ ಒಂದು ಸಂದರ್ಶನವನ್ನು ಇಲ್ಲಿ ಸಂಗ್ರಹಿಸಿಕೊಡಲಾಗಿದೆ.

ಗಣೇಶ: ನಿಮ್ಮ ಯಾವ ಯಾವ ಕೃತಿಗಳು ರಂಗಪ್ರಯೋಗಗಳಾಗಿವೆ? ಮತ್ತು ಅವುಗಳ ಹಿನ್ನೆಲೆ ಏನು ಎಂದು ತಿಳಿಸುತ್ತೀರ?

ಡಾ.ಸಿದ್ಧಲಿಂಗಯ್ಯ: ನಾನು ನಾಟಕಗಳನ್ನು ಬಿಟ್ಟು ಹೇಳಬೇಕಲ್ವ... ನಾನು 'ಅಲ್ಲೆ ಇದ್ದವರು' ಅಂತ ಒಂದು ದೀರ್ಘ ಕವನ ಬರೆದಿದ್ದೆ. ಆ ದೀರ್ಘ ಕವನವನ್ನು ಸಿಜಿಕೆಯವರು ಸ್ವಲ್ಪ ಡೈಲಾಗ್ ಸೇರಿಸಿ ನಾಟಕವಾಗಿ ಕಟ್ಟಿದರು. ಅದು ಸುಮಾರು ಪ್ರದರ್ಶನಗಳನ್ನು ಕಾಣ್ತು. ಅದರಲ್ಲಿ ಆಕ್ಟ್ ಮಾಡಿದವರಲ್ಲಿ ಅನೇಕರು ಇವತ್ತು ತುಂಬ ದೊಡ್ಡ ದೊಡ್ಡ ನಟರಾಗಿದ್ದಾರೆ. ಮಾಸ್ಟರ್ ಮಂಜುನಾಥ್ ಮುಂದೆ ಸಿನಿಮಾಗಳಲ್ಲಿ ಬಾಲನಟನಾಗಿ ಪ್ರಸಿದ್ಧರಾದರು. ಅವರೆಲ್ಲ 'ಅಲ್ಲೆ ಇದ್ದವರು' ನಾಟಕದಿಂದ ಬಂದವರು. ಎ.ಎಸ್. ಮೂರ್ತಿಯವರ ರಂಗತಂಡ ಅದನ್ನು ರಂಗಕ್ಕೆ ತಂದಿತ್ತು. ಆಮೇಲೆ ಅದು ಪುಸ್ತಕವಾಗಿ ಕೂಡ ಪ್ರಕಟವಾಯಿತು. (ನಾನು ಆ ಪುಸ್ತಕ ನೋಡಿಲ್ಲ.) ಆ ಕವನದಲ್ಲಿ ಸ್ವಾತಂತ್ರ್ಯಪೂರ್ವದ ಜನಸಾಮಾನ್ಯನ ಪರಿಸ್ಥಿತಿ ಸ್ವಾತಂತ್ರ್ಯ ನಂತರದ ಜನಸಾಮಾನ್ಯನ ಪರಿಸ್ಥಿತಿ ಎಲ್ಲವೂ ಸೇರಿಕೊಂಡಿದೆ. ಅಲ್ಲಿ ಈ ಊಳಿಗಮಾನ್ಯದವರ ಕೈಕೆಳಗೆ ಈ ಕೆಳವರ್ಗದವರು ದಬ್ಬಾಳಿಕೆಗೆ ತುತ್ತಾಗತಾ ಇದ್ದರು, ಕೊನೆಗೆ ಈ ಸ್ವಾತಂತ್ರ್ಯ ಹೋರಾಟಕ್ಕೆ ಈ ಬಂಡವಾಳಶಾಹಿಗಳು ಮತ್ತು ಊಳಿಗಮಾನ್ಯ ದೊರೆಗಳು ಯಾವ ರೀತಿ ಕೈಜೋಡಿಸಿದರು, ಜನಸಾಮಾನ್ಯರು ಯಾವ ರೀತಿ ಅವರ ಜೊತೆ ಕೈಜೋಡಿಸಿದರು – ಆಮೇಲೆ ಸ್ವಾತಂತ್ರ್ಯ ಬಂದಮೇಲೆ ಜನಸಾಮಾನ್ಯರಿಗೆ ಏನೂ ಉಪಯೋಗ ಆಗಲಿಲ್ಲ – ಅದನ್ನು ಅದೇ ಎರಡು ಗುಂಪುಗಳು ಹೇಗೆ ಉಪಯೋಗಿಸಿಕೊಂಡರು ಅನ್ನೋದನ್ನ – ಮತ್ತು ಬ್ರಿಟಿಷರಿಂದ ಸ್ವಾತಂತ್ರ್ಯ ನೇರವಾಗಿ ಅವರಿಗೆ ಹಸ್ತಾಂತರ ಆಯಿತು ಅಂತ ಹೇಳಬಹುದು –

ಈ ವಸ್ತುವನ್ನು ಇಟ್ಟುಕೊಂಡು ನಾನು ಆ ದೀರ್ಘ ಕವಿತೆಯನ್ನು ಬರೆದಿದ್ದೆ. ಆ ನಾಟಕದಲ್ಲಿ ಜನರ ಗುಂಪು ಹಾಡುತ್ತೆ.

ಬಿಡುಗಡೆಯೆಂಬುದು ಏನೊ
ಬಿಡುಗಡೆಯೆಂಬುದು ಎಲ್ಲೊ
ಸ್ವಾತಂತ್ರ್ಯ ಸೂರ್ಯ ಹುಟ್ಟಿದರೂ ಕಿರಣ ಕಾಣಲಿಲ್ಲ
ಸೂರ್ಯನ ಎದುರು ಉಳ್ಳವರೊಡ್ಡಿದ ಮೋಡ ಚದುರಲಿಲ್ಲ
ಬಿಡುಗಡೆಯೆಂಬುದು ಏನೊ...
ಬಿಡುಗಡೆಯೆಂಬುದು ಎಲ್ಲೊ...

ಇದನ್ನು ನಾಟಕದ ಕೊನೆಯಲ್ಲಿ ಹಾಡತಾರೆ. ಈ ಹಾಡು ಆಗ ತುಂಬ ಪ್ರಸಿದ್ಧವಾಗಿತ್ತು. ಆ ನಾಟಕದಲ್ಲಿ ಕೆಲಸ ಮಾಡಿದವರು ಈಗಲೂ ಅದನ್ನ ನೆನಪು ಮಾಡಿಕೊಳ್ತಾರೆ. ಈ ನಾಟಕವನ್ನು ನಾನು ಇತ್ತೀಚಿಗೆ ನೋಡಿಲ್ಲ, ನಾನು ನೋಡಿದ್ದು 1982–83ರಲ್ಲಿ. ಆ ಪದ್ಯಾನ ಅಷ್ಟು ಒಳ್ಳೆ ಪದ್ಯ ಅಲ್ಲ ಅಂತ ಬಿಟ್ಟಿದ್ದೆ. ಮೊದಲು 'ಕಪ್ಪು ಕಾಡಿನ ಹಾಡು' ಕವನ ಸಂಕಲನದಲ್ಲಿ ಮೊದಲು ಸೇರಿಸಿದ್ದೆ, ಆನಂತರ ಬಂದ ಇತರ ಸಂಕಲನಗಳಲ್ಲಿ ಆ ಪದ್ಯ ಸೇರಿಕೊಂಡಿಲ್ಲ, 'ಕಪ್ಪು ಕಾಡಿನ ಹಾಡು' ಕವನ ಸಂಕಲನ ಕೂಡ ಈಗ ಸಿಕ್ಕತಾ ಇಲ್ಲ. ಮತ್ತೆ ಆ ಪದ್ಯ ಸಿಕ್ಕಿದರೆ ಅದನ್ನ ಇನ್ನೊಂದಷ್ಟು ಇಂಪ್ರೂವೈಸ್ ಮಾಡಿ ಒಳ್ಳೆ ಸ್ವರೂಪ ಕೊಡೋಣ ಅನ್ನೋ ಯೋಚನೆ ಇದೆ. (ನಾನು ನಾಟಕಗಳಿಗೆ ಬೇರೆಬೇರೆ ಸಂದರ್ಭದಲ್ಲಿ ಬರೆದ ಅನೇಕ ಪದ್ಯಗಳು ಬಿಟ್ಟುಹೋಗಿದ್ದಾವೆ. ಅವು ಸಿಕ್ಕತಾ ಇಲ್ಲ.)

ಎ.ಎಸ್. ಮೂರ್ತಿಯವರು ಮತ್ತವರ ತಂಡದವರು ಒಂದುಸಲ ರಾಜಾಜಿನಗರದ ರಾಮಮಂದಿರದಲ್ಲಿ ಬೀದಿನಾಟಕ ಆಡತಾ ಇದ್ದರು. ಆಗ ಅವರು ಈ ಮಾರಮ್ಮನ ಬಗ್ಗೆ ಒಂದು ಹಾಡು ಬರೆದುಕೊಡಿ ಅಂದರು. ಆಗ ನಾನು ಒಂದು ಹಾಡು ಬರೆದುಕೊಟ್ಟಿದ್ದೆ. ಅದನ್ನ ನಾಟಕದಲ್ಲಿ ತಂದು ಚೆನ್ನಾಗಿ ಹಾಡಿದರು. ಆ ಸ್ಕ್ರಿಪ್ಟ್ ಸಹ ನನ್ನ ಬಳಿ ಇಲ್ಲ. ಆಮೇಲೆ 'ಸಾಮಾನ್ಯನ ಹಾಡು' ಅಂತ ಬರೆದೆ. ಅದು ಸಹ ನಾಟಕಕ್ಕಾಗಿಯೆ ಬರೆದಿದ್ದು. ಅದು ಸಹ ಸಿಕ್ಕತಾ ಇಲ್ಲ. ಆಗ ನಾನು ನಾಟಕಗಳಿಗಾಗಿ ಬರೆದ ಕೆಲವು ಪದ್ಯಗಳಲ್ಲಿ ಕಾವ್ಯಾತ್ಮಕ ಗುಣಗಳು ಕಡಿಮೆ ಇದ್ವು. ಅವು ಈಗ ಸಿಕ್ಕಿದರೆ ಅವುಗಳ ಮೂಲ ಸ್ವರೂಪವನ್ನ ಹಾಗೆಯೆ ಇಟ್ಟುಕೊಂಡು ಸ್ವಲ್ಪ ಮಾರ್ಪಡುಮಾಡೋಣ ಅನಿಸುತ್ತೆ. ಆದರೆ ನನ್ನ ದುರಾದೃಷ್ಟಕ್ಕೆ ಅವು ಸಿಕ್ಕತಾ ಇಲ್ಲ. ನಾನು ಎ.ಎಸ್. ಮೂರ್ತಿಯವರಿಗೆ ಬರೆದುಕೊಟ್ಟ ಮಾರಮ್ಮನ ಹಾಡನ್ನು ಅವರು ಕತೆಯಾಗಿ ಮಾರ್ಪಡಿಸಿ ತುಂಬಾ ಚನ್ನಾಗಿ ನಾಟಕ ಮಾಡಿದರು. ಅದರ ಮೊದಲನೆ ಸೊಲ್ಲು ಚೆನ್ನಾಗಿ ನೆನಪಿದೆ.

ದೇಶ ವಿದೇಶದ ಮಾರ್ಕೆಟ್ಟಿನಲ್ಲಿ
ಮಾರಮ್ಮನನ್ನು ಮಾರುವರು...



1982ರಲ್ಲೆ ಈ ಗ್ರಾಮದೇವತೆಯನ್ನು ಜಾಗತೀಕರಣದ ಸಂದರ್ಭದಲ್ಲಿ ಇಟ್ಟುನೋಡುವ ಪ್ರಯತ್ನ ಮಾಡಿದ್ದೆ. ಇವತ್ತಿಗೂ ಅದು ಪ್ರಸ್ತುತ ಅಂತ ಅನಿಸುತ್ತೆ. ಆಮೇಲೆ ನಾನು 'ಕತ್ತೆ ಮತ್ತು ಧರ್ಮ' ಅಂತ ಒಂದು ಪದ್ಯ ಬರೆದಿದ್ದೆ. ಅದು ಅನೇಕ ಕಡೆ ಪಠ್ಯವೂ ಆಗಿದೆ; ಎಲ್ಲ ಆ್ಯಂತಾಲಜಿಗಳಲ್ಲಿ ಇದೆ. ಅದನ್ನು ನಾನು ನಾಟಕಕ್ಕೆ ಅಂತಲೇ ಬರೆದಿದ್ದು.

ಈ ನಂದಿಬೆಟ್ಟದಲ್ಲಿ ಒಳ್ಳೇದೊಂದು ರೂಮ್‌ಮಾಡಿ ಪ್ರಸನ್ನ, ಡಿ.ಆರ್. ನಾಗರಾಜ್ ಎಲ್ಲ ಅಲ್ಲಿದ್ದು ಒಂದು ನಾಟಕ ಬರೆಯೋದು ಅಂತ ಆಯಿತು. ಅವರಿಗೆ ಒಂದು ನಾಟಕದ ಹಾಡು ಬೇಕಾಯಿತು, ಅದಕ್ಕವರು ನನ್ನನ್ನೂ ಕರಕೊಂಡು ಹೋದರು. ಇನ್ನು ನಾಟಕ ಬರವಣಿಗೆ ನೆಟ್ಟಗೆ ಶುರುವೇ ಆಗಿರಲಿಲ್ಲ, ಆದರೆ ನನಗೆ ನಾಟಕದ ಥೀಮ್ ಹೇಳಿದ್ದರು, ಯಾವ ತರಹ ಹಾಡಬೇಕು ಅಂತ. ನಾನು ಒಂದೆರಡು ದಿನದಲ್ಲಿ ಆ ಹಾಡು ಬರೆದುಬಿಟ್ಟೆ. ಆದರೆ ಅವರವರಲ್ಲಿ ಏನೋ ಭಿನ್ನಾಭಿಪ್ರಾಯ ಉಂಟಾಗಿ ನಾಟಕ ಬರೆಯೋದು ನಿಲ್ಲಿಸಿ ವಾಪಸ್ಸು ಬಂದುಬಿಟ್ರು. ಆದರೆ ನಾನು ಅಷ್ಟೊತ್ತಿಗಾಗಲೇ ಹಾಡು ಬರೆದು ಬಿಟ್ಟಿದ್ದೆನಲ್ಲ, ದೊಡ್ಡ ಹಾಡೇ ಬರೆದುಬಿಟ್ಟಿದ್ದೆ. ತ್ರಿಪದಿ ಒಳಗೆ ಬಹಳ ಜೋರಾಗಿ ಬರೆದಿದ್ದೆ! ಆ ಹಾಡಿನಲ್ಲೆ ಬಹಳ ಒಳ್ಳೆ ನಾಟಕೀಯತೆ ಇತ್ತು. ಆಮೇಲೆ ಬಹುಶಃ 'ಸಾವಿರಾರು ನದಿಗಳು' ಸಂಕಲನದಲ್ಲಿ ಪ್ರಿಂಟ್ ಮಾಡ್ದೆ. 'ಸಾವಿರಾರು ನದಿಗಳು' 1979ರಲ್ಲಿ ಪ್ರಿಂಟಾಯಿತು. ಹಂಗಾಗಿ ನಾನು ಆ ಹಾಡು ಬರೆದಿದ್ದು 1977–78ರಲ್ಲಿ ಅಂತ ಕಾಣತ್ತೆ. ಅದನ್ನು ನೋಡಿದ ಶಿಕ್ಷಣ ಇಲಾಖೆಯ ತಜ್ಞರುಗಳು ಪಿ.ಯು.ಸಿ.ಗೆ ಟೆಕ್ಸ್ಟ ಮಾಡಿಬಿಟ್ರು. ಇಡೀ ಕರ್ನಾಟಕದಲ್ಲೇ ಅದು ಮುಟ್ಟಿಬಿಡ್ತು. ಕೊನೆಗೆ ಆ ಹಾಡನ್ನು ಓದಿ ಅನೇಕ ನಾಟಕ ನಿರ್ದೇಶಕರುಗಳು ಅದನ್ನು ನಾಟಕವಾಗಿ ಮಾಡಿದರು. ಆ ಹಾಡು ಹೀಗಿತ್ತು:

ಮಧುಗಿರಿ ಪಟ್ಟಣಕ್ಕೆ ಸಿದ್ದಯ್ಯನೆಂಬಗಸ
ಯಂಡರು ಮಕ್ಕಳಿಲ್ಲ ಏಕಾಕಿ । ಸಿದ್ಧಯ್ಯ
ಕತ್ತೆಯೆ ಅವುನ ಒಡನಾಡಿ

ಕತ್ತೆಯ ಮೈ ತೊಳೆದು ಮುದ್ದಾಡಿ ಸಿದ್ಧಯ್ಯ
ಒಂದೆ ಗಂಗಳದಲ್ಲಿ ಉಣ್ಣೋನು । ಸಿದ್ದಯ್ಯ
ಕತ್ತೆಯ ಮಗ್ಗುಲಲ್ಲಿ ಮಲಗೋನು

ಬಟ್ಟೆಯ ಹೇರಿಕೊಂಡು ಹೊಂಟರೆ ಬೀದಿಲಿ
ದೇವೇಂದ್ರನಾ ಕುದುರೆ ಸಮನಲ್ಲ । ರಾಜನ
ಪಟ್ಟದ ಆನೆಯು ಚಟ್ಟಂತು

ಸಿದ್ಧಯ್ನ ಸಾಕುಮಗಳು ಕತ್ತೆ ಅನ್ನೊ ಸುದ್ದಿ

ಊರ ಬಾಯೀಗೆ ಎಲೆ ಅಡಿಕೆ । ಸಿದ್ಧಯ್ಯ
ಕತ್ತೆ ಬಿಟ್ಟಿರಲಾರ ಅರುಗಳಿಗೆ

ಇಂತ ಸಿದ್ಧಯ್ಯನಿಗೆ ಬಂತಲ್ಲೊ ಕೇಡುಗಾಲ
ಬಟ್ಟೆಯ ಒಗಿವಾಗ ತಲೆಮ್ಯಾಲೆ । ಕಾಗೆನುಗ್ಗಿ
ಮನೆಯಲ್ಲಿ ಗವುಳಿ ಲೊಚಲೊಚ

ಎದ್ದಾನು ಸಿದ್ಧಯ್ಯ ಕತ್ತೇಯು ಏಳ್ಳಿಲ್ಲ
ಹೊಟ್ಟೆಯು ಊದಿ ಮಯ್ಯೆಲ್ಲ । ತಣ್ಣಗಾಗಿ
ಶಿವ ತನ್ನ ಪಾದಕೆ ಕರುಕೊಂಡ

ಊರ ಸೀಳಾದೀಲಿ ಕತ್ತೇಯ ಮಣ್ಮಾಡಿ
ಗಂಧದ ಕಡ್ಡಿಯ ಹಚ್ಚವನೆ । ಸಿದ್ಧಯ್ಯ
ತೆಂಗಿನ ಕಾಯ ಒಡದವನೆ

ಸಿದ್ಧಯ್ನ ಗೋಳನು ಕೇಳೋರು ಯಾರಯ್ಯ
ಮನವೆಲ್ಲ ವಣುಗಿ ಮರುಳಾಗಿ । ಸಿದ್ಧಯ್ಯ
ಹೊರಟನು ದುಕ್ಕದಿ ದೇಸಾಂತರ

ಯಾಪಾರಕೊಂಟಿದ್ದ ದೂರಾದ ಜಯಶೆಟ್ಟಿ
ನೋಡಿದ ಸಿದ್ಧಯ್ನ ಘನಪೂಜೆ । ಬಂದಿಲ್ಲಿ
ಕೈಮುಗದು ವಂಟನು ಯಾಪಾರಕೆ

ಶೆಟ್ಟೀಗೆ ಅವತ್ತು ಪ್ಯಾಟೇಲಿ ಸೌಭಾಗ್ಯ
ಬೆಳ್ಳಿ ಅಳಕೊಂಡ ಬಳ್ಳಬಳ್ಳ । ನಮ್ಮ ಶೆಟ್ಟಿ
ಬಂಗಾರ ಬಾಚಿಕೊಂಡ ಚೀಲ ಚೀಲ

ಮನೆಗೋಗೋ ದಾರೀಲಿ ಶೆಟ್ಟಿ ಗೋರಿಯ ಮುಂದೆ
ಕೈಮುಗದು ಬಿದ್ದು ನಮಸ್ಕಾರ । ಮಾಡಿಕೊಟ್ಟ
ದೇವರ ಕಂಬ ಅದಕೆಣ್ಣೆ

ಊರೂರ ಸುದ್ದೀಲಿ ಜನಕೆ ಭಕ್ತಿಯ ಹುಟ್ಟಿ
ಸೇರಿತು ಪರುಸೆ ಗೋರಿದೇವ್ರ । ಹೆಸರೇಲಿ
ಗುಡಿಯೊಂದು ನಿಂತಿತಲ್ಲೊ ಮುಗಿಲುದ್ದ

ಕೈಚಾಚಿ ಭಿಕ್ಷದೋರು ಮೈಚಾಚಿ ಸೂಳೇರು
ಭಕ್ತೀಲಿ ಕುಡದು ಕುಣಿಯೋರು । ಸೇರವ್ರೆ
ಬಿಳಿಟೋಪಿಯೋರ ಬೆಳಕೇಲಿ



ಪೂಜೇಗೆ ವೈದಿಕರು ದಾನಾಕೆ ಸಾವುಕಾರ್‍ರು
ಕತ್ತೆಗೋರಿಯ ಮೇಲೆ ಕೈಲಾಸ । ಹಬ್ಬಿತ್ತು
ರಾಜರಾಣಿಗೆ ಸುದ್ದಿ ಹೋಯ್ತು

ರಾಜ ಸುಂಗಾರವಾದ ರಾಣಿ ಸುಂಗಾರವಾದ್ಲು
ಕತ್ತೆಯ ಪೂಜೆಗೆ ಕುದುರೆಯ । ಏರಿಕೊಂಡು
ಬಂದರು ಗೋರಿಯ ದೇವರಿಗೆ

ದಾರಿ ದೇವರ ಕಂಡು ಧನ್ಯರಾಗಲು ಅಂದು
ರಾಜರಾಣಿಯರ ಜೊತೆ ಪರಿವಾರ । ಹರಿದಿತ್ತು
ಕೂಡಿತು ಪರುಸೆ ಕಡಲಾಗಿ

ಗೋರಿ ದೇವರ ಮಹಿಮೆ ಕೊಂಡಾಟ ನೆಡಿವಾಗ
ತಳ್ಳಾಟ ಹೊರಗೆ ಆಗಿತ್ತು । ಕತ್ತಿಡಿದು
ತಳವಾರ್‍ರು ಸಿದ್ಧಯ್ನ ತಳ್ಳುತಾರೆ

ದೇಸಾಂತ್ರ ಹೋಗಿದ್ದ ಸಿದ್ಧಯ್ಯ ಕತ್ತೇಯ
ಹೂತ ಜಾಗವ ನೋಡೋ ಆಸೇಲಿ । ಬಂದವ್ನೆ
ಹುಡುಕುತ ನಿಂತವ್ನೆ ಹೂತಜಾಗ

ಇದನ್ನ ಸಿನಿಮಾ ನಟರಾದ ಲೋಹಿತಾಶ್ವ ಅವರು ನಿರ್ದೇಶಿಸಿ ಅನೇಕ ಕಡೆ ಪ್ರದರ್ಶನಗಳನ್ನು ಮಾಡಿದರು. ಇನ್ನೂ ಅನೇಕರು 'ಕತ್ತೆ ಮತ್ತು ಧರ್ಮ' ಪದ್ಯವನ್ನು ನಾಟಕವಾಗಿ ರಂಗದ ಮೇಲೆ ತಂದಿದ್ದಾರೆ. ಮತ್ತೆ ನೀವು ಹೇಳಿದಂತೆ ಪ್ರಸನ್ನರವರು ಒಂದುಸಲ 'ಪಾಠ ಒಂದು, ಪಾಠ ಎರಡು' ಅಂತ ಇಡೀ ನನ್ನ ಪದ್ಯಗಳನ್ನು ಓದಿಸೋರು. ಅದನ್ನೇ ಒಂದು ನಾಟಕ ಮಾಡಿಬಿಟ್ರು. ಆ ಪದ್ಯಗಳನ್ನು ನಾಟಕೀಯವಾಗಿ ವಾಚಿಸಿ ಅನೇಕ ನಟನಟಿಯರು ಆ್ಯಕ್ಟ್ ಮಾಡೋರು. ಇದೊಂದು ರೀತಿಯಲ್ಲಿ ವಿಶಿಷ್ಟ ಪ್ರಯತ್ನ ಅವರು ಮಾಡಿದ್ದು. ಮತ್ತೆ ಇದೇನು ರಿಪೀಟ್ ಆಗಲಿಲ್ಲ ಅಂತ ಕಾಣುತ್ತೆ.

ಗಣೇಶ: ಮತ್ತೆ ಸಾಗರದಲ್ಲಿ ಉದಯ ಕಲಾವಿದರಿಗೆ ಅವರು ಕಾವ್ಯಸಲ್ಲಾಪ ಅಂತ ಮಾಡಿದ್ದರು. 'ಕವಿಸಮಯ–2005' ಅಂತ ಮಾಡಿದ್ದರು. ಆಗಲೂ ನಿಮ್ಮ ಪದ್ಯಗಳನ್ನು ನಾಟಕೀಯವಾಗಿ ಪ್ರಸ್ತುತಪಡಿಸಿದ್ದರು.

ಡಾ. ಸಿದ್ಧಲಿಂಗಯ್ಯ: ಈ ಪಾಠ ಒಂದು ಮತ್ತು ಪಾಠ ಎರಡು ಮಾಡಿದಾಗ ನಾನು, ಡಿ.ಆರ್.ನಾಗರಾಜ ಪಾತ್ರಧಾರಿಗಳಾಗಿದ್ವಿ. ನಾವು ಪದ್ಯ ಓದ್ತಾ ಇದ್ವಿ, ಒಂದು ಸಾರಿ ನಾನು ಮತ್ತೊಂದು ಸಾರಿ ಅವರು. ರಾಜಶೇಖರ್ ಕೊಂಡಜ್ಜಿ ಅನ್ನೋರು ಇದ್ದರು. ಸಿನಿಮಾನಟ ಅವರು. ಅವರು ಈ ಪಾಠ ಒಂದು, ಪಾಠ

ಎರಡು ನಾಟಕದಲ್ಲಿ ನಾಯಕರಾಗಿದ್ದರು. ಆಗ ನಾವೂ ಆ್ಯಕ್ಟರ್ಸ್ ಆಗಿದ್ವಿ. ಅದೊಂದು ಒಳ್ಳೆ ಅನುಭವ. ಅನೇಕ ಜನ ನನ್ನ ಪದ್ಯಗಳನ್ನಿಟ್ಟುಕೊಂಡು ನಾಟಕ ಮಾಡಿರೋದ್ರಲ್ಲಿ ವಿಶೇಷ ಅಂದ್ರೆ 'ಅಲ್ಲೆ ಕುಂತವ್ರೆ'. 'ಅಲ್ಲೆ ಕುಂತವ್ರೆ' ಅದು ನಾನು ತುರ್ತುಪರಿಸ್ಥಿತಿಯಲ್ಲಿ ಬರೆದಂತಹ ಖಂಡಕಾವ್ಯ. ಇದನ್ನ ನಾಟಕ ಪ್ರಸನ್ನ ಅವರೇ ನಾಟಕ ಮಾಡಿಸಿರಬೇಕು ಅಂತ ಕಾಣುತ್ತೆ. ನಾನು ಪಾತ್ರಧಾರಿಯಾಗಿದ್ದೆ. ಅದರಲ್ಲಿನ ಕೆಲವು ಪದ್ಯಗಳನ್ನು ಸ್ಟೇಜ್ ಮೇಲೆ ಓದೋದು. ಬಾಲಭವನದಲ್ಲಿ ಮಾಡಿದ್ದೆವು. ಅದು ಆ ಕಾಲಕ್ಕೆ ಆಕರ್ಷಣೆಯಾಗಿತ್ತು. ಒಂದು ಕವಿತೆ ಒಂದು ದೀರ್ಘ ಖಂಡಕಾವ್ಯ ನಾಟಕವಾಗಿದೆ ಅನ್ನೋದೆ ಆಕರ್ಷಣೆಯಾಗಿತ್ತು.

ಗಣೇಶ: ಬಾಲಭವನದಲ್ಲಿ ಆ ಕಾಲಕ್ಕೆ ಮಕ್ಕಳ ರಂಗಭೂಮಿಗೆ ಸಂಬಂಧಪಟ್ಟಂತೆ ಕೆಲಸ ನಡೀತಿದ್ದವಲ್ಲಾ...

ಡಾ.ಸಿದ್ಧಲಿಂಗಯ್ಯ: ಹೌದು ಶುರುವಾಗಿತ್ತು. ಅದರ ಭಾಗವಾಗಿಯೆ 'ಅಲ್ಲೆ ಕುಂತವ್ರೆ' ಮಾಡಿದ್ದು. ಅಲ್ಲದೆ, 79–80ರಲ್ಲಿ ದಲಿತ ಹೋರಾಟಗಳು, ಸಂಘಟನೆಗಳು ನಡೀತಾ ಇದ್ವಲ್ಲ. ಆಗ ಜೆನ್ನಿಯವರು ಜಿಲ್ಲಾಮಟ್ಟದಲ್ಲಿ ಹೈಸ್ಕೂಲ್ ಹಾಸ್ಟೆಲ್ ವಿದ್ಯಾರ್ಥಿಗಳಿಗೆ 'ಅಲ್ಲೆ ಕುಂತವ್ರೆ' ನಾಟಕ ಮಾಡಿಸಿದ್ರು. ಆಗ ಅವರಿನ್ನೂ ಚಿಕ್ಕ ಹುಡುಗರು, ತರಬೇತಿ ಇರಲಿಲ್ಲ. ಕಷ್ಟದ ಸೀನ್‌ಗಳನ್ನು ನಕ್ಕೊಂಡು ಮಾಡೋರು. ಜೆನ್ನಿ ಅವರು ಅದೇ ಉತ್ಸಾಹದಿಂದ ಅವರಿಗೆ ಬೆನ್ನುತಟ್ಟಿ 'ಗುಡ್‌ಗುಡ್' ಎನ್ನುತ್ತಾ ಮಾಡಿಸಿದರು. ನಾನೇ ಕಣ್ಣಾರೆ ನೋಡಿದ್ದೇನೆ. ಈ ಪ್ರಸನ್ನವ್ರು ಮಾಡಿಸಿದಾಗ ನಾನೇ ಭಾಗವಹಿಸಿ ನೇರವಾಗಿ ಕವಿಯೇ ಹೋಗಿ ಓದೋದು ಇತ್ತು. 'ಪಂಚಮ'ದಲ್ಲಿ ಕೆಲವು ಹಾಡುಗಳು ಬರ್ತಾ ಇದ್ವು, ಅದರಲ್ಲಿ 'ದಾರಿ ಯಾವುದೋ' ಪದ್ಯ ಇತ್ತು.

ದಾರಿಯಾವುದೋ
ಸರಿ–ದಾರಿ ಯಾವುದೋ

ಕತ್ತಲೆಯಲ್ಲಿ ಮುಳುಗಿದ ಜನಕೆ
ಸುತ್ತಲು ಸಾವನು ಕಾಣುವ ಜನಕೆ
ಕರುಣೆಯ ಸರಪಳಿ ಕೊಲ್ಲುವ ಜನಕೆ
ಬಿಡುಗಡೆಯನ್ನು ನೀಡುವ ಒಂದು
ದಾರಿಯಾವುದೋ
ಸರಿ–ದಾರಿ ಯಾವುದೋ

ಭಿಕ್ಷೆಯ ಕೊಟ್ಟು ಶಿಕ್ಷೆಯ ಕೊಟ್ಟು
ನಾಯಿಯ ಬಾಳಿಗೆ ದಲಿತರ ನೂಕಿ
ನಡೆಸುವ ಹಿಂಸೆಯ ಕೊನೆಗಾಣಿಸುವ
ಸಮತೆಯ ಹೂವು ಅರಳುವ ತೋಟಕೆ
ದಾರಿ ಯಾವುದೋ
ಗೆಳೆಯ–ದಾರಿ ಯಾವುದೋ



ಅವಮಾನದ ಕಣ್ಣೀರನು ತೊಳೆಯಲು
ಸಾವಿರ ಕೈಗಳು ಮೇಲಕ್ಕೇಳುವ
ಎಲ್ಲಾ ಮನುಷ್ಯರು ಒಂದೇ ಎನ್ನುವ
ಬಡವರ ಬಾಳಿಗೆ ಬೆಳಕನು ತರುವ
ದಾರಿ ಯಾವುದೋ
ಸರಿ–ದಾರಿ ಯಾವುದೋ

ಮತ್ತು ಆವಾಗ 'ಹೋರಾಟವೆ ದಾರಿ' ಅನ್ನೋ ಹಾಡು ಕೂಡ ತುಂಬಾ ಚೆನ್ನಾಗಿ ಪ್ರಚಾರವಾಯಿತು.

ಕುಂತ ಮನಗಳೆ
ನಿಂತ ಜನಗಳೆ
ಕೇಳದೆ ಹೊಸ ನುಡಿ
ಕಾಣದೆ ಕೆಂಗಿಡಿ
ಹೋರಾಟವೆ ದಾರಿ
ಕೊನೆಗಾಣದ ಬಾಳಿನ ಗೋಳಿಗೆ
ಹೋರಾಟವೆ ದಾರಿ

ಭಿಕ್ಷಾನ್ನಕೆ ಕೈಯನು ಒಡ್ಡುವ
ಕೈಗಳು ಕೊಳೆಯುವವು
ಬೇಡುವ ನೀಡುವ ಜಾಲದಂತ್ಯದಲಿ
ಸೌಖ್ಯದ ನಾಡುದಯ
ಸಮಸೌಖ್ಯದ ನಾಡುದಯ
ಕಪ್ಪು ಕತ್ತಲೆಯ ಕಗ್ಗವಿಯಲ್ಲಿ
ಕೆಂಪು ಬೆಳಕಿನ ಕಿರಣಗಳು
ಸರಪಳಿ ಕಿತ್ತ ಕೆಂಪುದಾರಿಯಲಿ
ಕೋಟಿಕಂಠಗಳ ಸಾಲುಗಳು

ಕುಂತ ಮನಗಳೆ
ನಿಂತ ಜನಗಳೆ
ಕೇಳದೆ ಹೊಸ ನುಡಿ
ಕಾಣದೆ ಕೆಂಗಿಡಿ
ಹೋರಾಟವೆ ದಾರಿ
ಕೊನೆಗಾಣದ ಬಾಳಿನ ಗೋಳಿಗೆ
ಹೋರಾಟವೆ ದಾರಿ

ಇನ್ನೊಂದು ನಾಟಕ ನಾನೇ ಬರ್ದಿದ್ದು, 'ನೆಲಸಮ' ಮಾಡಿದ್ರು ಅಂತ. ತುರ್ತು ಪರಿಸ್ಥಿತಿಯ ಕಾಲದಲ್ಲಿ ದೆಹಲಿಯ ಟರ್ಬನ್ ಗೇಟ್ ಹತ್ತಿರ ಸಾವಿರಾರು ಗುಡಿಸಲುಗಳನ್ನು ನೆಲಸಮ ಮಾಡಿಸಿದರು. ಸಿಟಿಯಲ್ಲಿ ಕೊಳಗೇರಿ ಜನ ಇರಬಾರದು ಅಂತ ಅವರನ್ನ ದೆಹಲಿಯಿಂದ 40 ಕಿ.ಮೀ. ದೂರಕ್ಕೆ ಹಾಕಿಬಿಟ್ರು. ಆ ವಿಷಯಾನ

ವಸ್ತುವಾಗಿ ಇಟ್ಟುಕೊಂಡು 'ನೆಲಸಮ' ಅಂತ ನಾಟಕ ಬರೆದೆ. ಇದರಲ್ಲಿನ ಎರಡು ಹಾಡುಗಳು ತುಂಬಾ ಫೇಮಸ್ ಆದ್ವು. ಎಲೆಕ್ಷನ್ ಟೈಮ್ ಬೇರೆ, ಇಂದಿರಾಗಾಂಧಿ ಚಿಕ್ಕಮಗಳೂರಿನಲ್ಲಿ ಎಲೆಕ್ಷನ್‌ಗೆ ನಿಂತಿದ್ರು. ಆಗ ತಿಂಗಳಾನುಗಟ್ಟಲೇ ಈ ನಾಟಕವನ್ನು ಆಡಿದರು – ಇಂದಿರಾಗಾಂಧಿಗೆ ವಿರುದ್ಧವಾಗಿ.

ತುರ್ತುಪರಿಸ್ಥಿತಿಯ ಕರಾಳ ರಾಣಿಯ
ಕಥೆಯನು ಹೇಳುತೀವಿ
ಜನಗಳ ಸಾವಿರ ಸಂಕಟವನ್ನು
ಜೊತೆಯಲ್ಲಿ ಹೇಳ್ತೀವಿ

ಅಂತ ಒಂದು ಹಾಡಿತ್ತು. ಅದು ಆ ಕಾಲಕ್ಕೆ ತುಂಬ ಪ್ರಸಿದ್ಧವಾದ ಹಾಡಾಗಿತ್ತು. ಆ ಮೇಲೆ –

ಬಿದ್ದಾವು ಮನೆಗಳು ಬಿದ್ದಾವು ಹೆಣಗಳು
ಬಿದ್ದಾವು ತೆಂಗಿನ ಗರಿಗಳು / ಅಣ್ಣಯ್ಯ
ಬಡವರ ಸಾವು ಆಯ್ತಲ್ಲೋ

ಗುಡಿಸಲು ಬೀಳುವಾಗ ಬಂಗಲೆ ನಗುತಿದ್ದೊ
ನಮ್ಮೂರು ಮೋರಿ ಹೆಣತುಂಬಿ / ಹರಿಯಿತು
ರಕ್ತದ ಕೋಡಿ ಊರೆಲ್ಲ

ಮಕ್ಕಳು ಮರಿಗಳು ಬಸರೀರು ಬಾಣಂತೀರು
ಇಲಿಗಳ ರೀತೀಲಿ ಚೆಲ್ಲಾಡಿ / ಹೋದರು
ಬಡವರ ಬಂಧುಗಳೆಲ್ಲವರೋ

ಈ ಗುಡಿಸಲು ಕೆಡುವುತಾ ಇದ್ದಾಗ ಜನಗಳೆಲ್ಲ ದುಃಖಿಸುತ್ತ ಇರುವ ಸಂದರ್ಭವನ್ನು ಮನಸ್ಸಲ್ಲಿಟ್ಟುಕೊಂಡು ಬರೆದ ಹಾಡು ಅದು. ಈ ಹಾಡನ್ನು ಈಗಲೂ ಅಲ್ಲಲ್ಲಿ ಹಾಡ್ತಾರೆ. ಆದರೆ ಹಾಡೋರಿಗೆ ಇದು ಯಾಕಾಗಿ ಬರೆದೆ, ಯಾವ ಸಂದರ್ಭದಲ್ಲಿ ಬರೆದೆ ಅನ್ನುವ ಕಾಂಟೇಕ್ಸ್ಟ್ ಮರೆತುಹೋಗಿದೆ. ಆದರೆ ಇವತ್ತಿಗೂ ಹಾಡ್ತಾರೆ. ಈಗಲೂ ಬೆಂಗಳೂರಿನಂಥ ನಗರಗಳಿಗೆ ಸ್ಲಮ್ಮುಗಳು ಬೇಡವಾಗಿರ್ತಾವೆ. ಇವತ್ತಿಗೂ ಅವುಗಳನ್ನ ಖಾಲಿ ಮಾಡಿಸೋ ಹುನ್ನಾರ ನಡಿತಾ ಇರತ್ತೆ. ಅಂಥಾ ಕಡೆ ಎಲ್ಲ ಈ ಪದ್ಯ ಮತ್ತೆ ಮತ್ತೆ ಮಾತಾಡತ್ತೆ.

ಮಡಕೇಗೆ ಕುಡಿಕೇಗೆ ಮನುಷ್ಯರು ಸಮನಾಗಿ
ಬೀದಿಗೆ ಬಂದು ಬಿದ್ವಲ್ಲೋ । ಈವತ್ತು
ಮಣ್ಣಿನ ಕಣವಾಗಿ ಹೋದ್ವಲ್ಲೊ

ಬಡವರ ಹೆಸರೇಳಿ ಪಟ್ಟಕ್ಕೆ ಬಂದೋರು
ಬಡವರ ಚಟ್ಟವ ಕಟ್ಟೀಸಿ । ಮಣ್ಮಾಡಿ
ಗುಡಿಸಲುಗಳ ನುಂಗಿ ನಗುತಾರಲ್ಲೊ

ಕೊನೆಯಲ್ಲಿ ಈ ಹಾಡು ಎಂಡಾಗೋದು ನೋಡಿ –



ತುಳಿಯುವ ಜನರನ್ನು ಸುಮ್ಮನೆ ಬಿಡಲಾರೊ
ಮನೆಮನೆ ಮುಂದಲ ಗಿಡದಲ್ಲಿ । ನಾವೆಲ್ಲ
ಬರುತೀವಿ ಕೆಂಪನೆ ಹೂವಾಗಿ

ಅಂತ ಹಾಡು ಮುಕ್ತಾಯ ಆಗ್ತದೆ. ಇದು ಕೂಡ ನಾಟಕಕ್ಕೆ ಬರೆದ ಹಾಡೇ.

ಆಮೇಲೆ ಒಮ್ಮೆ ನಾಟಕ ನಿರ್ದೇಶಕರಾದ ಆರ್. ನಾಗೇಶ್ ನನ್ನ ಹತ್ರ ಬಂದ್ರು. ನಮ್ಮನೆ ಹುಡುಕಿಕೊಂಡು ಶ್ರೀರಾಮ್‌ಪುರಕ್ಕೆ ಬಂದರು. ಶ್ರೀರಾಮ್‌ಪುರದಲ್ಲಿ ನಮ್ಮನೆ ತುಂಬಾ ಚಿಕ್ಕದೂ. ಅದರಲ್ಲಿ ಒಂದು ರೂಮು, ಆ ರೂಮಲ್ಲಿ ಒಂದು ಹಳ್ಳ, ಹಳ್ಳದಲ್ಲಿ ಒಂದು ಮಂಚ, ಸಿಕ್ಕಾಪಟ್ಟೆ ಪುಸ್ತಕ. ಆ ಸ್ಲಮ್ಮಲ್ಲಿ ನಾನು ಒಂಥರ ಹೂತು ಒಳಗಡೆ ಹೋದಂಗೆ. ಆರ್. ನಾಗೇಶ್‌ರು ಎತ್ತರದ ದೊಡ್ಡಾಳು. ಅವರು ಕಷ್ಟಪಟ್ಟು ತಲೆಬಗ್ಗಿಸಿಕೊಂಡು ಬಕ್ಕೊಂಡು, ಬಕ್ಕೊಂಡು, ಬಕ್ಕೊಂಡು ನಾನು ಇದ್ದ ಹಳ್ಳದ ರೂಮಿಗೆ ಬಂದರು. ನಾನು, ಇದೇನಪ್ಪ ಬೆಳಿಗ್ಗೆ ಅಷ್ಟೊತ್ತಿಗೆ ಇಷ್ಟು ದೊಡ್ಡ ವ್ಯಕ್ತಿಗಳು ಬಂದುಬಿಟ್ಟವರೆ ಅಂತ 'ಏನ್ ಸಾರ್' ಅಂದೆ. ನಾನು ಒಂದು ನಾಟಕ ಮಾಡಿಸ್ತಿದ್ದೀನಿ, ಶಿವರಾಮ ಕಾರಂತರ 'ಚೋಮನ ದುಡಿ', ಅದಕ್ಕೆ ನನಗೆ ಮೂರ್‍ನಾಲ್ಕು ಹಾಡು ಬರೆದುಕೊಡಬೇಕಲ್ಲ ಅಂದ್ರು. 'ಚೋಮನ ದುಡಿ' ಬುಕ್ಕು ಕೈಗೆ ಕೊಟ್ರು. ನಾನು ಬರಕೊಡ್ತೀನಿ ಅಂದುಬಿಟ್ಟು, ಪೂರ್ತಿ ಓದಿದ್ದೆ ನಾನು. ಇನ್ನೊಂದು ಸಲ ಓದಿ ಒಂದು ನಾಲ್ಕು ಹಾಡು ಬರೆದೆ – 'ಚೋಮನ ಮಕ್ಕಳ ಹಾಡು' ಅಂತ. ಅದು ಈ ರೀತಿ ಇದೆ –

ಕಾಳ ನೀಲ ಬೆಳ್ಳಿ ಗುರುವ ಚೆನಿಯ
ಚೋಮನ ಮಕ್ಕಳು ನಾವುಗಳು

ಕಣ್ಣಿನ ಒಳಗೆ ನೋವಿರುವವರು
ಮಣ್ಣಿನ ಒಳಗೆ ಮುಖವಿಟ್ಟವರು
ತಾಯಿಯನಗಲಿದ ಮಕ್ಕಳು ನಾವು
ನೋವನಪ್ಪಿದವರು

ಉಕ್ಕಿನ ಮಯ್ಯಿ ಹೂವಿನ ಮನಸು
ಮೂಡುವ ಭೂಮಿಯ ಗೇಣಿಯ ಕನಸು
ಭೂತಾಯಿಯ ಮಲಮಕ್ಕಳು ನಾವು
ಚೋಮನ ಎಲುಬುಗಳು

ಒಡೆಯರ ಸುಂದರ ತೋಟದ ಒಳಗೆ
ಅರಳುವ ಹೂವಿನ ದಳದಲ್ಲಿ
ಅಪ್ಪನ ಬೆವರಿನ ರಕ್ತವು ಸೋರಿ
ಕೆಂಪಾದವು ಹೂವು
ದಣಿಗಳ ಹಬ್ಬದ ಊಟಕ್ಕಾಗಿ

ಖಂಡವ ಕಿತ್ತು ಕೊಟ್ಟವರು
ನೆಲದಾಧಾರ ತಪ್ಪಿದ ಜನರು
ಮುಗಿಲಿನ ಆಸರೆ ಸಿಗದವರು

ಭೂಮಿ ಬೆಟ್ಟ ನೀಲಿಯ ಬಾನಿಗೆ
ನಮ್ಮಯ ನಾಡಿನ ಎಲ್ಲಾ ಜನತೆಗೆ
ಚೋಮನ ಹೆಸರು ಕಥೆಗೊತ್ತು
ಚೋಮನ ಮಕ್ಕಳೆ ಹೇಳುವ ಕಥೆಯನು
ಕೇಳಿರಿ ಸ್ವಾಮಿ ಈ ಹೊತ್ತು.

ಈ ಪದ್ಯ ನಾಟಕಕ್ಕೆ ಚೆನ್ನಾಗಿ ಹೊಂದಾಣಿಕೆ ಆಗಿ ಅನೇಕರನ್ನ ತಟ್ಟಿಬಿಡ್ತು. ಇದಾದ ಮೇಲೆ ಆ ಭೂಮಾಲೀಕನ ಅಜ್ಜಿ ಚೋಮನಿಗೆ ಭೂಮಿ ಕೊಡೋದಕ್ಕೆ ವಿರೋಧಿಸತಾಳಲ್ಲ, ಅವಳನ್ನು ಮುಖ್ಯವಾಗಿಟ್ಟುಕೊಂಡು 'ಅಜ್ಜಿಗೆ ಸಾವಿಲ್ಲವೆ' ಅಂತ ಒಂದು ಪದ್ಯ ಬರೆದುಕೊಟ್ಟೆ. ಆ ಹಾಡನ್ನ ಅಜ್ಜಿ ಹೀಗೆ ಹೇಳ್ತಾಳೆ –

ಉತ್ತಮ ಜಾತಿಯ ನಾವುಗಳೆಲ್ಲ
ದೇವಾಲಯದ ಕಳಶಗಳು
ನಮ್ಮಯ ಊರಿನ ಪಂಚಮರೆಲ್ಲ
ಪಾಯದ ಕೆಳಗಿನ ಕಲ್ಲುಗಳು

ಇಲ್ಲಿನ ಅಜ್ಜಿ ಒಂದು ರೀತಿಯಲ್ಲಿ ಜಾತಿಯ ಅಹಂಕಾರದಲ್ಲಿ ಹೇಳ್ತಾಳೆ. ಚೋಮನ ಬಗ್ಗೆ ಕೂಡ ಒಂದು ಹಾಡು ಬರೆದಿದ್ದೆ. ಪಾಪ, ಆರ್.ನಾಗೇಶ್ ಅವರು ತೀರಿಕೊಂಡಾಗ ಅವರ ಸುತ್ತ ಅನೇಕರು ಕೂತುಕೊಂಡು

ಕಾಳ ನೀಲ ಬೆಳ್ಳಿ ಗುರುವ ಚೆನಿಯ
ಚೋಮನ ಮಕ್ಕಳು ನಾವುಗಳು...

ಅಂತ ಹಾಡ್ತ ಇದ್ದರು. ಅದನ್ನ ನೋಡಿ ಬಹಳ ಬೇಜಾರು ಆಗಿಬಿಡ್ತು. ಚೋಮ ಹಾಡುವ ಹಾಡು ಸಹ ಚೆನ್ನಾಗಿದೆ 'ಹೆಂಡಕ್ಕೆ ಸಾವಿಲ್ಲವೊ' ಅದರ ಶೀರ್ಷಿಕೆ.

ಭೂತಾಯಿ ಸಿಗಲಿಲ್ಲ ಈ ತಾಯಿ ಸಿಕ್ಕವಳೆ
ಕಾಣಿರೋ ಆನಂದವ
ಹೆಂಡ ಬಾಡಿನ ಮುಂದೆ ಇನ್ನು ದೇವರು ಉಂಟೆ
ಮಾಡಿರೋ ದೊಡ್ಡಬ್ಬವ
ಸಾವ್ಕಾರ್ರ ಸಾಲಗಳ ಅರೆಗಳಿಗೆ ಮರೆಯೋಣ
ಹಾಡಿರೊ ಸಂಗೀತವ

ನಮ್ಮಯ ದುಡಿಮೇಲಿ ಧಣಿಜೀವ ಅಡಗೈತೆ
ಧಣಿಗೆಂದು ನೋವಿಲ್ಲವೊ
ಹೆಂಡದ ಗಡಿಗೇಲಿ ನಮಜೀವ ಅಡಗೈತೆ
ಹೆಂಡಕ್ಕೆ ಸಾವಿಲ್ಲವೊ
ಉರಿಬಾಡು ಹೆಂಡಕ್ಕೆ ಹುಟ್ಟಿದ ಜನ ನಾವು



ವ್ಯಸನಕ್ಕೆ ತಾವಿಲ್ಲವೊ
ಹೆಂಡಕ್ಕೆ ಸಾವಿಲ್ಲವೊ

ಈತರ ಕುಡಿತದ ಬಗ್ಗೆ ಇರುವ ಹಾಡು ಅದು. ಕೆಲವು ಸಂಕಲನಗಳಲ್ಲಿ ಈ ಪದ್ಯ ಮತ್ತು 'ಅಜ್ಜಿಗೆ ಸಾವಿಲ್ಲವೆ' ಪದ್ಯ ಬಿಟ್ಟುಹೋಗಿದೆ. ಅದನ್ನ ಮತ್ತೆ ಹುಡುಕಬೇಕಾಗಿದೆ. ಇಂಥ ಪದ್ಯಗಳು ಕೆಲವು ಸಂಕಲನಗಳಲ್ಲಿ ಬಿಟ್ಟುಹೋಗಿದ್ದರೂ ಇವತ್ತಿಗೂ ಅನೇಕರು ಬೇರೆ ಬೇರೆ ಸಂದರ್ಭಗಳಲ್ಲಿ ಅವುಗಳನ್ನ ಹಾಡ್ತಾ ಇರ್ತಾರೆ.

ಆ ಮೇಲೆ ಇನ್ನೊಂದು ಹಾಡು ಬರೆದಿದ್ದೆ, ಪ್ರಸನ್ನ ಅವರು 'ತಾಯಿ' ನಾಟಕ ಮಾಡಿದಾಗ. ಅದು ಬ್ರೆಕ್ಟ್‌ನ ನಾಟಕ ಅಲ್ವೆ, 'ತಾಯಿ' ನಾಟಕದ ಹೀರೋನ ಪೋಲೀಸರು ಕೊಲೆ ಮಾಡಿಬಿಡ್ತಾರೆ. ಆ ಹೀರೋನ ಕೊಲೆ ಮಾಡಿದಾಗ, ಈ ಉಳಿದ ಕ್ರಾಂತಿಕಾರಿಗಳು ಅವರ ತಾಯಿ ಹತ್ರ ಹೋಗಿ 'ನಿನ್ನ ಮಗನ ಕೊಂದರು' ಅಂತ ಮಗನ ಸಾವಿನ ಸುದ್ದಿಯನ್ನು ತಿಳಿಸ್ತಾರೆ. ಅವಳ ಹೆಸರು 'ವ್ಲಾಸೋವ' ಅಂತ, ಆ ನಾಟಕದಲ್ಲಿ ಇದು ತುಂಬ ಚೆನ್ನಾಗಿ ತಂದಿದ್ರು.

ಓ ಗೆಳತಿ ವ್ಲಾಸೋವ ನಿನ್ನ ಮಗನ ಕೊಂದರು
ಹೋರಾಟದ ಜೀವಿಯನ್ನು ಒಡನಾಡಿ ಬಂಧುವನ್ನು
ನಿನ್ನ ಮಗನ ಕೊಂದರು
ಅವನಂಥ ಮೈಕೈಗಳು ಕಟ್ಟಿದಂಥ ಗ್ವಾಡೆ ತಾವು
ಬಿಸಿಲೇರದ ಬೆಳಗಿನಲ್ಲಿ ನಿನ್ನ ಮಗನ ಕೊಂದರು
ಬೆವರ ಬಸಿದ ಅವನ ಎದೆಗೆ ಗುರುಯಿಟ್ಟರು
ಗುಂಡಿಕ್ಕಿದರು
ಗುಂಡೊಂದೂ ಕಾಣಲಿಲ್ಲ ಕೊಲೆಗಡುಕರ ಕೆಲಸವೆಲ್ಲ
ಸತ್ತ ಮಗನ ಕಣ್ಣಿನಲ್ಲಿ ಮಿಂಚಿಮಾಯವಾಯಿತು.
ಹೊರಗಿನವರು ಕೊಲ್ಲಲಿಲ್ಲ ಎಲ್ಲ ಇವನ ಬಂಧುಬಳಗ
ನೆರೆಹೊರೆಯವರು
ಸುತ್ತಿದಂಥ ಸರಪಳಿಯಲಿ ಧರಧರಧರ ಎಳೆಯುವಾಗ
ಕ್ರಾಂತಿವೀರರೆಲ್ಲ ಬಂದು ಮುತ್ತಿಕೊಂಡರು
ಗಿಟುಕಾಸಿದ ಗಿರಣಿಗಳು ಚಿಮಣಿ ಹೊತ್ತು ನಿಂತಿದ್ದೊ
ಅವನ ಕಾಲ ಮಿಂಚಿತ್ತು ಹೊಳೆಯಿತೇನೊ ಮನಸಿಗೆ
ಶೂನ್ಯವಾದ ಗಿರಣಿಗಳಲಿ ದಿನದಿನಕ್ಕೂ ಬೆಳೆಯುವಂಥ
ಬೆಟ್ಟದಂಥ ಶಕ್ತಿಯೊಂದು ಕಂಡಿತವನ ಕಣ್ಣಿಗೆ
ತೊಟ್ಟಿಕ್ಕಿತು ಕಣ್ಣೀರು ಹೋದನವನು ಮಣ್ಣಿಗೆ.
ಓ ಗೆಳತಿ ವ್ಲಾಸೋವ ನಿನ್ನ ಮಗನ ಕೊಂದರು
ಹೋರಾಟದ ಜೀವಿಯನ್ನು ಒಡನಾಡಿ ಬಂಧುವನ್ನು
ನಿನ್ನ ಮಗನ ಕೊಂದರು.

(ಬ್ರೆಕ್ಟ್ ಕವಿಯ ಹಾಡಿನ ಭಾವಾನುವಾದ)

ಈ ಹಾಡನ್ನು ಹಾಡುವ ಗುಂಪಿನಲ್ಲಿ ಸಿ.ಜಿ.ಕೆ. ಇದ್ದರು. ಆವಾಗ ತಾನೆ ಸಿ.ಜಿ.ಕೆ.

ಪಾತ್ರ ಮಾಡತಾ ಇದ್ದರು. ಇನ್ನೂ ಡೈರೆಕ್ಟರ್ ಆಗಿರಲಿಲ್ಲ, ಫೇಮಸ್ ಆಗಿರಲಿಲ್ಲ, ಫಸ್ಟ್ ನಾಟಕ. ಅವರು ಒಂಥರ ಆರ್ಗನೈಸರ್ ತರ ಓಡಾಡಿಕೊಂಡು ಇದ್ದರು. ಅವರಲ್ಲಿ ಒಬ್ಬ ನಟ ಇರಬಹುದು ಅಂತ ಅವರಿಗೆ ಪಾತ್ರ ಕೊಟ್ಟಿದ್ದರು. ಈ ಹಾಡನ್ನ ಹಾಡುವಾಗ ಸಿ.ಜಿ.ಕೆ. ಅತ್ತುಬಿಟ್ರು. ಅತ್ತು ಬಿಟ್ಟು, ನನ್ನ ಹುಡುಕೊಂಡು ಬಂದು ನನಗೆ ಫ್ರೆಂಡ್ ಆಗಿಬಿಟ್ಟರು. 'ಏನ್ ಗುರು, ಎಂಥ ಹಾಡು ಬರೆದುಕೊಟ್ಟಿದ್ದೀಯ, ನನಗೆ ಕಣ್ಣೀರು ತಡೆಯೋಕೆ ಆಗಲಿಲ್ಲ' ಅಂದರು. ಆಮೇಲೆ ಸಿ.ಜಿ.ಕೆ. 'ಬೆಲ್ಚಿ' ನಾಟಕ ಮಾಡಿದರು. ಅವರದೇ ಡೈರೆಕ್ಷನ್. ಬೆಲ್ಚಿ ನಾಟಕಕ್ಕೂ ನಾನು ಹಾಡು ಬರೆದಿದ್ದೆ. ಅದು 'ಬೆಲ್ಚಿಯ ಹಾಡು' ಅಂತಲೇ ಪ್ರಸಿದ್ಧವಾಗಿದೆ.

ದೊಡ್ಡಗೌಡರ ಬಾಗಿಲೀಗೆ
ನಮ್ಮ ಮೂಳೆಯ ತ್ವಾರಣ
ನಮ್ಮ ಜನಗಳ ಕಾಲುಕಯ್ಯಿ
ಕಂಬ ಅವರ ಹಟ್ಟಿಗೆ
ಅವರ ಬೇಟೆಗೆ ನಾವು ಮೊಲಗಳು
ನಮ್ಮ ಬಾಳೇ ಬಂಗಲೆ
ಅವರ ಬಂಗಲೆಯಂಗಳಕ್ಕೆ
ನಮ್ಮ ರಕ್ತದ ರಂಗಾಲೆ

ಅವರ ತೋಟದ ತೆಂಗಿನಲ್ಲಿ
ನಮ್ಮ ರಕ್ತದ ಎಳನೀರು
ಅವರ ಅಮಲಿನ ಗುಂಗಿನಲ್ಲಿ
ಕೂಲಿ ಹೆಣ್ಣಿನ ಕಣ್ಣೀರು
ಯಾವ ಪಾಪವ ಮಾಡಲಿಲ್ಲ
ಯಾರ ತಲೆಯನು ಹೊಡೆಯಲಿಲ್ಲ
ಕರಗಿ ನಮ್ಮಯ ಬಾಳಕತ್ತಲು
ಕಾಣಲಾರವೆ ಹಗಲನು.

ಈ ನಾಟಕಗಳಿಗಾಗಿ ಬರೆದ ಅನೇಕ ಹಾಡುಗಳನ್ನ ಈಗಲೂ ಹಾಡತಾ ಇರ್ತಾರೆ. ಕೆಲವು ಪದ್ಯಗಳನ್ನ ನಾನು ನಾಟಕಗಳಿಗಾಗಿ ಬರೀದೆ, ಹಾಗೆ ಬರೆದಿದ್ದೆ. ಅವುಗಳಲ್ಲಿ ಕೆಲವು ನಾಟಕಗಳಿಗೆ ಬಳಕೆ ಆಗಿವೆ. ಆಮೇಲೆ ನನ್ನ ಕಾವ್ಯವನ್ನು ಹೊರತುಪಡಿಸಿ ಹೇಳೋದಾದರೆ ನನ್ನ 'ಅವತಾರಗಳು' ಕೃತಿಯನ್ನು ಸಾಗರದ ಕಾಗೋಡು ರಂಗಮಂಚದವರಿಗಾಗಿ ನೀವೆ ಡೈರೆಕ್ಟ್ ಮಾಡಿದ್ದೀರಿ. ಅದನ್ನ ನಾನು ಕರ್ನಾಟಕದ ಬೇರೆ ಬೇರೆ ಭಾಗಗಳಿಗೆ ಹೋಗಿ ದೇವರು ಮತ್ತು ಈ ಪೂಜಾರಿಗಳ ಕುರಿತಾಗಿ ಕ್ಷೇತ್ರಕಾರ್ಯ ಮಾಡಿ ಸಂಗ್ರಹ ಮಾಡಿದ್ದೆ. ಅದನ್ನ ನಾಟಕ ಮಾಡಿ ಅನೇಕ ಪ್ರದರ್ಶನಗಳನ್ನು ಮಾಡಿರೋದು ಸಹ ಒಂದು ವಿಶಿಷ್ಟ ಪ್ರಯತ್ನ ಮತ್ತು ಪ್ರಯೋಗ ಅಂತ ನಾನು ಭಾವಿಸಿದ್ದೀನಿ.



ನನ್ನ ಕವಿತೆಗಳು ಮತ್ತು ನಾಟಕಗಳಿಗೆ ಒಂದು ರೀತಿ ಅವಿನಾಭಾವ ಸಂಬಂಧ ಇದೆ. ನನ್ನ 'ಕತ್ತೆ ಮತ್ತು ಧರ್ಮ' ಪದ್ಯ ಓದ್ದೋರಿಗೆ ಮಾಸ್ತಿಯವರ 'ಸಮಾಧಿಸತ್ವ' ಓದಿ ಅಂತ ತಿಳಿಸಿರ್ತಾರೆ. ಬೇಂದ್ರೆಯವರು ಸಹ ಅನೇಕ ನಾಟಕಗಳಿಗೆ ಹಾಡುಗಳನ್ನು ಬರೆದಿದ್ದರಂತೆ. 'ಇನ್ನೂ ಯಾಕ ಬರಲಿಲ್ಲವ ಹುಬ್ಬಳ್ಳಿಯಂವಾ' ಅನ್ನುವ ಪದ್ಯ ನಾಟಕಕ್ಕಾಗಿಯೇ ಬರೆದಿದ್ದು ಅಂತ ಹೇಳ್ತಾರೆ. ಆದರೆ ಅವರಷ್ಟು ದೊಡ್ಡ ಕವಿ ಅಲ್ಲ ನಾನು. ಆದರೂ ನನ್ನ ಅನೇಕ ಪದ್ಯಗಳು ನಾಟಕಕ್ಕೆ ಬಳಕೆ ಆಗಿರೋದು ನನಗೆ ಬರೆಯೋದಕ್ಕೆ ಒಂದು ತರ ಉತ್ಸಾಹ ತಂದುಕೊಟ್ಟಿವೆ ಅಂತ ಹೇಳಬಹುದು. ನನ್ನ ಪದ್ಯಗಳಲ್ಲಿ 'ಅಲ್ಲೆ ಇದ್ದವರು' ಸಹ ನಾಟಕ ಆಗಿದೆ. ಇನ್ನೊಂದು ತುಂಬಾ ಪ್ರಸಿದ್ಧವಾದ ಕವಿತೆ 'ನಲವತ್ತೇಳರ ಸ್ವಾತಂತ್ರ್ಯ'ದ ಮೇಲೆ ಬರೆದಿದ್ದು.

ಯಾರಿಗೆ ಬಂತು ಎಲ್ಲಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ
ಟಾಟಾ ಬಿರ್ಲಾ ಜೋಬಿಗೆ ಬಂತು
ಕೋಟ್ಯಾಧೀಶನ ಕೋಣೆಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ

ಬಡವರ ಮನೆಗೆ ಬರಲಿಲ್ಲ
ಬೆಳಕಿನ ಕಿರಣ ತರಲಿಲ್ಲ
ಗೋಳಿನ ಕಡಲನು ಬತ್ತಿಸಲಿಲ್ಲ
ಸಮತೆಯ ಹೂವನು ಅರಳಿಸಲಿಲ್ಲ
ನಲವತ್ತೇಳರ ಸ್ವಾತಂತ್ರ್ಯ

ಹಣವಂತರು ಕೈಸನ್ನೆ ಮಾಡಿದರೆ
ಕತ್ತಲೆಯಲ್ಲಿ ಬೆತ್ತಲೆಯಾಯಿತು
ಯಾರೂ ಕಾಣದ ಸ್ವಾತಂತ್ರ್ಯ
ನಲವತ್ತೇಳರ ಸ್ವಾತಂತ್ರ್ಯ

ಸ್ವಾತಂತ್ರ್ಯ ದಿನಾಚರಣೆಗಾಗಿ ಆಗಸ್ಟ್ 15ರ ಮಧ್ಯರಾತ್ರಿಯಲ್ಲಿ ಒಂದು ನಾಟಕ ಆಡಿಸ್ತಾ ಇದ್ರು ಸಿ.ಜಿ.ಕೆ., ಯಾಕಂದರೆ ಸ್ವಾತಂತ್ರ್ಯ ಬಂದಿದ್ದು ಮಧ್ಯರಾತ್ರೀಲಿ ಅಲ್ವ. ಮೆಜೆಸ್ಟಿಕ್‌ನಲ್ಲಿರುವ 'ಎಲೈಟ್' ಹೋಟೆಲ್ ಕಾರ್ಮಿಕರನ್ನು ಸೇರಿಸಿಕೊಂಡು ಮಾಡತಾ ಇದ್ದ ನಾಟಕ ಅದು. ಆವಾಗ ಅವರು ನನ್ನ ಹತ್ತಿರ ಬಂದು 'ನಮಗೆ ನಾಟಕಕ್ಕೆ ಒಂದು ಹಾಡನ್ನು ಬರೆದು ಕೊಡಿ' ಅಂತ ಕೇಳಿದರು. ಅದ್ಯಾವುದೋ ಒಂದು ಹೋಟೆಲಿಗೆ ಅವರನ್ನು ಟೀ ಕುಡಿಯೋದಕ್ಕೆ ಕರ್ಕೊಂಡು ಹೋಗಿ ಕೂರಿಸಿಕೊಂಡು ಆ ಟೀ ಕುಡಿಯೋದ್ರೊಳಗೆ ಈ ಹಾಡು ಬರೆದುಬಿಟ್ಟೆ.

ಸಾವಿರಾರು ಜನ ಗೋರಿಯಾದರು
ಲಕ್ಷಲಕ್ಷ ಜನ ಗಲ್ಲಿಗೇರಿದರು
ರೈತ ಕಾರ್ಮಿಕರು ರಕ್ತವ ಕೊಟ್ಟರು

ಯಾರಿಗೆ ಬಂತು ಸ್ವಾತಂತ್ರ್ಯ
ನಲವತ್ತೇಳರ ಸ್ವಾತಂತ್ರ್ಯ
ಪೋಲೀಸರ ಬೂಟಿಗೆ ಬಂತು
ಮಾಲೀಕರ ಚಾಟಿಗೆ ಬಂತು
ಬಂದೂಕದ ಗುಂಡಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ

ಪಾರ್ಲಿಮೆಂಟಿನ ಕುರ್ಚಿಯ ಮೇಲೆ
ವರ್ಷಗಟ್ಟಲೆ ಚರ್ಚೆಗೆ ಕೂತು
ಬಡವರ ಬೆವರು ರಕ್ತವ ಕುಡಿದು
ಏಳಲೆ ಇಲ್ಲ ಸ್ವಾತಂತ್ರ್ಯ
ನಲವತ್ತೇಳರ ಸ್ವಾತಂತ್ರ್ಯ

ಯಾರಿಗೆ ಬಂತು ಎಲ್ಲಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ.

ಹೀಗೆ ಅನೇಕ ಸಂದರ್ಭಗಳಲ್ಲಿ ನನ್ನ ಹಾಡುಗಳು ಹುಟ್ಟಿಕೊಂಡಿವೆ. ಇನ್ನು ನನ್ನ ಬೇರೆ ಬರಹಗಳು ನಾಟಕ ಆಗಿದ್ದು ಅಂದ್ರೆ ನನ್ನ ಆತ್ಮಕತೆ 'ಊರು ಕೇರಿ'. ಅದನ್ನ ನಿಮ್ಮ ಜನಮನದಾಟ ರಂಗತಂಡದ ಮೂಲಕ ನೀವೇ ನಿರ್ದೇಶಿಸಿ ಕರ್ನಾಟಕದಾದ್ಯಂತ 113 ಶೋ ಮಾಡಿದ್ದೀರಿ.

ಗಣೇಶ: ನೀವು ನಾಟಕಕ್ಕಾಗಿ ಪದ್ಯಗಳನ್ನ ಬರೆಯೋ ಸಂದರ್ಭದಲ್ಲಿ ನೋಡುವ ಮತ್ತು ಕೇಳುವ ವರ್ಗವನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆದಿದ್ದೀರಿ. ಅದೇ ಉಳಿದ ನಿಮ್ಮ ಪದ್ಯಗಳನ್ನು ಮತ್ತು ಇತರ ಕೃತಿಗಳನ್ನು ಬರೆಯುವಾಗ ಓದುವ ವರ್ಗವನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು ಬರೆದಿದ್ದೀರಿ. ಉದಾಹರಣೆಗೆ, ನಿಮ್ಮ 'ಅವತಾರಗಳು' ಕೃತಿ ಬರೆದ ಸಂದರ್ಭದಲ್ಲಿ ನೀವು ಹೀಗೆ ಪ್ರಸ್ತಾಪ ಮಾಡಿದ್ದೀರಿ – 'ಅವತಾರಗಳು ಕೃತಿ ಮೂಡಿಬಂದ ಬಗೆ ವಿಶಿಷ್ಟವಾಗಿದೆ. ಎಸ್.ಮಾಲತಿಯವರು ಸಮುದಾಯ ವಾರ್ತಾಪತ್ರದ ಸಂಪಾದಕಿಯಾಗಿದ್ದರು. ಅವರು ತಮ್ಮ ಪತ್ರಿಕೆಗೆ ಏನನ್ನಾದರೂ ಬರೆಯುವಂತೆ ಕೋರಿದರು. ನಾನು ಅಳುಕಿನಿಂದಲೇ ಒಂದು ಲೇಖನವನ್ನು ಬರೆದೆ. ಆ ಲೇಖನ ಆಗಿನ ನನ್ನ ನಂಬಿಕೆ, ಚಿಂತನೆಗಳ ಪ್ರತಿಬಿಂಬವಾಗಿತ್ತು. ಲೇಖನದ ಗುಣಮಟ್ಟದ ಬಗ್ಗೆ ಅನುಮಾನ ಇದ್ದುದರಿಂದ ಅದನ್ನು ಕಾಮ್ರೇಡ್ ಮಾಲತಿಯವರಿಗೆ ಕೊಡದೆ ಹಾಗೇ ಇಟ್ಟುಕೊಂಡಿದ್ದೆ. ಒಂದು ದಿನ ಧೈರ್ಯ ಮಾಡಿ ಈಗ ಇಲ್ಲವಾಗಿರುವ ಕನ್ನಡದ ಶ್ರೇಷ್ಠ ವಿಮರ್ಶಕ, ಚಿಂತಕ, ಡಾ॥ ಡಿ.ಆರ್.ನಾಗರಾಜ್‌ರವರಿಗೆ ತೋರಿಸಿದೆ. ಅವರು ಸಾದ್ಯಂತವಾಗಿ ಓದಿ 'ಇದಕ್ಕಿಂತ ಚೆನ್ನಾಗಿ ಬರೆಯಲು ಸಾಧ್ಯವಿಲ್ಲ' ಎಂಬ ಅಭಿಪ್ರಾಯ ನೀಡಿದರು. ಅವರು ಪ್ರಾಮಾಣಿಕವಾಗಿ ಹೇಳಿದರೋ, ಸ್ನೇಹದ ಕಾರಣಕ್ಕೆ ಹೇಳಿದರೋ ನನಗೆ ತಿಳಿಯದು. ಆದರೆ ಇದರಿಂದ ನನ್ನಲ್ಲಿ ಉತ್ಸಾಹ ಮೂಡಿತು. ಮಾಲತಿಯವರು ಈ ಲೇಖನವನ್ನು ಸಂತೋಷದಿಂದ ಪ್ರಕಟಿಸಿದರು. ಓದುಗರ ಪ್ರತಿಕ್ರಿಯೆ ಚೆನ್ನಾಗಿತ್ತು. ಪ್ರತೀ ಸಂಚಿಕೆಗೂ ಆ ಬಗೆಯ ಲೇಖನ ಬರೆಯಲು ಸಂಪಾದಕಿ ಸೂಚಿಸಿದರು. ಹೀಗೆ ಬರೆದ ಲೇಖನಗಳ ಸಂಕಲನವೇ ಈ ಕೃತಿ'.

ಈ ಮೇಲಿನ ನಿಮ್ಮ ಅಭಿಪ್ರಾಯದಂತೆ ಓದುಗರ ಪ್ರತಿಕ್ರಿಯೆ ನಿಮಗೆ ಮುಖ್ಯವಾಗಿದೆ,



ಈಗ ಅದೇ ಕೃತಿ ಅಥವಾ ಇತರ ಸಾಹಿತ್ಯ ಕೃತಿಗಳು ನಾಟಕಗಳಾಗಿ ನೋಡುವ ವರ್ಗವನ್ನು ಸೃಷ್ಟಿಸುತ್ತಿವೆ. ಒಂದು ಮಾಧ್ಯಮ ಅಥವಾ ಪ್ರಕಾರದಲ್ಲಿದ್ದುದನ್ನು ಮತ್ತೊಂದು ಮಾಧ್ಯಮ ಸ್ವೀಕರಿಸಿ ಬೆಳೀತಾ ಇದೆ. ಈ ಪ್ರಕ್ರಿಯೆಯನ್ನು ನೀವು ಕವಿಯಾಗಿ ಹ್ಯಾಗೆ ನೋಡ್ತೀರಿ ಮತ್ತು ಸದ್ಯದ ಕಾಲಘಟ್ಟದಲ್ಲಿ ನಾಟಕಗಳನ್ನು ಬರೀತಾ ಇರೋರ ಸಂಖ್ಯೆ ತುಂಬಾ ಕಡಿಮೆ ಇದೆ. ಇಂತಹ ಸಂದರ್ಭದಲ್ಲಿ ನಮ್ಮ ಕವಿಗಳ ಇತರ ಸಾಹಿತ್ಯ ಕೃತಿಗಳು ರಂಗವನ್ನು ತುಂಬ್ತಾ ಇದಾವೆ. ಇದರ ಕುರಿತಾಗಿ ಹೇಳಿ.

ಸಿದ್ಧಲಿಂಗಯ್ಯ: ಇದು ತುಂಬಾ ಒಳ್ಳೆಯ ಬೆಳವಣಿಗೆ ಈಗ ಆಗ್ತಾ ಇರೋದು. ರಂಗಭೂಮಿ ಇವತ್ತು ಚಾಲೆಂಜ್ ಮಾಡತಾ ಇದೆ ಅಂತ ಅನ್ನಿಸ್ತಾ ಇದೆ. ಒಂದೇನಪ್ಪ ಅಂದ್ರೆ, ನಾನು ಕವನ ಓದತಾ ಇದ್ದೆ, ಅದೇ ರೀತಿ ಬೇರೆಯವರೂ ಓದತಾ ಇದ್ದರು. ಆದರೆ ಅದು ರಂಗದ ಮೇಲೆ ಬಂದಾಗ ನನ್ನ ಕವನ ರಾರಾಜಿಸೋದು ಅಥವಾ ಕವನ ಮೈದಾಳೋದು, ಅಭಿನಯಪೂರ್ವಕವಾಗಿ; ಇತರೆಲ್ಲಾ ಅಂಶಗಳನ್ನು ಒಳಗೊಂಡು ಪ್ರೇಕ್ಷಕರಿಗೆ ಸಂವಹನೆಯಾಗೋದು; ಅದನ್ನು ನಾನೇ ನೋಡುವ ಅವಕಾಶ ಸಿಕ್ಕೋದು. 'ಸೂರ್ಯಶಿಕಾರಿ' ನಾಟಕಕ್ಕೆ ಒಂದು ಪದ್ಯ ಬರೆದಿದ್ದೆ.

ಭೂಮಿ ದುಂಡಗಿದೆ ಭೂಮಿ ದುಂಡಗಿದೆ
ಚಪ್ಪಟೆಯೆಂಬುದು ಅಪ್ಪಟ ಸುಳ್ಳು
ವೇದಪುರಾಣ ಸುಳ್ಳಿನ ಕಂತೆ

ಈ ತರದ ಒಂದು ಪದ್ಯನ ಎಷ್ಟು ಚೆನ್ನಾಗಿ ಅಭಿನಯಿಸಿ ತೋರಿಸಿದರು ಅಂದರೆ ಓದತಾ ಇದ್ದ ನನಗೆ ಒಂದು ರೀತಿಯಲ್ಲಿ ರಂಗದ ಮೇಲೆ ಬಂದಾಗ ಬೆರಗು, ಆಶ್ಚರ್ಯ, ಒಂದು ರೀತಿಯ ಸಂತೋಷ. ಓ...ನನ್ನ ಕವಿತೆಗೆ ಇಷ್ಟು ಜೀವ ತುಂಬಿದಾರಲ್ಲ, ಇದನ್ನೊಂದು ಅಭಿನಯವಾಗಿ ಮಾಡತಾ ಇದಾರಲ್ಲ, ನನ್ನ ಕವಿತೆ ಪುಸ್ತಕದಲ್ಲೆ ಉಳಿದುಕೊಳ್ಳದೆ ಪುಸ್ತಕವನ್ನು ದಾಟಿ ಸಾವಿರಾರು ಜನ ಪ್ರೇಕ್ಷಕರ ಕಿವಿಗೆ ಬೀಳೋ ಹಂಗೆ ಆಯಿತಲ್ಲ ಅಂತ. ಅಭಿನಯದ ಮೂಲಕ ಅದು ಮೂಡಿದಾಗ ಕವಿತೆಗೆ ಇನ್ನೂ ಜಾಸ್ತಿ ಶಕ್ತಿ ಬಂದುಬಿಡೋದು. ಸ್ಟೇಜಿನ ಮೇಲೆ ಒಂದು ಕವಿತೆ ಹಲವು ರೀತಿಯ ಶಕ್ತಿಗಳನ್ನು ಒಗ್ಗೂಡಿಸಿಕೊಂಡಂತೆ ಕಾಣತ್ತೆ. ನಾನು ಹೆಂಗೆ ಬರೆದುಕೊಟ್ಟಿದ್ದೆ ಅವರಿಗೆ ಅಂದ್ರೆ –

ಭೂಮಿ ಗುಂಡಗಿದೆ
ಭೂಮಿ ಗುಂಡಗಿದೆ

ಚಪ್ಪಟೆ ಎಂಬುದು ಅಪ್ಪಟ ಸುಳ್ಳು
ಸೂರ್ಯಚಂದ್ರ ದೇವರು ಅಲ್ಲ
ಕಲ್ಲು ಮಣ್ಣಿನ ಮುದ್ದೆಯು ಅಣ್ಣಾ
ಕಟ್ಟು ಕಥೆಗಳ ನಂಬಿ ಕೆಟ್ಟರಿ
ಭೂಮಿ ಗುಂಡಗಿದೆ.

ತನ್ನನ್ನೆ ಸುತ್ತುವ ಹೊನ್ನಿನ ಭೂಮಿ

ಕತ್ತಲೆ ಬೆಳಕ ಕಾಣುವುದು
ಸತ್ಯವ ಕಾಣಲು ಪ್ರಾಣ ನೀಡುವ
ಜೀವ ಬೆಳಕ ಪಡೆಯುವುದು

ದೇವರು ಆತ್ಮ ಕಂಡವರಿಲ್ಲ
ಶಾಸ್ತ್ರ ಪುರಾಣ ಸುಳ್ಳಿನ ಕಂತೆ
ಅರಮನೆ ಗುರುಮನೆ ಮೋಸದ ಜಾಲ
ಮುಗಿಯಲಿ ಶೋಷಣೆ ಮಾಡುವ ಕಾಲ

ಭೂಮಿ ಗುಂಡಗಿದೆ
ಭೂಮಿ ಗುಂಡಗಿದೆ

ಈ ಹಾಡನ್ನು ಬರೆದಾಗ ಒಂದು ರೀತಿಯ ಪರಿಣಾಮ ಓದುಗರಲ್ಲಿ ಆಗಿತ್ತು. ಆದರೆ ಇದು ಸ್ಟೇಜ್ ಮೇಲೆ ಹತ್ತಾರು ಜನ ನಟರು, ಮ್ಯೂಸಿಕ್ ಡೈರೆಕ್ಟರು ಎಲ್ಲಾ ಸೇರ್ಕೊಂಡುಬಿಟ್ಟು ಇದನ್ನು ಅಭಿನಯಪೂರ್ವಕವಾಗಿ 'ಭೂಮಿ ಗುಂಡಗಿದೆ' ಅಂತ ಇವರು ಹಾಡ್ತಾ ಇದ್ದರೆ ನಮಗೊಂಥರ ರೋಮಾಂಚನ. ಹೊಸ ಅನುಭವ, ರಂಗದ ಮೇಲೆ ತಂದಾಗ ಈ ಥಿಯೇಟರ್‌ನವರು ಈ ಮೂಲ ಪದ್ಯಕ್ಕೆ ಇನ್ನೊಂದಷ್ಟು ಸೇರಿಸಿ ಬಿಡೋರು. 'ತನ್ನನೆ ಸುತ್ತುವ ಹೊನ್ನಿನ ಭೂಮಿ ಕತ್ತಲೆ ಬೆಳಕ ಕಾಣುವುದು' ಅಂದುಬಿಟ್ಟು 'ಗಿರಿ ಗಿರಿ ಗಿರಿ ಗಿರಿ' ಅಂತ ಏನೋ ಸೇರಿಸಿಬಿಡೋರು. ಅದು ಇನ್ನು ಆ್ಯಡ್ ಆಗ್ಬಿಡೋದು ಇದಕ್ಕೆ, ಆಂಗಿಕ ಚಲನೆ ಬೇರೆ ಮಾಡಿ ಅಲ್ಲಿ ಮೂವ್‌ಮೆಂಟ್ ಕಟ್ಟಿಬಿಡೋರು. ಭೂಮಿ ತರ ಮೂಮೆಂಟ್ ಮಾಡೋರು. ಮತ್ತೆ 'ಏಯ್' ಅನ್ನೊದು, 'ಭಲೇ' ಅನ್ನೋದು, 'ಶಭಾಷ್' ಅನ್ನೋದು, 'ಭೇಷ್' ಅಂದುಬಿಡೋದು ಇಂತವೆಲ್ಲ ಬಂದುಬಿಡೋವು. ಆವಾಗ ನಾನು ಬರೆದವನಿಗೆ ನಂಬೋಕೇ ಆಗಲ್ಲ, ಅರೇ ನನ್ನ ಹಾಡಾ ಇದು! ಇದೇನಿದು ನನ್ನ ಹಾಡಿಗೆ ಜೀವ ತುಂಬಿ, ಮೈದುಂಬಿ ಬರೋತರ ಒಂದು ರೂಪ ಕೊಟ್ಟಿದ್ದಾರಲ್ಲ... ಮತ್ತೆ ಬರೆದವನಿಗೆ ಒಂಥರ ತನ್ನ ಹಾಡು ಕೈಮೀರಿ ಹೋಗ್ತಾ ಇದೆ, ತನ್ನ ಕೈಮೀರಿ ಬೆಳೀತಾ ಇದೆ, ಪುಸ್ತಕದಿಂದ ಇದು ಬಿಡುಗಡೆ ಹೊಂದಿ ಹೀಗೆ ರಂಗಕ್ಕೆ ಕಾಲಿಟ್ಟಿದೆ ಅನ್ನೋ ಒಂದು ಅಭಿಮಾನ, ಅಭಿಪ್ರಾಯ ಬರೋದು, ತುಂಬಾ ಸಂತೋಷ ಆಗೋದು. ಆಥರ ನಾನು ತುಂಬಾ ಅನುಭವಿಸಿದ್ದೀನಿ.

ಟಿ.ಎನ್.ನರಸಿಂಹನ್ ಅಂತ ಇದ್ದರು, ಬಹಳ ಒಳ್ಳೆ ಡೈರೆಕ್ಟರ್. 'ತುಘಲಕ್' ಮಾಡಿದ್ದರು. ಸಿನಿಮಾ ಮಾಡಿದ್ರಲ್ಲ 'ಮಾವಳ್ಳಿ ಸರ್ಕಲ್ಲು', 'ತ್ರಿಶೂಲ'... ಅವರಿಗೆ ನಾನು ಎರಡು ಮೂರು ಹಾಡು ಬರೆದುಕೊಟ್ಟಿದ್ದೆ. ಅವರು ಮೊದಲು ನಾಟಕದ ನಿರ್ದೇಶಕ, ಒಂದು ದಿನ ಏನ್ ಹೇಳಿದ್ರು, ನಾನು ಚೆಕಾವ್‌ದು 'ಓವರ್‌ಕೋಟ್' ನಾಟಕ ಮಾಡಬೇಕು ಅಂತ ಇದ್ದೀನಿ ಅದಕ್ಕೆ ಹಾಡು ಬರೆದುಕೊಡಿ ಅಂತ,



ಕಲಾಕ್ಷೇತ್ರದ ಹತ್ತಿರ, ಹೇಳಿದರು. ನಾನು ಬರೆಯೋಣ ಬಿಡಿ ಸರ್ ಅಂತ ಹೇಳಿದೆ. ಅವರ ಮನೆ ಎಲ್ಲೋ ಕಮಲಾನಗರದ ಕಡೆ ತುಂಬಾ ದೂರ. ಅವತ್ತು ಕಲಾಕ್ಷೇತ್ರದಿಂದ ಕಮಲಾನಗರದವರೆಗೆ ಅವರ ಸ್ಕೂಟರ್‌ನಲ್ಲಿ ಹಿಂದೆ ಕೂತ್ಕೊಂಡು ಬಂದೆ. ಅವತ್ತು ಅವರ ಮನೇಲೆ ಹಾಲ್ಟ್ ನಾನು. ಅವರು ಹೇಳಿದರು – 'ಒಬ್ಬ ಗುಮಾಸ್ತ ಚಳಿಗೆ ತಡೀಲಾರದೆ ಕೊಲಾಪ್ಸ್ ಆಗಿಬಿಡ್ತಾನೆ, ಅಂಥ ಒಂದು ಹಾಡು ಬೇಕು ಅದು ಚಳಿಯ ಭೀಕರತೆಗೆ ಸಂಬಂಧಪಟ್ಟಂತೆ' ಅಂದರು. ಆದರೆ ನಮಗೆ ಅಂಥಾ ಚಳಿಯ ಅನುಭವ ಇಲ್ಲ. ಆದರೆ ರಷ್ಯಾದಲ್ಲಿ ಅದು ಇದೆ. ಅವರು ಸ್ಕೂಟರ್‌ನಲ್ಲಿ ಮನೆಗೆ ಬರೋದರೊಳಗೆ ಹಾಡು ರೆಡಿಮಾಡಿಬಿಟ್ಟಿದ್ದೆ. ನಾನು ಸ್ಕೂಟರ್‌ನಲ್ಲಿ ಹಿಂದೆ ಕೂತಿದ್ದೆನಲ್ಲ, ಅವರು ಬ್ಯಾಗ್ರೌಂಡ್ ಹೇಳ್ತಾ ಇದ್ದಂಗೆ ರೆಡಿ ಮಾಡ್ಬಿಟ್ಟೆ. ಆ ಹಾಡು ಈ ರೀತಿ ಇದೆ:

ಚಳಿಯು ಬಂತಲ್ಲಾ
ಇಳೆಯ ಮೇಲೆ – ಚಳಿಯು ಬಂತಲ್ಲ

ಮಂಜಿನ ಕಂಬಳಿ ಹೊದ್ದುಕೊಂಡು
ಮಾತೇ ಇಲ್ಲದ ಕಳ್ಳನ ರೀತಿ
ಬಾಗಿಲ ಕಿಂಡಿ ತೂರಿತ್ತು
ಕಂಡವರನ್ನು ಹಿಡಿದಿತ್ತು.

ಮರಗಳಿಗೆಲ್ಲ ಮಂಜಿನ ಟೋಪಿ
ಬೆಟ್ಟದ ಸಾಲಿಗೆ ಬೆಳ್ಳಿಯ ಬಟ್ಟೆ
ಕಂಡಲ್ಲೆಲ್ಲಾ ಇಬ್ಬನಿ ಹಬ್ಬ
ಬಂದವರಾರೋ ಹೋದವರಾರೋ
ತಿಳಿಯುವುದೇ ಇಲ್ಲ.

ಗಡ ಗಡ ಎಂದು ನಡುಗಿಸುತ್ತಿತ್ತು
ತಬಲ ಬಡಿದವು ಹಲ್ಲುಗಳು
ಕುಣಿದವು ಕಯ್ಯಿ ಕಾಲುಗಳು
ಬಡವರ ಬಿಡಲಿಲ್ಲ
ಹಣವಂತರ ಬಿಡಲಿಲ್ಲ
ಫ್ಯಾಷನ್ ಹುಡುಗಿಯ ಬಿಡಲೇ ಇಲ್ಲ
ಇಳೆಯ ಮೇಲೆ – ಚಳಿಯು ಬಂತಲ್ಲ.

ಮಲಗಿದ್ದವರನು ಕೂರಿಸಿತು
ಕುಂತವರನ್ನು ನಿಲ್ಲಿಸಿತು
ನಿಂತವರನ್ನು ಓಡಿಸಿತು
ಚಳಿಯು ಬಂತಲ್ಲ

ಚಳಿಯನು ಗೆಲ್ಲುವ ವೀರನು ಕಾಫಿ
ಕುಡಿಯಲು ಕಾಸಿಲ್ಲ
ಕಾಫಿ – ಕುಡಿಯಲು ಕಾಸಿಲ್ಲ
ಚಳಿಗೆ ಹೆದರಿ ಗಂಡು ಹೆಣ್ಣು
ತಿನ್ನಲುಹೋಗಿ ಪ್ರೀತಿಯ ಹಣ್ಣು
ಮಕ್ಕಳಾದವಲ್ಲ
ಮನೆಮನೆಯಲ್ಲಿ ಊರಿನ ತುಂಬ
ಕುಣಿದು ನಿಂತವಲ್ಲ.

ಗಯ್ಯಾಳಿ ಹೆಂಡತಿ ಕಾಟದಿಂದ
ತಪ್ಪಿಸಿಕೊಂಡ ಸಂತಸದಿಂದ
ಮುಂಜಾನೆಯಲಿ ಗುಮಾಸ್ತನೊಬ್ಬ
ಡ್ಯೂಟಿಗೆ ಹೊರಟಿದ್ದ
ಬಾಗಿಲು ದಾಟಿ ಬಂದದ್ದೇ ತಡ
ಮೂಗಿನ ಮೇಲೆ ಭಾರಿ ಹೊಡೆತ
ಚಳಿಯು ಹಿಡಿದಿತ್ತು
ಹೊಂಚುಹಾಕಿ – ಚಳಿಯು ಹಿಡಿದಿತ್ತು.

ಈ ಪದ್ಯ ಕೇಳಿದ ಅವರು, 'ತುಂಬಾ ಚೆನ್ನಾಗಿದೆ, ಇದನ್ನು ತುಂಬಾ ಚೆನ್ನಾಗಿ ನಾಟಕದಲ್ಲಿ ಬಳಸ್ತೀನಿ' ಅಂತ ಹೇಳಿದ್ರು. ಆದರೆ ಆ ನಾಟಕನ ಅವರು ಬರೆಯೋದಕ್ಕೆ ಆಗಲಿಲ್ಲ. ಪಾಪ, ತೀರಿಕೊಂಡುಬಿಟ್ರು.

ಈಥರ ನಾಟಕಕ್ಕಾಗಿ ಬರೆದ ಹಾಡುಗಳು, ನಿರ್ದೇಶಕರ ಪ್ರೇರಣೆ, ಐಡಿಯಾ, ಅವರ ಪ್ರೋತ್ಸಾಹ ನಂತರ ಅವು ಹಾಡಾಗಿ ವೇದಿಕೆ ಮೇಲೆ ಬಂದಾಗ ಆಗೋ ಸಂತೊಷ ಇದನ್ನೆಲ್ಲ ಮರೆಯೋದಕ್ಕೆ ಆಗೋದಿಲ್ಲ. ರಂಗಭೂಮಿಯಲ್ಲಿ ಏನಪ್ಪ ಅಂದರೆ 'ವಿಸ್ತರಣೆ' – ಒಂದು ಕವಿತೆಗೆ ಹಲವು ರೀತಿಯ ಧ್ವನಿಗಳು ಪ್ರಾಪ್ತವಾಗುವ ಹಾಗೆ ವಿಸ್ತರಣೆ ಮಾಡತಾರೆ. ಮತ್ತು ಈ ಓದುವ ವಲಯ ಅನ್ನೋದು ಒಂದು ಸೀಮಿತವಾದ ಪ್ರಪಂಚವಾದರೆ, ರಂಗಭೂಮಿ ಆ ಸೀಮಿತ ಪ್ರಪಂಚದಿಂದ ಕವಿತೆಯನ್ನು ಎತ್ತಿ ಒಂದು ವಿಸ್ತಾರವಾದ ಕೇಳುಗ–ನೋಡುಗ ವರ್ಗಕ್ಕೆ ಮುಟ್ಟಿಸಿಬಿಡುತ್ತೆ. ಈ ಕೇಳುಗ ಮತ್ತು ನೋಡುಗರೇ ಮುಂದೆ ಓದುಗರೂ ಆಗುವ ಸಾಧ್ಯತೆ ತೆರೆದುಕೊಳ್ಳಬಹುದು. ಇಂತಹ ಪ್ರಯತ್ನಗಳಿಂದ ಕನ್ನಡ ಕೃತಿಗಳನ್ನ ಓದುವವರ ಸಂಖ್ಯೆಯು ಹೆಚ್ಚಾಗಬಹುದು.

ಗಣೇಶ: ನಾಟಕದಲ್ಲಿ ಒಂದು ಪಠ್ಯವನ್ನು ಪ್ರಯೋಗ ಮಾಡಬೇಕಾದರೆ ಪ್ರಧಾನವಾಗಿ ಎರಡು ರೀತಿಯ ವಿಧಾನಗಳು ಹೆಚ್ಚು ಚಾಲತಿಲಿದಾವೆ. ಒಂದನೆಯದು – ಕೃತಿಯನ್ನು ಯಥಾವತ್ತಾಗಿ ಸ್ವೀಕರಿಸಿ ಓದುನಾಟಕದಂತೆ ಮಾಡುವುದು, ಎರಡನೆಯದು – ಸಾಹಿತ್ಯ ಕೃತಿಯನ್ನು ರಂಗರೂಪವಾಗಿ ಮಾರ್ಪಡಿಸಿಕೊಂಡು ನಾಟಕ ಮಾಡುವುದು. ಈ ಎರಡನೇ ಕ್ರಮದಲ್ಲಿ ಮೂಲ ಕೃತಿಯ ಭಾಷೆ ಬದಲಾವಣೆ ಮಾಡುವ ಸಂದರ್ಭ ಹೆಚ್ಚು ಒದಗಿಬರುತ್ತೆ. ಆಗ ಕೃತಿಯ ಆಶಯಗಳಿಗೆ ಧಕ್ಕೆಯಾಗಬಹುದು ಅಂತ ನಿಮಗೆ ಅನಿಸುವುದಿದೆಯೆ?



ಸಿದ್ಧಲಿಂಗಯ್ಯ: ಅಲ್ಲ, ಅದೇನಾಗತದೆ ಅಂದರೆ, ಒಬ್ಬ ಸಮರ್ಥ ರಂಗನಿರ್ದೇಶಕ, ಒಂದು ಕತೆಯನ್ನು ಒಂದು ಕಾದಂಬರಿ ಅಥವಾ ಕಾವ್ಯವನ್ನು ಒಟ್ಟೊ ಒಂದು ಸಾಹಿತ್ಯಕೃತಿಯನ್ನು ರಂಗರೂಪಕ್ಕೆ ತರುವುದಾದರೆ ಆತ ಅಷ್ಟು ಸಮರ್ಥನಾಗಿದ್ದರೆ ಅದು ಅದೃಷ್ಟ; ನಿಜವಾಗಿ ಸಂತೋಷಕರವಾದ ವಿಷಯ. ಆದರೆ ಮೂಲ ಕೃತಿಯ ಆಶಯವನ್ನ, ಕೇಂದ್ರ ಆಶಯವನ್ನ ಗ್ರಹಿಸದೇ ಹೋದಪಕ್ಷದಲ್ಲಿ, ಅಥವಾ ಕೃತಿಯ ಅಕ್ಕ–ಪಕ್ಕ ಮಾತ್ರ ಓಡಾಡಿಕೊಂಡಿದ್ದು ಹಾಗೆ ಅದಕ್ಕೆ ರೂಪಕೊಟ್ಟರೆ ಆವಾಗ ಅದು ಅಸಮರ್ಪಕವಾಗತದೆ. ಮೂಲ ಕೃತಿಗೂ ಧಕ್ಕೆ ಬಂದಹಾಗೆ ಆಗತದೆ. ಮೂಲ ಕೃತಿಯ ಕೇಂದ್ರ ಆಶಯಕ್ಕೆ ಅಥವಾ ಮೂಲಕೃತಿಯ ವಸ್ತುವಿಗೆ ಧಕ್ಕೆ ಬಂದಹಾಗೆ ಆಗತದೆ. ಅಥವಾ ಲೇಖಕನ ಉದ್ದೇಶವೇ ವಿಫಲಗೊಂಡಹಾಗೆ ಆಗತದೆ. ಆದ್ದರಿಂದ ಸಮರ್ಥನಾದ ನಿರ್ದೇಶಕ ಇರಬೇಕು. ಓದುಕೃತಿಯನ್ನು ನಾಟಕ ಮಾಡ್ತೀರಲ್ಲ ಆಗ ಓದುಕೃತಿಗೂ ಅಷ್ಟೆ ಸಮರ್ಥನಾದ ನಿರ್ದೇಶಕ ಬೇಕು. ಓದುಕೃತಿಯನ್ನು ರಂಗದಮೇಲೆ ತರೋದಿದೆಯಲ್ಲ ಅದು ರಂಗರೂಪ ಮಾಡೋದಕ್ಕಿಂತ ಕಷ್ಟದ್ದು. ಆ್ಯಸ್ ಇಟೀಸ್ ತರಬೇಕಲ್ಲ, ಹಾಗೆ ತಂದಾಗಲೂ ಅದು ರಂಗದಮೇಲೆ ಅನೇಕ ಬದಲಾವಣೆಗಳಿಗೆ ಒಳಗಾಗೋದು ಅದರ ಧರ್ಮವಾಗಿರತ್ತೆ. ಪ್ರತಿಯೊಂದು ರಂಗಾಂಶಗಳೊಂದಿಗೂ ಅಲ್ಲೇ ಹೊಂದಾಣಿಕೆ ಸಾಧಿಸಬೇಕಾಗಿರತ್ತೆ. ಅದೇ ರಂಗರೂಪದ ಕೃತಿಯಾದರೆ ಮೊದಲೇ ಸಿದ್ಧತೆ ಮಾಡಿಕೊಳ್ಳೋದಕ್ಕೆ ಅವಕಾಶ ಇರುತ್ತೆ. ಅಲ್ಲಿ ಮೊದಲೇ ಒಂದು ರೂಪಕೊಟ್ಟು ಪ್ರತಿಯೊಂದು ಪಾತ್ರ, ಸಂಭಾಷಣೆಗಳನ್ನು ನೀವು ಖಚಿತ ಮಾಡಿರ್ತೀರಿ. ನಾಟಕದ ಆದಿ–ಮಧ್ಯೆ–ಅಂತ್ಯಗಳು ಇದ್ದಂತೆ ಪಾತ್ರಗಳಿಗೂ ಇರತಾವೆ. ನಟ ಅಲ್ಲಿ ಹೆಚ್ಚಿನ ಪಾತ್ರಗಳನ್ನು ಮಾಡಬೇಕಾದ ಪರಿಸ್ಥಿತಿ ಇರೋದಿಲ್ಲ.

ಗಣೇಶ: ಓದುನಾಟಕದಲ್ಲಿ ಇದೆಲ್ಲವೂ ಕೃತಿಯ ಭಾಗಗಳಲ್ಲೆ ಇದ್ದು ಅದನ್ನು ಬಳಸುವುದೇ ಆದರೂ ಅಲ್ಲಿನ ನಟನಿಗೆ ಒಂದೇ ಪಾತ್ರ ನಿರ್ವಹಿಸೋದು ಮಾತ್ರ ಅವನ ಜವಾಬ್ದಾರಿ ಆಗಿರೋಲ್ಲ. ಅಲ್ಲಿ ಹಲವು ಪಾತ್ರಗಳನ್ನು, ನಿರೂಪಣೆಯ ವಿಧಾನಗಳನ್ನು ಒಟ್ಟೊಟ್ಟಿಗೆ ಅನುಭವಿಸಬೇಕಾಗಿರತ್ತೆ.

ಸಿದ್ಧಲಿಂಗಯ್ಯ: ಆದ್ದರಿಂದಲೇ 'ಓದುನಾಟಕ' ಕಟ್ಟುವುದು ಕಷ್ಟ ಅಂತ ನಾನು ಹೇಳ್ತಾ ಇರೋದು. ಅದನ್ನು ಮಾಡುವ ಕಲಾವಿದ ಬಹಳ ಸೂಕ್ಷ್ಮಜ್ಞನಾಗಿರಬೇಕು. ಆ ರೀತಿಯ ಕೆಲಸಾನ ನೀವು ಮಾಡಿದ್ದೀರಿ, ಅಂಕೂರ್ ಮಾಡಿದ್ದಾರೆ. ಅವರು ಸಂಸ್ಕಾರ ಮಾಡಿದರು. ಆದರೆ ಒಂದು ಸಾಹಿತ್ಯಕೃತಿಯನ್ನು ರಂಗದಮೇಲೆ ನಿಮ್ಮಷ್ಟು ಯಶಸ್ವಿಯಾಗಿ ಕಟ್ಟಿದವರನ್ನು ನಾನು ನೋಡಿರೋದು ಅಪರೂಪ ಅಂತ ಅನ್ನಿಸುತ್ತೆ.

ಗಣೇಶ: ಕರ್ನಾಟಕದ ರಂಗನಿರ್ದೇಶಕರುಗಳಲ್ಲಿ ಹಳಬರಿಂದ ಹೊಸಬರವರೆಗೂ ಈ ರೀತಿಯ ಪದ್ಧತಿಗಳು ಮೈಗೂಡಿಕೊಂಡಿವೆ. ನೀನಾಸಮ್ ರಂಗಶಿಕ್ಷಣ ಕೇಂದ್ರ, ತಿರುಗಾಟ ಮತ್ತು ಹೊರಗಡೆ ರಂಗಾಯಣದಲ್ಲಿ ಅನೇಕರು ಇಂತಹ ಪ್ರಯತ್ನಗಳನ್ನು ಮಾಡಿದ್ದಾರೆ. ನನಗೆ ಪ್ರೇರೇಪಣೆ ಕೊಟ್ಟಿದ್ದು ನಮ್ಮ ಮೇಷ್ಟ್ರುಗಳು. ಕೆ.ವಿ.ಅಕ್ಷರ, ಕೆ.ಜಿ.ಮಹಾಬಲೇಶ್ವರ,

ಪ್ರಸನ್ನ, ವೆಂಕಟರಮಣ ಐತಾಳರು ಮಾಡಿದ ಅನೇಕ ಪ್ರಯತ್ನಗಳಿಂದ ನಾವು ಅನೇಕರು ಇನ್ನು ಏನು ಮಾಡಬಹುದು ಅಂತ ಯೋಚಿಸೋ ಹಾಗೆ ಆಯ್ತು. ಆಮೇಲೆ ನಮ್ಮ ಅಮ್ಮ ತುಂಬಾ ಚನ್ನಾಗಿ ಕಥೆ ಹೇಳ್ತಾ ಇದ್ದರು.

ಸಿದ್ಧಲಿಂಗಯ್ಯ: ಇರಬಹುದು, ಯಾರೇ ಆಗಲಿ ರಂಗರೂಪ ಮಾಡಿದಾಗ ಮೂಲ ಲೇಖಕನಷ್ಟೆ ಸಮರ್ಥವಾಗಿ ಒಂದು ಕೃತಿಯನ್ನು ಕಟ್ಟಬೇಕಾಗುತ್ತೆ. ಓದು ಕೃತಿಯನ್ನು ನಾಟಕ ಮಾಡುವ ಕಲಾವಿದ ಇನ್ನೂ ಸಮರ್ಥನಿರಬೇಕಾಗತ್ತೆ. ಯಾಕೆಂದರೆ ಕೃತಿಯ ಜೀವಾಳ ಅಥವಾ ಕೃತಿಯ ಕೇಂದ್ರದಲ್ಲಿರುವ 'ಜೀವಾಳ' ಹಿಡೀಬೇಕಾಗಿರತ್ತೆ. ಅಂತಹ ಶಕ್ತಿ ಇರುವ ನಿರ್ದೇಶಕ ಬೇಕಾಗಿರುತ್ತೆ.

ಗಣೇಶ: ಒಬ್ಬ ಕವಿಯಾಗಿ ಕೃತಿ ರಚನೆಯ ಹಿಂದಿನ ನಿಮ್ಮ ಕಲ್ಪನೆಗಳು ಹ್ಯಾಗಿರ್ತಾವೆ?

ಸಿದ್ಧಲಿಂಗಯ್ಯ: ನಾವು ಎಷ್ಟೋ ನೋಡ್ತೀವಿ, ಸಮಾಜವನ್ನು ನೋಡ್ತೀವಿ, ನಮಗೆ ಎಷ್ಟೋ ಅನುಭವಕ್ಕೆ ಬಂದಿರುತ್ತೆ, ಭಾವನೆಗಳು ಇರುತ್ತೆ, ಎಲ್ಲರಿಗೂ ಇರೋ ರೀತಿ ಕವಿಗಳಿಗೂ ಭಾವನೆಗಳಿರತಾವೆ. ಆದರೆ ಕವಿಗಳು ಈ ಭಾವನೆಗಳಿಗೆ ಅಕ್ಷರ ರೂಪ ಕೊಡೋ ಕೆಲಸ ಮಾಡ್ತಾರೆ. ಕವಿತೆಯ ರೂಪ ಕೊಡೋದು, ಕತೆಗಾರ ಆದರೆ ಕತೆಯ ರೂಪ ಕೊಡ್ತಾನೆ, ಕಾದಂಬರಿಕಾರ ಆದರೆ ಕಾದಂಬರಿ ಬರೀತಾನೆ. ಸೃಜನಶೀಲತೆ ಇರತದಲ್ಲ, ಆ ಸೃಜನಶೀಲತೆಯ ಮನಸ್ಸು ಎಲ್ಲರೂ ಅನುಭವಿಸಿದಹಾಗೆ ಅನುಭವಿಸಿಕೊಂಡು ಸುಮ್ಮನೆ ಇರಲ್ಲ. ಅದಕ್ಕೇನೋ ಒಂದು ರೂಪ ಕೊಟ್ಟು ಅಕ್ಷರ ರೂಪಕ್ಕೆ ತರಬೇಕು ಅಂತ ಎಳಸ್ತಾ ಇರತದೆ ಮನಸ್ಸು. ಯಾವಾಗ ಯಾವುದಕ್ಕೆ ತೀವ್ರವಾದ ಕಾಡುವಿಕೆ, ಒಂದು ವಸ್ತುವಿನ ತಟ್ಟುವಿಕೆ, ಒಂದು ಡಿಸ್ಟರ್ಬೆನ್ಸ್ ಅಂತ ಆಗತದೆ ಆಗ ಕವಿಯಾದವನು ಆ ವಸ್ತುವನ್ನು ಬರಹ ರೂಪಕ್ಕೆ ತರತಾನೆ. ಈಗ ನನಗೆ ಯಾವುದೋ ಭಾವನೆ, ಒಂದು ವಿಷಯ ತಿಂಗಳಿಂದ ಕಾಡತಾ ಇದೆ. ಆದರೆ ಅದನ್ನು ಬರಹ ರೂಪಕ್ಕೆ ತರೋದಕ್ಕೆ ಆಗ್ತಾನೇ ಇಲ್ಲ. ತರಬೇಕು ಅನ್ನೋ ಮನಸ್ಸಿದೆ. ಒತ್ತಡ ಇದೆ. ಆದರೆ ತರೋದಕ್ಕೆ ಆಗತಾ ಇಲ್ಲ. ಆಗ ಅದಕ್ಕೆ ಒಂದು ಸೂಕ್ತವಾದ ಸಮಯ, ಒಂದು ಏಕಾಂತ, ವಾತಾವರಣ ಒಂದು ಧ್ಯಾನಸ್ಥ ಮನಸ್ಥಿತಿ ಬೇಕು. ಒಬ್ಬ ಕವಿಯಾದವನಿಗೆ ಅದು ಒದಗಿಬಂದಾಗ ಮತ್ತು ಅದರ ಒತ್ತಡ ತೀವ್ರವಾದಾಗ ಅದು ಅನುಭವವಾಗಿ ಬಂದುಬಿಡತ್ತೆ. ಕವಿಯಾದವನಿಗೆ ಧ್ಯಾನ ಮತ್ತು ಏಕಾಂತ ಎರಡೂ ಸಹ ಮುಖ್ಯವಾಗತವೆ. ನಾನು ಒಂದುಸಲ ಬುದ್ಧಿಸ್ಟ್ ಮೆಡಿಟೇಷನ್‌ಗೆ ಹೋದೆ. ನಾನು ಒಂದು ಆರು ತಿಂಗಳು ವರ್ಷದಿಂದ ಕವಿತೆ ಬರೆದವನೇ ಅಲ್ಲ. ಆದರೆ ಆ ವಿಪಸ್ಸನ ಮೆಡಿಟೇಷನ್‌ನಲ್ಲಿ ಹತ್ತುದಿನ ಸೈಲೆಂಟಾಗಿ ಇರಬೇಕಲ್ಲ, ಅಲ್ಲಿ ಹೇಗಪ್ಪ ಅಂದರೆ ಧ್ಯಾನ ಮಾಡೋದು, ಊಟ ಮಾಡೋದು, ಭಾಷಣ ಕೇಳೋದು. ಬೆಳಗ್ಗೆ ಐದು ಗಂಟೆಯಿಂದ ರಾತ್ರಿ ಹತ್ತು ಗಂಟೆವರೆಗೆ ಪೂರ್ತಿ ಮೌನವಾಗೇ ಇರಬೇಕಾಗಿತ್ತು. ಮಾತೇ ಇಲ್ಲ. ಆವಾಗೇನಾಯ್ತು, ಇಡೀ ಮೌನವೇ ಮಡುಗಟ್ಟಿದಂತಾಗಿ ನನ್ನ



ಒಳಗಿನ ಅನುಭವಗಳು ತೆರೆದುಕೊಳ್ಳೋದಕ್ಕೆ ಶುರುವಾಯ್ತು. ನಾನು ನಾಲ್ಕಾರು ಪದ್ಯಗಳನ್ನು ಬರೆದುಬಿಟ್ಟೆ. ಆ ಒತ್ತಡದಲ್ಲಿ ಹಂಗಾಯ್ತು. ಆದ್ದರಿಂದ ಒಬ್ಬ ಕವಿಯಾದವನು ಅವನ ಲೋಕದಲ್ಲಿ ಇದ್ದಾಗ ಇದು ಸಾಧ್ಯ. ಅದಕ್ಕೆ ಅವನಿಗೆ ಏಕಾಂತ ಬೇಕು. ಆದರೂ ಒಂದು ಪ್ರಶ್ನೆ ಇದೆ. ಏನೆಂದರೆ, ಗುಂಪಿನಲ್ಲಿದ್ದು ಬರೆಯೋದಕ್ಕೆ ಆಗೋದಿಲ್ವಾ? ಆಗಲೂ ಸಾಧ್ಯ ಇದೆ. ಗುಂಪಿನಲ್ಲಿ ಇದ್ದೂ ಇಲ್ಲದಂಗಿದ್ದರೆ ಆಗಲೂ ಬರೆಯೋದಕ್ಕೆ ಸಾಧ್ಯ. ಪೂರ್ತಿ ಗುಂಪಲ್ಲೆ ಮುಳುಗಿಹೋಗಿ ಬಿಟ್ಟರೆ ಆವಾಗ ಬರೆಯೋದು ಕಷ್ಟವೆ. ಆ ಖಚಿತತೆ, ಆ ಭಾವನೆಗಳ ಸಾಧ್ಯತೆ ಬರೋದು ಕಷ್ಟ. ಆದ್ದರಿಂದ ಗುಂಪಿನಲ್ಲಿದ್ದರೂ ಬರೀಬಲ್ಲ ಒಬ್ಬ ಕವಿ, ಅವನ ಸ್ವಭಾವ ಹಾಗೆ ಇದ್ದೂ ಇಲ್ಲದಂತೆ ಇರೋದಾದರೆ ಬರೀಬಹುದು. ಸಂತೇಲೂ ಕೆಲವರು ನಿದ್ದೆ ಹೊಡೆಯೋದಿಲ್ಲವೇ? ಹಂಗೆ ಸಂತೇಲಿದ್ದು ಕವಿತೆ ಬರೀಬಹುದು. ಆಗ ಆತ ಆ ಸಂತೆಯಲ್ಲಿ ಕಾಣಿಸಿಕೊಳ್ತಾ ಇರತಾನೆ, ಆದರೆ ಅಲ್ಲಿ ಇರೋದಿಲ್ಲ.

ಗಣೇಶ: ಅಂದ್ರೆ ಬಹಿರಂಗದೊಳಗಿದ್ದೂ ಅಂತರಂಗದೊಳಗೆ ಏಕಾಕಿಯಾಗಿರೋದಲ್ವಾ?

ಸಿದ್ಧಲಿಂಗಯ್ಯ: ಹೌದು. ಹಾಗಿದ್ದಾಗ ಅದು ಸಾಧ್ಯ ಆಗತ್ತೆ. ಮತ್ತೆ ನಾನು ತುಂಬಾ ಏಕಾಂತವನ್ನು ಇಷ್ಟಪಡ್ತೀನಿ. ನಾನು ಎಲ್ಲಿಗಾದರೂ ಹೋಗತಾ ಇದ್ದಾಗ ಕಾಡು ಸಿಕ್ಕಿದರೆ ಒಬ್ಬನೇ ನಡೆದುಕೊಂಡು ಕಾಡಿನೊಳಕ್ಕೆ ಹೋಗುವ ರೂಢಿಯಿದೆ. ಅದು ನನಗೆ ತುಂಬಾ ಇಷ್ಟ. ಮತ್ತೆ ನದಿ ತೀರದಲ್ಲಿ ಗಂಟೆಗಟ್ಟಲೆ ನೀರಿನಲ್ಲಿ ಕಾಲು ಇಟ್ಟುಕೊಂಡು ಕೂರೋದು, ಹೊಳೆ ಮಧ್ಯದಲ್ಲಿ ಕಲ್ಲುಬಂಡೆ ಇದ್ದರೆ ಅದರ ಮೇಲೆ ಹೋಗಿ ಕೂತುಬಿಡೋದು. ಜಲಪಾತಗಳನ್ನು ನೋಡತಾ ಕೂರೋದು. ಮತ್ತೆ ಸಮುದ್ರದ ಹತ್ತರ ತುಂಬಾ ಹೊತ್ತು ಕಳೀತೀನಿ ನಾನು. ಸಮುದ್ರ ತೀರದಲ್ಲಿ ಸುಮ್ಮನೆ ನಡೆದುಕೊಂಡು ಹೋಗೋದು ಮಾಡ್ತಿರ್ತೀನಿ. ಹೀಗೆ ಮಾಡೋವಾಗ ಆ ಸಮುದ್ರ, ಜಲಪಾತ, ನದಿ ಅವುಗಳ ಮುಂದೆ ಒಂದು ವಿನಯ ಬರುತ್ತೆ. ನಿತ್ಯ ಜೀವನದಲ್ಲಿ ಇಲ್ಲದೆ ಇರೋ ವಿನಯ ಆವಾಗ ಬರುತ್ತೆ. ಈ ಸಮುದ್ರ ನೋಡಿದಾಗ ಅನ್ಸುತ್ತೆ, ನಾವು ಎಷ್ಟು ಸಣ್ಣವರು, ಈ ಸಮುದ್ರದ ಮುಂದೆ ಒಂದು ಹನಿನೂ ಅಲ್ವಲ್ಲ! ಕಾಡಿನಲ್ಲೂ ಅಷ್ಟೆ. ಈ ದೊಡ್ಡದೊಡ್ಡ ಮರಗಳ ಮುಂದೆ ನಿಂತಾಗ, ಈ ಅಗಾಧವಾದ ಎತ್ತರವಾದ ಬೆಟ್ಟಗಳನ್ನು ನೋಡಿದಾಗ ಹೀಗೆ ಅನಿಸುತ್ತೆ, ನಾನು ಏನೂ ಅಲ್ಲ ಅದರ ಮುಂದೆ. ನಾವೆಲ್ಲ ಕ್ಷುಲ್ಲಕ, ಕ್ಷುದ್ರರು ಅಂತ ಅನ್ನಿಸುತ್ತೆ. ಸುಮ್ಮನೆ ಏನೋ ಶೋ ಮಾಡಿಕೊಂಡು ಓಡಾಡ್ತಿರ್ತೀವಿ ಅಷ್ಟೆ. ಈ ಬೆಟ್ಟದ ನಿಶ್ಚಲತೆ ನಮಗೆ ಇಲ್ವಲ್ಲ! ನಾವು ಚಂಚಲ, ಅದು ನಿಶ್ಚಲವಾಗಿದೆ. ಅಷ್ಟೇ ಅಚಲವಾಗಿ ನಿಂತಿದೆ. ಈ ಥರ ಈ ಬೆಟ್ಟ, ಗುಡ್ಡ, ಕಾಡು, ನದಿಗಳು ನನಗೆ ಚಿಕ್ಕಂದಿನಿಂದಲೂ ಆಕರ್ಷಣೆ. ಈಗಲೂ ನಾನು ಆ ಪ್ರಯತ್ನಗಳನ್ನು ಕಳ್ಕೊಂಡಿಲ್ಲ. ಒಂದು ಗವಿ ಸಿಕ್ಕಿ ಬಿಟ್ಟರೆ ಧ್ಯಾನ ಮಾಡ್ತೀನಿ. ಈ ತುಮಕೂರು ಜಿಲ್ಲೆಯಲ್ಲಿ ಸಿದ್ಧರ ಬೆಟ್ಟ ಇದೆಯಲ್ಲ ಅಲ್ಲಿಗೆ ಹೋಗಿ ನಾನು ಧ್ಯಾನ ಮಾಡತಾ ಇದ್ದೆ. ಇನ್ನೊಂದು ಗವೀಲಿ

ಒಬ್ಬ ಋಷಿ ಧ್ಯಾನ ಮಾಡತಾ ಇದ್ದ. ಒಂದು ದಿನ ನಾನು ಧ್ಯಾನ ಮುಗಿಸೋವರೆಗೂ ಕಾಯತಾ ಇದ್ದ. ಆಮೇಲೆ ಬಂದು, ಬನ್ನಿ, ಅಂತ ಅವನ ಗವಿ ಒಳಗಡೆ ಕರೆದ. ನಾನು ಹೋದೆ. ಅವನು ಹೇಳಿದ, 'ಇಲ್ಲಿ ಬರೋರೆಲ್ಲ ಇಸ್ಪೀಟು ಆಡೋರು, ಡ್ರಿಂಕ್ಸ್ ಮಾಡೋರು, ಇಲ್ಲದ ತರಲೆ ಮಾಡೋರು. ಈ ಥರ ಧ್ಯಾನ ಮಾಡೋಕೆ ಯಾರೂ ಬರಲ್ಲ. ನೀವು ಧ್ಯಾನ ಮಾಡತಾ ಇದ್ದುದನ್ನು ನೋಡಿ ಸಂತೋಷ ಆಗಿಬಿಡ್ತು. ಪ್ರಾಣಾಯಾಮ ಎಲ್ಲಾ ಮಾಡಿದಿರಿ. ನಾನು ನೋಡಿದೆ' ಅಂತ ಅವನು ಹೇಳಿದ. ಅದೇ ಆ ತರಹದ ಒಂಟಿತನ ಏಕಾಕಿತನ ಬೇಕು ಅಂದರೆ, ಅದು ಯಾವಾಗ ಬೇಕು ಅಂದರೆ, ಬರವಣಿಗೆಗೆ ಅನುಕೂಲ ಆಗೋ ಟೈಮಲ್ಲಿ ಬೇಕು. ಮತ್ತೆ ಯಾವಾಗಲೂ ಒಂಟಿತನದಿಂದಲೇ ಇರೋದು ಅಲ್ಲ, ಸಮಾಜದ ಜೊತೆಗೆ ಒಂದು ಇನ್‌ವಾಲ್ವ್‌ಮೆಂಟ್ ಬೇಕು. ಯಾವುದೊ ಒಂದು ಜಗಳದಲ್ಲಿ ಇವನು ಸೇರಕೊಂಡಿರಬೇಕು ಅಥವಾ ದೂರದಿಂದ ನೋಡತಾ ಇರಬೇಕು. ಜಗಳ ಆಡಬೇಕು ಅಂತಲ್ಲ, ಬಿಡಿಸೋದು, ನೋಡೋದು ಮಾಡತಾ ಇದ್ದರೆ ಇವನಿಗೆ ಅನೇಕ ವಿಷಯಗಳು ಗೊತ್ತಾಗತವೆ. ಮನುಷ್ಯನ ಭಾವನೆಗಳು ಸ್ವಭಾವಗಳು ಗೊತ್ತಾಗತವೆ. ಆಮೇಲೆ ಸುಂದರವಾದ್ದು ಅಥವಾ ಟ್ರಾಜಿಡಿಯಾದ್ದು, ಅದನ್ನೆಲ್ಲ ಒಳಕ್ಕೆ ತಗೋಬೇಕು. ಏನೋ ಒಂದು ದುರಂತ ಆಗೋಯ್ತು, ಸಾಮಾಜಿಕವಾದ ಶೋಷಣೆ, ಒಬ್ಬರಿಗೆ ಏನೋ ನೋವಾಯಿತು ಅದನ್ನ ತನ್ನ ನೋವು ಅಂತ ಭಾವಿಸಿಕೊಂಡವನು ಅವನು ಒಳ್ಳೆಯ ಲೇಖಕ ಅಥವಾ ಕವಿಯಾಗೋದಕ್ಕೆ ಆಗುತ್ತೆ. ನಾನು ಆ ಪ್ರಯತ್ನ ಮಾಡತಾ ಇರ್ತೀನಿ. ಆ ಮೂಲಕ ಸಮಕಾಲೀನ ಸಂದರ್ಭದ ಜೊತೆಗೆ ನಾನು ಮಾತಿಗೆ ತೊಡಗ್ತೀನಿ ಮತ್ತು ಸದ್ಯದ ಸಂದರ್ಭದ ಬರವಣಿಗೆಯ ಕುರಿತಾದ, ಭಾಷೆಯ ಕುರಿತಾದ ಎಚ್ಚರವು ಸಹ ಮುಖ್ಯ ಆಗಿರುತ್ತೆ. ಏಕೆಂದರೆ ಅಪ್‌ಡೇಟ್ ಆಗೋದು ಸಹ ಇರುತ್ತೆ. ಈಗ ನಾವು ಉಪನಿಷತ್ತು, ಬುದ್ಧಿಸಂಗಳನ್ನು ಓದಿಕೊಂಡು ಮನನಮಾಡಿದಹಾಗೆ ಶ್ರೀರಾಮ್‌ಪುರದಲ್ಲಿ ಯಾವನಿಗೊ ಒಬ್ಬನಿಗೆ ಚಾಕು ಹಾಕಿದ್ದು ಯಾಕೆ ಅಂತನೂ ಯೋಚನೆ ಮಾಡಬೇಕು. ಆಗ ನಿಜವಾದ ನಿತ್ಯಜೀವನಕ್ಕೆ ಸಂಪರ್ಕ ನಮಗೆ ಸಿಗೋದು. ಕವಿ ವಾಸ್ತವದಲ್ಲಿ ಬೇರು ಬಿಟ್ಟಿರಬೇಕು.

ಗಣೇಶ: ಕೃತಿ ರಚನೆಯ ಹಿಂದಿನ ಕಲ್ಪನೆಗೂ ಇವತ್ತು ನೀವು ನೋಡತಾ ಇರುವ ಅದೇ ಕೃತಿಯ ರಂಗಪ್ರಯೋಗದ ಸಾಧ್ಯತೆಗೂ ನಡುವೆ ತೊಡಕು ಅಥವಾ ಬೆಸುಗೆ ಉಂಟಾಗಿದ್ದನ್ನು ಹೇಗೆ ಗಮನಿಸ್ತೀರಿ?

ಸಿದ್ಧಲಿಂಗಯ್ಯ: ಮೊದಲನೆಯದಾಗಿ ನಾನು ಈ ರಂಗಭೂಮಿಯ ಬಗ್ಗೆ ಆಗಲಿ ಅದರ ನಿರ್ದೇಶನದ ಬಗ್ಗೆ ಆಗಲಿ ಹೆಚ್ಚು ತಿಳಿದವನಲ್ಲ, ಅಥವಾ ಅದರಲ್ಲಿ ಕೆಲಸ ಮಾಡಿರೋ ತಂತ್ರಜ್ಞನೂ ಅಲ್ಲ. ನಾನು ನಾಟಕಗಳಿಗೆ ಹಾಡು ಬರೆದುಕೊಟ್ಟಿದ್ದೀನಿ ಮತ್ತು ನಾಟಕಗಳನ್ನ ಬರೆದಿದ್ದೀನಿ ಅಷ್ಟೇ. ಆದರೆ ನಮ್ಮ ಕುತೂಹಲಕ್ಕೂ ಒಂದು ಮಿತಿ ಇತ್ತು. ನಮ್ಮ ಹಾಡುಗಳ ಪ್ರಾಕ್ಟೀಸ್ ಯಾವಾಗ



ಮಾಡ್ತಾರೋ ಆವಾಗ ಹೋಗಿ ನೋಡೋದು ಇತ್ತು. ಮತ್ತೆ ನಾಟಕ ನೋಡೋವಾಗ ನಮ್ಮ ಹಾಡನ್ನ ನಾಟಕಕ್ಕೆ ಹೇಗೆ ಲಿಂಕ್ ಮಾಡಿದಾರೆ, ಅದನ್ನ ನೋಡತಾ ಇದ್ದೆ. ಹಾಗಾಗಿ ಈ ರಂಗನಿರ್ದೇಶನದ ಬಗ್ಗೆ ನನ್ನ ಜ್ಞಾನ ಸೀಮಿತವಾದದ್ದು. ಆದರೆ ನಾನು ಬರೆಯೋವಾಗ ಇರೋದು ಒಂದು ಸೀಮಿತವಾದ ಉದ್ದೇಶವಾಗಿರತ್ತೆ. ಈಗ 'ಊರು-ಕೇರಿ' ಬರೆಯೋವಾಗ ನನ್ನ ಉದ್ದೇಶ ಏನಾಗಿತ್ತಪ್ಪ ಅಂದರೆ ನನಗೆ ಹೇಳೋದಕ್ಕೆ ಏನೋ ಒಂದಷ್ಟು ವಿಷಯ ಇದೆ, ಅದನ್ನ ಬರವಣಿಗೆಗೆ ತರಬೇಕು, ಆ ಘಟನೆಗಳು ಕ್ರಮೇಣ ಮರೆತು ಹೋಗಿಬಿಡಬಹುದು ಅಂತ. ನಾನೇನು ಯಾವತ್ತೂ ಡೈರಿ ಬರೆದವನಲ್ಲ. ನಾನು ಯಾವುದೋ ಒಂದು ಕ್ರಿಶ್ಚಿಯನ್ ಆಶ್ರಮಕ್ಕೆ ಸೇರಿಕೊಂಡಿದ್ದೆ. ಅಲ್ಲೆ ಕೂತು ಒಂದಷ್ಟು ಬರೆದುಬಿಟ್ಟೆ. ನಂತರ ವಿವೇಕಾನಂದ ಆಶ್ರಮಕ್ಕೆ ಸೇರಿಕೊಂಡೆ ಅಲ್ಲಿ ಒಂದಷ್ಟು ಬರೆದೆ. ಅಲ್ಲಿ ಅಂತಹ ಒಂದು ವಾತಾವರಣ ಇದ್ದಿದ್ದರಿಂದ ಬರೆದೆ. ಇದಕ್ಕೆ ಮಹತ್ವ ಇದೆ ಅಂತ ಮೊದಲು ಗುರುತಿಸಿದ್ದು ಡಿ.ಆರ್.ನಾಗರಾಜ್. ಅವರು 'ನಾನಿದಕ್ಕೆ ಮುನ್ನುಡಿ ಬರೀಬೇಕು ಇದನ್ನ ಪ್ರಕಟ ಮಾಡಬೇಕು' ಅಂದರು. ಪ್ರಕಟಿಸೋದಕ್ಕೆ ಇಬ್ಬರು ಮೂವರಲ್ಲಿ ಸ್ಪರ್ಧೆ ಏರ್ಪಟ್ಟುಬಿಟ್ಟಿತು. ಪುಸ್ತಕ ಪ್ರಾಧಿಕಾರದಲ್ಲಿದ್ದ ನೆಲಮನೆ ದೇವೇಗೌಡ್ರು ಸ್ಕ್ರಿಪ್ಟೇ ಈಸಕೊಂಡು ಹೋಗಿಬಿಟ್ಟರು. ಆದರೆ ಡಿ.ಆರ್. 'ಇಲ್ಲ ಇಲ್ಲ ನಾನೇ ಪ್ರಕಟಿಸಬೇಕು – ಅಕ್ಷರಚಿಂತನ ಮಾಲೆಯಲ್ಲಿ, ಕೊಡದೇ ಇದ್ದರೆ ನಿಮ್ಮ ಜೊತೆ ಮಾತಾಡಲ್ಲ ನಾನು' ಅಂತ ರೇಗಿಬಿಟ್ಟರು. ನಾನು ಇದೇನಪ್ಪ ಹಿಂಗಾಗೋಯ್ತು, ಡಿ.ಆರ್. ಮತ್ತೆ ನಾನು ತುಂಬ ವರ್ಷದ ಸ್ನೇಹಿತರು ಅಂತಂದುಬಿಟ್ಟು ನೆಲಮನೆ ದೇವೇಗೌಡ್ರು ಹತ್ತರ ಹೋಗಿ ಸ್ಕ್ರಿಪ್ಟ್ ತಗೊಂಡು ಬಂದುಬಿಟ್ಟೆ. ನಂತರ ಡಿ.ಆರ್.ನಾಗರಾಜ್ ಅದನ್ನ ಅಕ್ಷರಚಿಂತನ ಮಾಲೆಯಲ್ಲಿ ಪ್ರಕಟಿಸಿದರು. ಆಗ ಕೆ.ವಿ.ಸುಬ್ಬಣ್ಣ ಇದ್ದರು. ಡಿ.ಆರ್. 'ಊರು-ಕೇರಿ' ಪುಸ್ತಕಕ್ಕೆ ಒಳ್ಳೇದೊಂದು ಹಿನ್ನುಡಿ ಬರೆದರು. ಅದರ ಬಗ್ಗೆ ಜನ ಈಗಲೂ ಹೇಳ್ತಾರೆ, ಆ ಪುಸ್ತಕದಷ್ಟೇ ವ್ಯಾಲ್ಯೂ ಆ ಹಿನ್ನುಡಿಗಿದೆ ಅಂತ. 'ಬಡವರ ನಗುವಿನ ಶಕ್ತಿ' ಅಂತ ಅದಕ್ಕೆ ಹೆಸರಿಟ್ಟರು. ನನಗೆ ಈ ಊರು-ಕೇರಿ ಬರೆದಾಗ ಅಂಥ ಮಹತ್ವಾಕಾಂಕ್ಷೆ ಏನೂ ಇರಲಿಲ್ಲ. ಆದರೆ ಆ ಪುಸ್ತಕ ಬಂದಮೇಲೆ ಕೆಲವರು ಇಷ್ಟಪಟ್ಟರು, ಕೆಲವರು ಇಷ್ಟಪಡಲಿಲ್ಲ. ಅದರಲ್ಲಿ ಜಾಸ್ತಿ ಜನ ಇಷ್ಟಪಟ್ಟವರಿದ್ದರು. ಇನ್ನು ಕೆಲವರು ಇವನಿಗೆ ಸೀರಿಯಸ್‌ನೆಸ್ ಇಲ್ಲ ಅಂತ ಆ ತರನೂ ಹೇಳಿದವರು ಇದ್ದರು. ಬಹುಶಃ ನನ್ನಿಂದ ಬಹಳ ಆಕ್ರೋಶಭರಿತವಾದ, ದ್ವೇಷಪೂರಿತವಾದ ವಾಕ್ಯಗಳು, ಈ ಸವರ್ಣೀಯರ ಬಗ್ಗೆ ಕ್ರೋಧ, ಇಂಥವನ್ನೆಲ್ಲ ಕೆಲವರು ನಿರೀಕ್ಷಿಸಿದ್ದರು. ಆದರೆ ಈ ಬರವಣಿಗೆಯಿಂದ ಅವರಿಗೆಲ್ಲ ಬೇಜಾರು ಆಗಿಬಿಡತು. ಇದೇನು ಹಿಂಗೆ ಬರೆದಿದಾನೆ, ಇವನ ಕಷ್ಟ ನೋಡಿದರೆ ನಗು ಬರೋತರ ಆಗುತ್ತೆ ಅಂತ ಕೆಲವರು ಬೇಜಾರಾದರು. ಆಮೇಲೆ ಊರು-ಕೇರಿ ಕೃತಿ ಹಿಂದಿ, ತಮಿಳು, ಮಲೆಯಾಳಂ ಭಾಷೆಗಳಿಗೆ ಅನುವಾದ

ಆಗಿ ಚೆನ್ನಾಗಿ ಪ್ರಚಾರನೂ ಆಯಿತು. ಆದರೆ ಇದು ರಂಗದ ಮೇಲೆ ಬಂದಾಗ ನೀವೇನು ಓದುಕೃತಿ ಅಂತ ಹೇಳಿದಿರಿ, ಇದಕ್ಕೆ ಸಿಕ್ಕಿದ ಡೈಮನ್‌ಷನ್ನೆ ಬೇರೆ. ಇದಕ್ಕೆ ಎಂಥ ಆಯಾಮ ಸಿಕ್ಕಿಬಿಡ್ತು ಅಂದ್ರೆ ಇದು ಸಾಧ್ಯವೆ ಅಂತ ನಾನು ಕಲ್ಪಿಸಿಕೊಂಡೇ ಇರಲಿಲ್ಲ. ಊರು–ಕೇರಿ ಕೃತಿಯನ್ನ ನೀನಾಸವ್‌ನಲ್ಲಿ ಉಪಾಧ್ಯಾಯರಾಗಿರುವ ಗಣೇಶ್, ಹೆಗ್ಗೋಡವರು ಈತರ ತರ್ತಾರ ಅಂತ ನಾನು ಕಲ್ಪಿಸಿಕೊಂಡೇ ಇರಲಿಲ್ಲ. ಅನೇಕರು ಕಲ್ಪಿಸಿಕೊಂಡಿರಲಿಲ್ಲ ಅನ್ನಬಹುದು. ನೋಡಿದವರು ಬೆರಗಾಗಿ ಆಶ್ಚರ್ಯಪಟ್ಟು ನಿಜವಾಗಿ ಇದೊಂದು ಅರ್ಥಪೂರ್ಣವಾದ ಕೆಲಸ ಅಂತ ಮಾತಾಡ್ತಾರೆ. ನನಗೆ ಸಿಕ್ಕಾಪಟ್ಟೆ ಆಶ್ಚರ್ಯ, ನನಗೆ ಮಹತ್ವಾಕಾಂಕ್ಷೆ ಏನೂ ಇರಲಿಲ್ಲ. ಇನ್‌ಫ್ಯಾಕ್ಟ್, ನಾನು ಪದ್ಯಗಳನ್ನ ಬರೆದಿದ್ದು ಕೂಡ ಅಲ್ಲಲ್ಲೆ ಬರೆದುಕೊಡತಾ ಇದ್ದೆನೇ ಹೊರತು ಅವುಗಳನ್ನ ಸಂಗ್ರಹಿಸಿ ಇಡತಾ ಇರಲಿಲ್ಲ. ಯಾರಾದರೂ ಹಾಡಿದಾಗ ಇದು ನಾನೇ ಬರೆದಿದ್ದು ಇದನ್ನು ಸ್ವಲ್ಪ ಬರೆದುಕೊಡಿ ಅಂತ ಬರೆಸಿಕೊಂಡು ಬಂದಿದ್ದೀನಿ. ಅಂದರೆ ಕವಿತೆಗಳ ಬಗ್ಗೆನೂ ನನಗೆ ಅಂತಹ ಆಕಾಂಕ್ಷೆ ಏನೂ ಇರಲಿಲ್ಲ. ಸುಮ್ಮನೆ ಮನಸ್ಸಲ್ಲಿ ಇದ್ದಿದ್ದನ್ನ ತೋಡಿಕೊಳ್ಳೋದಕ್ಕೆ ಕವಿತೆ ಬರೆದಿದ್ದು. ಈ ಊರು–ಕೇರಿನೂ ಅದೇ ತರ ಬರೆದಿದ್ದು.

ಗಣೇಶ: ನಿಮ್ಮ ಊರು–ಕೇರಿ ಕೃತಿಯನ್ನು ನಾನು ರಂಗಪ್ರಯೋಗವಾಗಿ ಕಟ್ಟಿದಾಗ ನಾನು ಸ್ವಲ್ಪ ಸ್ವಾತಂತ್ರ್ಯ ತಗೊಂಡು ಕೆಲವು ವಿಷಯಗಳನ್ನ ಸಂದರ್ಭೋಚಿತವಾಗಿ ಸೇರಿಸಿದ್ದೆ. ನಿಮ್ಮ ದೊಡ್ಡಪ್ಪ ನಿಮ್ಮನ್ನ ಹೆಗಲ ಮೇಲೆ ಕೂರಿಸಿಕೊಂಡು ಹೆಂಡದ ಗಂಡಂಗಿಗೆ ಕರಕೊಂಡು ಹೋದ ಸೀನ್‌ನಲ್ಲಿ ದೊಡ್ಡ ಬಾಡು ತಿನ್ನಬೇಕು ಅದು ತಂಪು, ಫಾರಮ್‌ಕೋಳಿ ತಿನ್ನಬಾರದು ಅದು ಉಷ್ಣ ಅಂತ ಸೇರಿಸಿದ್ದೆ. ಮತ್ತೆ ದಲಿತ ಸಂಘರ್ಷ ಸಮಿತಿ ಸ್ಥಾಪಿಸಿದೆವು ಎಂಬ ನಿಮ್ಮ ಮಾತಿನ ಸಂದರ್ಭದಲ್ಲಿ ಗದ್ದರ್ ಮತ್ತು ಸಂಗಡಿಗರು ಎಂಟ್ರಿ ಆಗ್ತಾರೆ, ಹಾಗೆ ಬಿ.ಕೃಷ್ಣಪ್ಪನವರ ಹೆಸರನ್ನ ಪ್ರಸ್ತಾಪ ಮಾಡಿದ್ದೆ ಇದೆಲ್ಲವೂ ನಾನು ಮಾಡಿದ ಅತಿರೇಕ ಅಂತ ನಿಮಗೆ ಅನಿಸಿದ್ದು ಇದೆಯೇ?

ಸಿದ್ಧಲಿಂಗಯ್ಯ: ಇಲ್ಲ ಇಲ್ಲ ಆ ರೀತಿ ಏನೂ ಅನ್ನಿಸಲಿಲ್ಲ. ಬಿ.ಕೃಷ್ಣಪ್ಪನವರು ಹಿರಿಯರು. ಅವರು ಬೆಂಗಳೂರಿಗೆ ಬಂದಾಗ ನನ್ನ ರೂಮಿನಲ್ಲಿ ಇರ್ತಿದ್ರು. ನನ್ನ ಕಾಟ್‌ಮೇಲೆ ಮಲಗತಾ ಇದ್ದರು. ನಾನು ಕೆಲಗಡೆ ಮಲಗತಾ ಇದ್ದೆ ಹಾಸ್ಟೆಲ್‌ನಲ್ಲಿ. ನನಗೆ ಅವರು ಡಿ.ಎಸ್.ಎಸ್. ಕಟ್ಟೋದಕ್ಕೆ ಮೊದಲಿನಿಂದಲೂ ಗೊತ್ತು. ಅವರಿಗೆ ಸವರ್ಣೀಯರಿಂದ ತೊಂದರೆ ಆದಾಗ ನನಗೆ ಹೇಳೋರು ಮತ್ತು ಪತ್ರ ಎಲ್ಲ ಬರೆಯೋರು. ದಲೇಕ ಉದ್ಘಾಟನೆಗೆ ಬಿ.ಬಸವಲಿಂಗಪ್ಪನವರನ್ನ ಕರೆಯೋದಿತ್ತು. ಆವಾಗಲೂ ಕರಕೊಂಡು ಹೋಗಿದ್ದೆ ಅವರನ್ನ. ಆದ್ದರಿಂದ ಕೃಷ್ಣಪ್ಪನವರು ನನಗೆ ತುಂಬ ಆತ್ಮೀಯರು. ನೀವು ನಾಟಕದಲ್ಲಿ ತಂದು ಹೈಲೆಟ್ ಮಾಡಿದ್ದು ತಪ್ಪೇನೂ ಇಲ್ಲ. ಏಕೆಂದರೆ ಹಿರಿಯರು. ನನಗಿಂತಲೂ ಮಹದೇವರಿಗಿಂತಲೂ ತುಂಬ ಹಿರಿಯ, ಒಂಥರಾ ದೊಡ್ಡಾಳು. ಆ ಹಿರಿಯ ಜೀವ ನಮಗಿಂತ ಮೊದಲಿಂದಲೂ ಹೀಗೆ ತಲೆಕೆಡಿಸಿಕೊಂಡು ಹೋರಾಟದಲ್ಲಿ ಅವರದೇ ಮಾರ್ಗದಲ್ಲಿ ತೊಡಗಿದ್ದರಲ್ಲ,



ಅದು ದೊಡ್ಡದು. ಬಹಳ ಹಿಂದೆನೇ ಭದ್ರಾವತೀಲಿ ದಲಿತ ಸಂಘರ್ಷ ಸಮಿತಿ ಅಂತ ಮಾಡಿಕೊಂಡಿದ್ದರು. ಅದೊಂದು ತರಹಾ ಲೋಕಲ್ ಆರ್ಗನೈಜೇಷನ್. ನಾವೆಲ್ಲ ಸೇರಿ ದಲಿತ ಚಳುವಳಿ ಕಟ್ಟಿದಾಗ ‘ದಲೇಕ’ ಅಂತ, ‘ದಲಿತ ಲೇಖಕ ಕಲಾವಿದರ ಒಕ್ಕೂಟ’ ಅಂತ ಕಟ್ಟಿದ್ವಿ. ನಂತರ ನಾವೇನು ಮಾಡಿದ್ವು, 1977ಕ್ಕೆ ಈ ದಲಿತ ಸಂಘರ್ಷ ಸಮಿತಿ ಅನ್ನೋ ಹೆಸರೇ ಇಟ್ಟುಕೊಂಡುಬಿಡೋಣ ಅಂತ ಹಂಗೆ ಮಾಡಿದೆವು. ಕೃಷ್ಣಪ್ಪ ಸಮಾಜವಾದಿ, ಜೆ.ಪಿ. ಚಳುವಳೀಲಿ ಇದ್ದರು. ಭದ್ರಾವತೀಲಿ ಅಂತಹ ಸಂಘಟನೆಯನ್ನು ಕಟ್ಟಬೇಕು ಅಂತ ಕಟ್ಟಿದ್ದರು. ಅಂದರೆ ಈ ಜೆ.ಪಿ. ಮೂವ್‌ಮೆಂಟು ಇವರಮೇಲೆ ಒಂಥರಾ ಪ್ರಭಾವ ಬೀರಿತ್ತು. ಬೂಸಾ ಚಳುವಳೀಲಿ ಕೃಷ್ಣಪ್ಪ ಮತ್ತು ದೇವನೂರು ಇರಲಿಲ್ಲ. ನಾನೇ ಸಂಘಟನೆ ಚಳುವಳಿಯನ್ನು ರೂಪಿಸತಿದ್ದೆ. ಆ ಬೂಸಾ ಚಳುವಳೀಲಿ, ರಾಜ್ಯಾದ್ಯಂತ ದಲಿತರ ಮೇಲೆ ದೌರ್ಜನ್ಯ ನಡೆದಾಗ ನಾವು ಮೂರು ಜನಸೇರಿ ದಲೇಕ ಹೆಸರು ಚೆನ್ನಾಗಿಲ್ಲ, ಈ ಕೃಷ್ಣಪ್ಪನವರು ಕಟ್ಟಿದ ಸಂಘಟನೆ ಹೆಸರು ಚೆನ್ನಾಗಿದೆ ಅಂತ ಅದನ್ನ ಅಡಾಪ್ಟ್ ಮಾಡಿಕೊಂಡ್ವಿ. ಆಮೇಲೆ ಎಷ್ಟೋ ವರ್ಷ ನಾವು ಒಟ್ಟಿಗೆ ಕೆಲಸ ಮಾಡಿದೆವು. ಅವರ ತ್ಯಾಗ, ಅವರ ಹೋರಾಟ, ಅದರ ಬೆಲೆ ಗೊತ್ತು ನನಗೆ. ಅದರಿಂದ ಅವರ ಹೆಸರು ಸ್ವಲ್ಪ ಹೈಲೆಟ್ ಆಗಿದ್ದು ನನಗೆ ಸಂತೋಷನೇ. ಆಮೇಲೆ ನೀವು ಗದ್ದರ್‌ನ ನಾಟಕದಲ್ಲಿ ತಂದಿದ್ದರಿಂದ ನಾಟಕದ ಕೊನೆಯ ಮೂವ್‌ಮೆಂಟ್‌ನಲ್ಲಿ ಒಂದು ಥರ ಇಂಟೆನ್ಸಿಟಿ ಬಂತು. ಆಮೇಲೆ ನೀವು ಬಳಸಿದ್ದ ಬೇರೆ ಬೇರೆ ಹಾಡುಗಳು ಬೇರೆ ಬೇರೆ ಅರ್ಥ, ಧ್ವನಿ ವಿಸ್ತಾರ ತಂದು ಕೊಟ್ವು. ನೀವು ಡಿ.ಎಸ್.ಎಸ್. ಬಾವುಟ ತರೋದು, ಆ ಹಳೆಯ ಕ್ರಾಂತಿಗೀತೆಗಳನ್ನ ನೆನಪು ಮಾಡ್ಕೊಳ್ಳೋದು ನೋಡಿ ಜನ ಥ್ರಿಲ್ಲಾಗಿ ಬಿಡ್ತಾರೆ, ಆ ಸಂಘಟನೆಯಲ್ಲಿದ್ದವರು ಒಂಥರಾ ಆ ಕಾಲಕ್ಕೆ ಹೊರಟ್ಹೋಗಿ ಬಿಡೋರು. ಎಷ್ಟೋ ಜನ ಕಣ್ಣೀರು ಹಾಕಿದ್ದನ್ನ ನಾನೇ ನೋಡಿದ್ದೀನಿ. ಆ ಕಾಲ ಬರಬೇಕಪ್ಪ ಹೇಗೆ ಹೋರಾಟ ಮಾಡಿದೆವು ನಾವೆಲ್ಲ ಅಂತ ಅಂದುಕೊಳ್ಳೋಹಂಗೆ ಆಗತಿತ್ತು. ಆಮೇಲೆ ಹಾಡುಗಳನ್ನು ಪ್ರೇಕ್ಷಕರು ಮುಂದುವರಿಸಿ ಹಾಡ್ತಿದ್ರು. ಮತ್ತೆ ನೀವು ಬಾವುಟ ಎತ್ತಿ ಹಿಡಿದಾಗ ಜನರ ಕ್ಲಾಪ್ಸ್ ನೋಡ್ಬೇಕು. ನೀವು ಸೇರಿಸಿದ ಇಂಥ ಎಷ್ಟೋ ಇಂಥ ಅಂಶಗಳಿಂದ ನನ್ನ ಕೃತಿಗಾಗಲಿ ನಾಟಕಕ್ಕಾಗಲಿ ಧಕ್ಕೆ ಆಗಲಿಲ್ಲ. ನೀವು ಕಿ.ರಂ.ನ ಸ್ಟೇಜ್ ಮೇಲೆ ತಂದಿದ್ದು ಸಹ ಚೆನ್ನಾಗಿತ್ತು. ಅದರಿಂದ ನಾಟಕಕ್ಕೆ ಬಲ ಬಂತು. ಕಿ.ರಂ. ಹೆಚ್.ಎನ್.ಕಲಾಕ್ಷೇತ್ರದಲ್ಲಿ ನಾಟಕ ನೋಡತಾ ಇದ್ದಾಗ ಅವರ ಪಾತ್ರ ಬಂತಲ್ಲ ತುಂಬಾ ಸಂತೋಷಪಟ್ಟುಬಿಟ್ರು. ನಿಮ್ಮ ಬಗ್ಗೆ ಬಹಳ ಅಭಿಮಾನ ಇತ್ತು ಅವರಿಗೆ.

ಗಣೇಶ: ಊರುಕೇರಿ ನಾಟಕ ಮಾಡಿದ ನಾನಾಗಲಿ ನಮ್ಮ ನಟರಾಗಲಿ ಅದನ್ನ ಸರಿಯಾಗಿ ಓದಿಕೊಂಡಿದ್ವಿ ಅಂತ ಅನ್ನಿಸ್ತಾ?

ಸಿದ್ಧಲಿಂಗಯ್ಯ: ಖಂಡಿತ, ಚೆನ್ನಾಗಿ ಓದಿದ್ದೀರಿ ಅಂತ ಅನ್ನಿಸಿದೆ ನನಗೆ.

ಬರೆದಿದ್ದು ಸಾರ್ಥಕವಾಯಿತು ಅಂತ ಅನ್ನಿಸಿದೆ. ನಟರ ಪ್ರತಿಭಾಸಾಮರ್ಥ್ಯ ನೀವು ಚೆನ್ನಾಗಿ ಬಳಸಿದ್ದೀರಿ. ಪ್ರತಿಯೊಬ್ಬರೂ ಅನೇಕ ರೀತಿಯ ಪಾತ್ರಗಳನ್ನು ಮಾಡಿದರೂ ಎಲ್ಲ ಪಾತ್ರಗಳಿಗೂ ಜೀವ ತುಂಬಿದಾರೆ, ಎಲ್ಲರೂ ಅಲ್ಲಿ ಜೀವಂತವಾಗಿ ಬರ್ತಾರೆ. ನನಗೆ ಬಹಳ ಸಂತೋಷವಾಯಿತು. ನಿಮ್ಮ ಬಗ್ಗೆ ಬಹಳ ಅಭಿಮಾನ ಇದೆ. ನಿಮ್ಮ ಪ್ರತಿಭೆ ಬಗ್ಗೆ ಭರವಸೇನೂ ಇದೆ. ಇತ್ತೀಚೆಗೆ ಹಂಸಲೇಖರವರು ಬರೀ ನನ್ನ ಪದ್ಯಗಳನ್ನು ಇಟ್ಟುಕೊಂಡು 'ಇಕ್ರಲಾ ವದೀರ್ಲಾ' ಅಂತ ನಾಟಕ ಮಾಡಿ ಬೆಂಗಳೂರು ವಿಶ್ವವಿದ್ಯಾನಿಲಯದ ಮುಂದೆ ಪ್ರದರ್ಶನ ಕೊಟ್ಟರು. ಅದೂ ಸಹ ತುಂಬಾ ಚೆನ್ನಾಗಿತ್ತು. ತುಂಬಾ ಜನ ಸೇರಿದ್ದರು. ಮೆಚ್ಚಿಕೊಂಡರು.

ಗಣೇಶ: ನಿಮ್ಮ ಬರವಣಿಗೆ ಮತ್ತು ರಂಗಭೂಮಿಗೆ ಸಂಬಂಧಿಸಿದಂತೆ ಬಹಳ ಮುಖ್ಯವಾದ ವಿಷಯಗಳನ್ನ ನನ್ನೊಡನೆ ಹಂಚಿಕೊಂಡಿದ್ದೀರಿ. ತುಂಬಾ ಥ್ಯಾಂಕ್ಸ್ ಸರ್.

**ತಿದ್ದುಪಡಿ:**

ನೀನಾಸಮ್ ಮಾತುಕತೆಯ ಸಂಚಿಕೆ 106 (ಮೇ 2013)ರಲ್ಲಿ ಪ್ರಕಟವಾದ 'ಶಾಕುಂತಲದಲ್ಲಿ ಸೌಂದರ್ಯಾನುಭೂತಿಯ ಸಪ್ತಪದಿ' ಎಂಬ ಲೇಖನದಲ್ಲಿ 'ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್' ಎಂಬ ಪ್ರಸಿದ್ಧ ಶ್ಲೋಕ ರಾಮಾಯಣದ್ದು ಎಂದು ತಪ್ಪಾಗಿ ಬರೆಯಲಾಗಿತ್ತು (ಪುಟ 25). ಆ ಶ್ಲೋಕ ಮನುಸ್ಮೃತಿಯದು, ತಪ್ಪಿಗಾಗಿ ವಿಷಾದಿಸುತ್ತೇನೆ ಎಂದು ಲೇಖಕರಾದ ಶ್ರೀ ಎಚ್.ಆರ್. ಅಮರನಾಥ ಅವರು ತಿಳಿಸಿದ್ದಾರೆ.



**ನೀನಾಸಮ್ ಸಂಸ್ಕೃತಿ ಶಿಬಿರ 2013:**

ಅಕ್ಟೋಬರ್ 13ರಿಂದ 19ರವರೆಗೆ, 'ಸಂಪ್ರದಾಯದೊಂದಿಗೆ ಸಹಬಾಳ್ವೆ' ಎಂಬ ವಿಷಯವನ್ನು ಕೇಂದ್ರೀಕರಿಸಿಕೊಂಡು, ಈ ಸಾಲಿನ ಸಂಸ್ಕೃತಿ ಶಿಬಿರವು ನಡೆಯಿತು. ಶಿಬಿರ ನಿರ್ದೇಶಕ ಡಾ.ಯು.ಆರ್. ಅನಂತಮೂರ್ತಿಯವರ ಉಪನ್ಯಾಸದೊಂದಿಗೆ ಶಿಬಿರದ ಕಲಾಪಗಳು ಪ್ರಾರಂಭವಾದವು. ನಮ್ಮ ಬದುಕು, ಕಲೆ, ವಿಮರ್ಶೆ ಮುಂತಾದ ನೆಲೆಗಳಲ್ಲಿ ಸಂಪ್ರದಾಯ–ಪರಂಪರೆಗಳ ವಿವಿಧ ಬಗೆ, ಸಮಸ್ಯೆ, ಮುಖಾಮುಖಿಗಳ ಕುರಿತು ಉಪನ್ಯಾಸ–ಚರ್ಚೆ–ಪ್ರಾತ್ಯಕ್ಷಿಕೆಗಳು ನಡೆದವು. ಶ್ರೀಯುತರಾದ ಸಮೀಕ್ ಬಂದೋಪಾಧ್ಯಾಯ, ಡಾ. ಗಿರಡ್ಡಿ ಗೋವಿಂದರಾಜ, ಶಿವ ವಿಶ್ವನಾಥನ್, ಮನು ಚಕ್ರವರ್ತಿ, ಸುಂದರ ಸಾರುಕ್ಕೈ, ಎಚ್.ಎಸ್. ವೆಂಕಟೇಶಮೂರ್ತಿ, ಲಕ್ಷ್ಮೀಶ ತೋಳ್ಪಾಡಿ, ಪೌಲಾ ರಿಚ್‌ಮನ್, ಗಣೇಶ ದೇವಿ, ಕೃಷ್ಣಮೂರ್ತಿ ಹನೂರು, ಗೋಪಾಲ ಗುರು, ಸುದೇಷ್ಣಾ ಬ್ಯಾನರ್ಜಿ, ರಜನಿ ಭಕ್ಷಿ, ಉಜರಮ್ಮ, ಪಾದೇಕಲ್ಲು ವಿಷ್ಣು ಭಟ್ಟ, ಮೋಹನದಾಸ ಪೈ, ರಘುರಾಮ ರಾಜು, ಎಂ.ಎಸ್. ಶ್ರೀರಾಮ್, ವಿವೇಕ ಶಾನಭಾಗ, ರವಿಕುಮಾರ್ ಕಾಶಿ, ಆರ್ಶಿಯಾ ಸತ್ತಾರ್, ಸಂಹಿತಾ ಆರ್ನಿ, ಅಜಯ್ ಜೋಶಿ, ಸುನಿಲ್ ಶಾನಭಾಗ್, ರಾಮಕೃಷ್ಣನ್‌ಮೂರ್ತಿ ಮೊದಲಾದವರು ವಿವಿಧ ಗೋಷ್ಠಿಗಳನ್ನು ನಡೆಸಿಕೊಟ್ಟರು. ಈ ಗೋಷ್ಠಿಗಳಿಗೆ ಸಂಬಂಧಿಸಿ, ಅಪರಾಹ್ನ ಕಿರುಪ್ರದರ್ಶನಗಳನ್ನು ಏರ್ಪಡಿಸಲಾಗಿತ್ತು. ಶ್ರೀಮತಿ ಸಮುದ್ಯತಾ ವೆಂಕಟರಾಮು, ಶೆಡ್ತಿಕೆರೆ ಮತ್ತು ವಿನಾಯಕ ಎಂ.ಎಸ್. ಇವರಿಂದ ಗಮಕ–ಕಾವ್ಯವಾಚನ: ಕುವೆಂಪು ಅವರ 'ಶ್ರೀರಾಮಾಯಣದರ್ಶನಂ'ದಲ್ಲಿ 'ವಾಲಿಮೋಕ್ಷ', ಶ್ರೀಗುಡ್ಡಪ್ಪ ಜೋಗಿ ಅವರಿಂದ ಜೋಗೇರಾಟ, ಗಣೇಶ ಎಂ. ಮತ್ತು ಮಂಜು ಕೊಡಗು ಇವರಿಂದ 'ಆಂಗ್ಲ ನೌಕಾ ಕ್ಯಾಪ್ಟನ್' ಮಾಸ್ತಿ ಕಥೆಯ ಪ್ರಸ್ತುತಿ, ಡಾ.ಎಂ.ಪ್ರಭಾಕರ ಜೋಶಿ, ಪ್ರೊ. ಉಮಾಕಾಂತ ಭಟ್ಟ ತಂಡದವರಿಂದ ಯಕ್ಷಗಾನ ತಾಳಮದ್ದಲೆ 'ಕರ್ಣಭೇದನ', ಅಭಿಜ್ಞಾನ, ಬೆಂಗಳೂರು ತಂಡದವರಿಂದ ನೃತ್ಯನಾಟಕ 'ಪುರುಷಸೂಕ್ತ' (ಪಠ್ಯ: ಡಾ.ಜೆ.ಶ್ರೀನಿವಾಸಮೂರ್ತಿ, ನಿ: ಜೋಸೆಫ್) ಮುಂತಾದವು ಹೀಗೆ ನಡೆದ ಕಿರುಪ್ರದರ್ಶನಗಳು. ಪ್ರತಿದಿನ ಸಂಜೆ ಸಾಂಸ್ಕೃತಿಕ ಉತ್ಸವ ನಡೆಯಿತು. ದಿನಾಂಕ 13 ಮತ್ತು 14ರಂದು ನೀನಾಸಮ್ ತಿರುಗಾಟ 2013ರ ನಾಟಕಗಳು, ಕ್ರಮವಾಗಿ 'ಸೀತಾಸ್ವಯಂವರ' (ಎಂ.ಎಲ್. ಶ್ರೀಕಂಠೇಶಗೌಡರ ನಾಟಕ; ನಿ: ಮಂಜುನಾಥ ಎಲ್. ಬಡಿಗೇರ) ಮತ್ತು 'ಗಾಂಧಿ ವಿರುದ್ಧ ಗಾಂಧಿ' (ಮರಾಠಿಯಲ್ಲಿ: ಅಜಿತ್ ದಳವಿ, ಕನ್ನಡಕ್ಕೆ: ಡಿ.ಎಸ್. ಚೌಗಲೆ; ನಿ: ಗಣೇಶ ಎಂ.), ದಿ. 15ರಂದು 'ಜುಗಾರಿ ಕ್ರಾಸ್' (ಪೂರ್ಣಚಂದ್ರತೇಜಸ್ವಿಯವರ ಕಾದಂಬರಿ ಆಧರಿಸಿ, ನಿ: ನಟರಾಜ ಹೊನ್ನವಳ್ಳಿ), ದಿ. 16ರಂದು 'ಸ್ಟೋರೀಸ್ ಇನ್ ಎ ಸಾಂಗ್' (ಅರ್ಪಣಾ ಮುಂಬಯಿ ತಂಡದ ನಾಟಕ; ನಿ: ಸುನಿಲ್ ಶಾನಭಾಗ್), ದಿ.17ರಂದು ಪಂ. ಶೌನಕ್ ಅಭಿಷೇಕಿಯವರಿಂದ ಹಿಂದೂಸ್ತಾನಿ ಗಾಯನ, ದಿ. 18ರಂದು ವಿದ್ವಾನ್ ರಾಮಕೃಷ್ಣನ್‌ಮೂರ್ತಿಯವರಿಂದ ಕರ್ಣಾಟಕಿ ಸಂಗೀತ ಮತ್ತು ದಿ. 19ರಂದು ಅದೃಶ ಒಡಿಸ್ಸಿ ಎನ್ಸೆಂಬಲ್‌ನ ವಿದುಷೀ ಸರಿತಾ ಮಿಶ್ರಾ ಮತ್ತು ತಂಡದವರಿಂದ ಒಡಿಸ್ಸೀ ನೃತ್ಯ – ಇವು ಈ ಉತ್ಸವದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು.

**ಮಾತುಕತೆ ೧೦೮**

ನೀನಾಸಮ್ ಹೆಗ್ಗೋಡು (ಸಾಗರ) ಕರ್ನಾಟಕ ೫೭೭ ೪೧೭

ದೂರವಾಣಿ: ೦೮೧೮೩-೨೬೫೬೪೬

www.ninasam.org

ಖಾಸಗಿ ಪ್ರಸಾರದ ತ್ರೈಮಾಸಿಕ ಸಂಪರ್ಕಪತ್ರ

(ಫೆಬ್ರವರಿ-ಮೇ-ಆಗಸ್ಟ್-ನವೆಂಬರ್)

ಸಂಪಾದಕ: ಬಿ.ಆರ್. ವೆಂಕಟರಮಣ ಐತಾಳ

ಸಂಪಾದಕ ಮಂಡಳಿ: ಟಿ.ಪಿ.ಅಶೋಕ, ಜಶವಂತ ಜಾಧವ್

ವಾರ್ಷಿಕ ವರ್ಗಣಿ: ಎಂಬತ್ತು ರೂಪಾಯಿ

ಅಕ್ಷರ ಜೋಡಣೆ: ಅಕ್ಷರ ಗಣಕ, ಹೆಗ್ಗೋಡು,

ಮುದ್ರಣ: ಸ್ವಾಪ್ ಪ್ರಿಂಟರ್ಸ್, ಬೆಂಗಳೂರು

**ನವೆಂಬರ್ ೨೦೧೩ ವರ್ಷ ಇಪ್ಪತ್ತೇಳು ಸಂಚಿಕೆ ನಾಲ್ಕು**


೧. **ಸಿ.ಎನ್. ರಾಮಚಂದ್ರನ್ ಅವರ 'ಆಖ್ಯಾನ-ವ್ಯಾಖ್ಯಾನ'**
ಟಿ.ಪಿ. ಅಶೋಕ ಪುಟ ೧

೨. **ನಮ್ಮ ನಡುವಿನ ಸಾಕ್ಷಿಪ್ರಜ್ಞೆ**
ಮನು ಚಕ್ರವರ್ತಿ ಪುಟ ೮

೩. **'ಕವಿ ವಾಸ್ತವದಲ್ಲಿ ಬೇರು ಬಿಟ್ಟಿರಬೇಕು'**
**ಡಾ. ಸಿದ್ಧಲಿಂಗಯ್ಯನವರ ಸಂದರ್ಶನ**
ಗಣೇಶ ಎಂ. ಪುಟ ೨೨

೪. **ನೀನಾಸಮ್ ಸಂಸ್ಕೃತಿ ಶಿಬಿರ ೨೦೧೩** ಪುಟ ೪೮


**MAATHUKATHE** NOV. 2013 (YEAR 27 ISSUE 4)
NINASAM QUARTERLY NEWSLETTER
PUBLISHED EVERY FEB;MAY;AUG;NOV.
ANNUAL SUBSCRIPTION: Rs.80 (EIGHTY ONLY)
FOR PRIVATE CIRCULATION
**NINASAM HEGGODU (SAGAR) KARNATAKA 577 417**

ನೀನಾಸಮ್ ಮಾತುಕತೆಯ ಈಚಿನ ಸಂಚಿಕೆಗಳನ್ನು ಈ ಕೆಳಕಂಡ
ಅಂತರ್ಜಾಲ ತಾಣದಲ್ಲಿಯೂ ಪಡೆಯಬಹುದು:
**www.ninasam.org**

← second cover

Third cover →

**ಅಕ್ಷರ ಪ್ರಕಾಶನ**

ಹೆಗ್ಗೋಡು (ಸಾಗರ) ಕರ್ನಾಟಕ - ೫೭೭ ೪೧೭

**ಈಚಿನ ಪ್ರಕಟಣೆಗಳು**

**ಸುರಗಿ** (ಯು.ಆರ್. ಅನಂತಮೂರ್ತಿಯವರ ಆತ್ಮಕಥನ - ನಿರೂಪಣೆ ಮತ್ತು ಸಂಯೋಜನೆ: ಜ.ನಾ. ತೇಜಶ್ರೀ) ರೂ. ೨೫೦

**ಫಾಚರ್ ಫೋಚರ್** (ಕಥಾ ಸಂಕಲನ - ವಿವೇಕ ಶಾನಭಾಗ) ರೂ. ೯೫

**ಭಾರತ ಯಾತ್ರೆ** (ನಾಟಕ - ಅಕ್ಷರ ಕೆ.ವಿ.) ರೂ. ೭೦

**ಶಕ್ತಿಶಾರದೆಯ ಮೇಳ** (ಆಧುನಿಕ ಕನ್ನಡ ಕಾವ್ಯದ ಅಧ್ಯಯನ - ಮರುಮುದ್ರಣ - ಡಿ.ಆರ್. ನಾಗರಾಜ್) ರೂ. ೨೨೦

**ಸಮ್ಮುಖದಲ್ಲಿ ಸ್ವಗತ** (ಸಮಾಜ-ಸಂಸ್ಕೃತಿ ಕುರಿತ ಕಿರುಬರಹಗಳು - ಮರುಮುದ್ರಣ - ಅಕ್ಷರ ಕೆ.ವಿ.) ರೂ. ೧೧೫

**ಚೂರಿಕಟ್ಟೆ ಅರ್ಥಾತ್ ಕಲ್ಯಾಣಪುರ** (ನಾಟಕ - ಮರುಮುದ್ರಣ - ಅಕ್ಷರ ಕೆ.ವಿ.) ರೂ. ೬೦

**ಕಥನ ಪ್ರೀತಿ** (ಒಂದು ನೂರು ಕನ್ನಡ ಸಣ್ಣಕತೆಗಳ ವಿಶ್ಲೇಷಣೆ - ಟಿ.ಪಿ. ಅಶೋಕ) ರೂ. ೨೬೦

**ಕಾವ್ಯ ಪ್ರೀತಿ** (ಕನ್ನಡ ಕವಿತೆಗಳನ್ನು ಕುರಿತ ೫೦ ಲೇಖನಗಳ ಸಂಕಲನ - ಟಿ.ಪಿ. ಅಶೋಕ) ರೂ. ೧೫೫

**ಮಾಗಿಕಾಲದ ಸಾಲುಗಳು** (ಕವಿತೆಗಳು - ಜ.ನಾ. ತೇಜಶ್ರೀ) ರೂ. ೫೦

**ವೈದೇಹಿ ಕಥನ** (ವಿಮರ್ಶೆಯ ಬರಹಗಳು - ಟಿ.ಪಿ. ಅಶೋಕ) ರೂ. ೧೧೦

**ದಶರೂಪಕ** (ಮೂಲ ಮತ್ತು ಕನ್ನಡ ಅನುವಾದ - ಮರು ಮುದ್ರಣ - ಕೆ.ವಿ. ಸುಬ್ಬಣ್ಣ) ರೂ. ೨೬೦

**ಭಾರತೀಯ ತತ್ತ್ವಶಾಸ್ತ್ರ ಪ್ರವೇಶ** (ಮರು ಮುದ್ರಣ - ಡಾ. ಎಂ. ಪ್ರಭಾಕರ ಜೋಷಿ ಮತ್ತು ಪ್ರೊ. ಎಂ.ಎ. ಹೆಗಡೆ) ರೂ. ೨೦೦

**ಅಮೃತ ಮತ್ತು ಗರುಡ** (ವಿಮರ್ಶೆ - ಮರುಮುದ್ರಣ - ಡಿ.ಆರ್. ನಾಗರಾಜ್) ರೂ. ೧೦೦

**ಸಾಹಿತ್ಯ ಕಥನ** (ವಿಮರ್ಶಾಲೇಖನಗಳ ಸಂಗ್ರಹ - ಮರುಮುದ್ರಣ - ಡಿ.ಆರ್. ನಾಗರಾಜ್) ರೂ. ೨೪೦

**ಹೊಸತಾಗಿ ಆರಂಭಗೊಂಡಿರುವ ನಮ್ಮ ಅಂತರ್ಜಾಲದ ಪುಸ್ತಕದಂಗಡಿ**

**www.aksharaprakashana.com**

**ಇಲ್ಲಿಗೆ ಭೇಟಿಕೊಡಿ**